ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

23 ಡಿಸೆಂಬರ್ 2015 ಪುಟ 20 ರೂ. 15/-




ನಾಟಕ
ಮನಸೂರೆಗೊಂಡ
ಮೈಥಿಲಿ



ಅನನ್ಯ ಅನಂತ್

ಕೆಂಪೇಗೌಡ
ವೀರ ಮರಣದ ಕಗ್ಗಂಟು



ಪರಿಷತ್ ಚುನಾವಣೆ

ರಾವಳಿ
ಕಾಂಗ್ರೆಸ್‌ನಲ್ಲಿ ಬಂಡಾಯ

ಧಾರವಾಡ
ದೋಸ್ತಿ ತಂತ್ರ ದುಷ್ಮನಿ ಕುತಂತ್ರ




ನ್ಯಾಷನಲ್ ಹೆರಾಲ್ಡ್ ಎಂಬ ನೊಣ ತಿಂದ ಕೇಸು



ಬೌದ್ಧ ವಿರೋಧಿ ಜಾರಕಿಹೊಳಿ



ಸಮಾಜವಾದಕ್ಕಿಂತ ಕಡಿಮೆ ಏನನ್ನೂ ಒಪ್ಪುವ ಹಾ



ಡಾ.ವಾಸು ಎಚ್.ವಿ.

ಈ ದೇಶದಲ್ಲಿ 30 ವರ್ಷಗಳ ಕೆಳಗೆ ಶೇ.2ಕ್ಕಿಂತ ಕಡಿಮೆ ಮಕ್ಕಳು ಶುಲ್ಕ ತೆತ್ತು ಖಾಸಗಿ ಶಾಲೆಗಳಿಗೆ ಹೋಗುತ್ತಿದ್ದರು. ಅಷ್ಟು ಶುಲ್ಕ ವಿಧಿಸದ ಶಾಲೆಗಳಿಗೆ, ಅಂದರೆ ಸರ್ಕಾರದಿಂದ ಅನುದಾನ ಪಡೆಯುತ್ತಿದ್ದ ಶಾಲೆಗಳಿಗೆ ಹೋಗುತ್ತಿದ್ದ ಮಕ್ಕಳ ಸಂಖ್ಯೆ ಇನ್ನೂ ಸ್ವಲ್ಪ ಹೆಚ್ಚಿತ್ತು, ಅಂದರೆ, ಶಿಕ್ಷಣವನ್ನು ವ್ಯಾಪಾರ ಮಾಡಿಕೊಂಡಿದ್ದ ಸಂಸ್ಥೆಗಳು ಬಹಳ ಕಡಿಮೆ ಇತ್ತು. ಆದರೆ, ಒಟ್ಟಾರೆ ಶಾಲೆಗಳಿಗೆ ದಾಖಲಾಗುತ್ತಿದ್ದ ಮಕ್ಕಳ ಸಂಖ್ಯೆ ಕಡಿಮೆ ಇತ್ತು. ಇದನ್ನು ಗಣನೀಯವಾಗಿ ಏರಿಸುವ ಅಗತ್ಯವಿತ್ತು. ಈ ಸಮಸ್ಯೆಯನ್ನು ಹೊರತುಪಡಿಸಿದರೆ, ಇಡೀ ದೇಶದ ಬಹುತೇಕ ಮಕ್ಕಳು ಸರ್ಕಾರದಿಂದ ಅನುದಾನ ಪಡೆಯುತ್ತಿದ್ದ ಸರ್ಕಾರೀ ಮತ್ತು ಖಾಸಗಿ ಶಾಲೆಗಳಿಗೇ ಹೋಗುತ್ತಿದ್ದರು.

ಹೀಗಿದ್ದೂ, ಇಂದು ದೇಶದ ಎಲ್ಲಾ ಮಕ್ಕಳೂ ಕಡ್ಡಾಯವಾಗಿ – ಕಾನೂನೊಂದರ ಮೂಲಕ ಕಡ್ಡಾಯವಾಗಿ – ಸರ್ಕಾರದಿಂದ ಅನುದಾನ ಪಡೆಯುವ ಶಾಲೆಗಳಿಗೇ ಹೋಗುವ ವ್ಯವಸ್ಥೆ ಬರಬೇಕು ಎಂದು ನಿರೀಕ್ಷಿಸುವುದು ಅವಾಸ್ತವವಾದಿ ನಿಲುವು ಎಂಬುದು ಕೆಲವರ ಅಭಿಪ್ರಾಯ. 4 ವರ್ಷಗಳ ಕೆಳಗೆ ಭಾರತದ ಖ್ಯಾತ ಶಿಕ್ಷಣ ತಜ್ಞ ಡಾ.ಅನಿಲ್ ಸದ್ಗೋಪಾಲ್ ಅವರು 'ಸಮಾನ ಶಾಲೆ' (common school) ಯ ಪರಿಕಲ್ಪನೆಯನ್ನು ವಿವರಿಸುತ್ತಾ ಇದು ನಮ್ಮ ಗುರಿ ಎಂದು ಪ್ರತಿಪಾದಿಸುತ್ತಿದ್ದರು. ಆಗ, ಬಹುಕಾಲ ಕರ್ನಾಟಕದ ಪ್ರಗತಿಪರ ಚಳವಳಿಯಲ್ಲಿ ಸಕ್ರಿಯರಾಗಿದ್ದ ಹಿರಿಯರೊಬ್ಬರು ಅತ್ಯಂತ ವ್ಯಂಗ್ಯವಾಗಿ 'ಅವರು ಕನಸಿನ ಬಗ್ಗೆ ಹೇಳುತ್ತಿದ್ದಾರೆ. ಇಂತಹ ಕನಸುಗಳಿಂದ ಏನೂ ಪ್ರಯೋಜನವಿಲ್ಲ' ಎಂದು ಸುತ್ತಲಿನವರಿಗೆ ಹೇಳುತ್ತಿದ್ದರು. ಅವರ ಪ್ರಕಾರ, ಇಂತಹ ಅವಾಸ್ತವ ಅಂಶಗಳನ್ನು ಬಿತ್ತುವ ಬದಲು, ಈಗ ಸರ್ಕಾರದ ಶಿಕ್ಷಣ ಹಕ್ಕು ಕಾಯ್ದೆಯನ್ವಯ ಶೇ.25ರಷ್ಟು ದುರ್ಬಲ ಸಮುದಾಯದ ಮಕ್ಕಳಿಗೆ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ ಜಾರಿಯಾಗುವಂತೆ ನೋಡಿಕೊಳ್ಳುವುದು ಒಳಿತು.

ಇದು ನೆನಪಾಗಲು ಕಾರಣವಿದೆ. ಇದೀಗ ಅಸಂಘಟಿತ ವಲಯದ ಕಾರ್ಮಿಕ ಸಂಘಟನೆಗಳನ್ನು ಒಟ್ಟಾಗಿಸಿ, ಸರ್ಕಾರವನ್ನು ಕೆಲವು ಸೌಲಭ್ಯಗಳಿಗಾಗಿ ಒತ್ತಾಯಿಸುವ ಪ್ರಯತ್ನವೊಂದು ನಡೆಯುತ್ತಿದೆ. ಅಂತಹದೊಂದು ಸಭೆಯಲ್ಲಿ 'ದೇಶಾದ್ಯಂತ ಇದೇ ಕೆಲಸವನ್ನು ಮಾಡುತ್ತಿರುವ' ಸಂಸ್ಥೆಯ ಪ್ರತಿನಿಧಿಯೊಬ್ಬರು ತಮ್ಮ ವಾದವನ್ನು ಮಂಡಿಸಿದರು. ಅವರ ಪ್ರಕಾರ 'ನಾವೀಗ ವಾಸ್ತವವಾದೀ ಅಂಶಗಳನ್ನು ಮುಂದಿಟ್ಟುಕೊಂಡು ಹೋರಾಡಬೇಕು. ಏಕೆಂದರೆ, ದೇಶದ ರಾಜಕೀಯಾರ್ಥಿಕ ಸನ್ನಿವೇಶವೇ ಬದಲಾಗಿದೆ. ಹೀಗಾಗಿ ಕಾಯಂ ಕಾರ್ಮಿಕರಿಗೆ ನೀಡುತ್ತಿರುವ ಸೌಲಭ್ಯಗಳನ್ನು ಗುತ್ತಿಗೆ, ಅರೆಕಾಲಿಕ, ದಿನಗೂಲಿ ಕಾರ್ಮಿಕರಿಗೂ ನೀಡಬೇಕೆಂದು ಕೇಳುವುದು ಪ್ರಯೋಜನವಿಲ್ಲ, ಅಂತಹುದನ್ನು ಕೊಡುವಂತೆ ಮಾಡುವುದು ಸಾಧ್ಯವೂ ಇಲ್ಲ'. ಇಂತಹ ವಾದಸರಣಿ ವ್ಯಾಪಕವಾಗಿ ಪ್ರಚಲಿತದಲ್ಲಿದೆ. ಯಾವುದು ಅವಾಸ್ತವವೋ ಅದನ್ನು ಪ್ರತಿಪಾದಿಸುವುದರಿಂದ ಏನು ಪ್ರಯೋಜನ ಅಲ್ಲವೇ? ಆದರೆ, ಯಾವುದು ವಾಸ್ತವ?

ಶಿಕ್ಷಣ ಹಕ್ಕು ಕಾಯ್ದೆಯ ಉದಾಹರಣೆಯನ್ನೇ ತೆಗೆದುಕೊಳ್ಳೋಣ. ಕಳೆದ 5 ವರ್ಷಗಳಿಂದ ದೇಶದ ವಿವಿಧ ಭಾಗಗಳಲ್ಲಿ ಅದು ಜಾರಿಗೆ ಬಂದಿದೆ. ಇದರಿಂದ ದೇಶದಲ್ಲಿ ಎಲ್ಲಾ ಮಕ್ಕಳಿಗೂ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಖಾತರಿಗೊಳಿಸಲು ಸಾಧ್ಯವಾಗಿದೆಯೇ? ಅದರ ಘೋಷಿತ ಉದ್ದೇಶ ಜಾರಿಯಾಗಿದೆಯೋ? ಈ ಸಾರಿಯ ವಿಧಾನಸಭಾ ಅಧಿವೇಶನದಲ್ಲಿ ಸ್ವತಃ ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ್ ಅವರು ಒಂದು ಸಂಗತಿಯನ್ನು ಹೇಳಿದರು. 'ಶಿಕ್ಷಣ ಹಕ್ಕು ಕಾಯ್ದೆಯ ಅನ್ವಯ ಶೇ.25ರಷ್ಟು ದುರ್ಬಲ ಸಮುದಾಯದ ಮಕ್ಕಳ ಶಿಕ್ಷಣಕ್ಕಾಗಿ ನಾವು ನೂರಾರು ಕೋಟಿ ರೂ.ಗಳನ್ನು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ನೀಡಬೇಕಾಗಿ ಬಂದಿದೆ. ಅದೇ ಹಣದಿಂದ ನಾವು ಸರ್ಕಾರೀ ಶಾಲೆಗಳನ್ನೇ ಇನ್ನೂ ಚೆನ್ನಾಗಿ ಮಾಡಬಹುದಿತ್ತು, ಈ ಕಾಯ್ದೆಯಿಂದ ಪ್ರಯೋಜನವಾಗಿಲ್ಲ, ಇದನ್ನು ಬದಲಿಸುವ ಬಗ್ಗೆ ಕೇಂದ್ರ ಸರ್ಕಾರವೂ ಆಲೋಚಿಸುತ್ತಿದೆ.' ಈಗಿನ ಕೇಂದ್ರ ಸರ್ಕಾರವು ಶಿಕ್ಷಣ ಹಕ್ಕು ಕಾಯ್ದೆಯನ್ನು ಬದಲಿಸಿದರೆ, ಇನ್ನೂ ಕೆಟ್ಟ ಕಾಯ್ದೆಯನ್ನು ಜಾರಿಗೆ ತರುತ್ತದೆಂಬುದರ ಕುರಿತು ಅನುಮಾನವಿಲ್ಲ.

'ವಾಸ್ತವವಾದೀ' ದೃಷ್ಟಿಕೋನದ ಕುರಿತು ಸ್ವತಃ ಡಾ.ಅನಿಲ್ ಸದ್ಗೋಪಾಲ್ ಹೇಳುವ ಮಾತೊಂದಿದೆ. 'ಇಂದೇ ಸಮಾನ ಶಾಲೆ ಜಾರಿಯಾಗಿಬಿಡುತ್ತದೆಂಬ ಭ್ರಮೆ ನಮಗೆ ಇಲ್ಲ, ಏಕೆಂದರೆ ಇದು ಕೇವಲ ಶಿಕ್ಷಣ ಕ್ಷೇತ್ರದ ಪ್ರಶ್ನೆಯಲ್ಲ, ನಮ್ಮಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಖಾಸಗೀಕರಣ ಹೆಚ್ಚಾಗುತ್ತಿದೆ. ಜನಸಾಮಾನ್ಯರ ಒಳಿತಿನ ದೃಷ್ಟಿಕೋನದಿಂದ ಸರ್ಕಾರಗಳು ಯಾವ ನೀತಿಯನ್ನೂ ರೂಪಿಸುತ್ತಿಲ್ಲ. ಆದರೆ, ಸಮಾನ ಶಾಲೆಯ ಖಚಿತ ಗುರಿಯನ್ನು ಇಟ್ಟುಕೊಳ್ಳದಿದ್ದರೆ ನಾವು ಸೋಲಲನ್ನಪ್ಪುತ್ತೇವೆ. ದೇಶದ ಸಮಸ್ತ ಮಕ್ಕಳೂ ಕಾನೂನಿನ ಪ್ರಕಾರ ಕಡ್ಡಾಯವಾಗಿ ಸಂಪೂರ್ಣ ಸರ್ಕಾರೀ ಅನುದಾನದಿಂದಲೇ ನಡೆಯುವ, ಪೋಷಕರು ಮತ್ತು ಶಿಕ್ಷಕರ ಸಂಘವೇ ನಡೆಸುವ ನೆರೆಹೊರೆ ತತ್ವವನ್ನಾಧರಿಸಿದ ಸಮಾನ ಶಾಲೆಗೇ ಹೋಗಬೇಕು. ಆಗ ಮಾತ್ರ ನಮ್ಮ ಶಿಕ್ಷಣ ವ್ಯವಸ್ಥೆಯ ಸಮಗ್ರ ಬದಲಾವಣೆಗೆ ಮತ್ತು ಆ ಮೂಲಕ ಸಮಾಜದ ಸಮಗ್ರ ಬದಲಾವಣೆಗೆ ಬೇಕಾದ ಭದ್ರ ತಳಹದಿಯನ್ನು ಹಾಕಿಕೊಟ್ಟಂತಾಗುತ್ತದೆ. ಆದರೆ ಇದು ಈಗಲೇ ಸಾಧ್ಯವಿಲ್ಲ. ಸಮಾನ ಶಾಲೆಯ ಸುದೀರ್ಘ ಗುರಿಯನ್ನು ನಾವು ನೂರು ಅಥವಾ ಸಾವಿರ ಸಣ್ಣಸಣ್ಣ ಒತ್ತಾಯಗಳಾಗಿ, ಅಂಶಗಳಾಗಿ ಒಡೆದುಕೊಳ್ಳಬೇಕು. ಅವುಗಳನ್ನು ಸದ್ಯದ ಅಗತ್ಯಗಳಿಗೆ ತಕ್ಕಂತೆ ಮುಂದಿಟ್ಟು, ಹಂತಹಂತವಾಗಿ ಹೋರಾಟ ರೂಪಿಸಬೇಕು. ನಮ್ಮ ಸುದೀರ್ಘ ಗುರಿಯನ್ನು ಸಾಧಿಸುವ ನಿಟ್ಟಿನಲ್ಲಿ ಪ್ರತಿ ಸಕಾರಾತ್ಮಕ ಹೆಜ್ಜೆಗಾಗಿ ಒತ್ತಾಯಿಸಬೇಕು. ಅದನ್ನು ಹಿಂದಕ್ಕೆ ತೆಗೆದುಕೊಂಡು ಹೋಗುವ ಪ್ರತಿ ಹೆಜ್ಜೆಯನ್ನು ಪ್ರತಿರೋಧಿಸಬೇಕು.'

ನಮ್ಮ ಗುರಿ ಸಮಾಜವಾದವೇ. ಅದಕ್ಕಿಂತ ಯಾವುದನ್ನೂ ನಾವು ಒಪ್ಪುವುದು ಸಾಧ್ಯವಿಲ್ಲ. ಒಂದು ಪರ್ಯಾಯ ಸಮಾಜದ ಕಲ್ಪನೆ ನಮಗೆ ಸ್ಪಷ್ಟವಾಗಬೇಕು. ದೇಶದ ಸಾಮುದಾಯಿಕ ಬದುಕಿನ ಎಲ್ಲಾ ಸಂಗತಿಗಳು ಹೇಗಿರಬೇಕು ಎಂಬುದರ ಬಗ್ಗೆ ನಮಗೊಂದು ಮುನ್ನೋಟವಿರಬೇಕು. ಇಲ್ಲದಿದ್ದರೆ, ಈ ಕ್ಷಣ ನನಗೆ – ಅಂದರೆ ನನ್ನ ಕುಟುಂಬ ಮತ್ತು ನನಗೆ – ಯಾವುದು ಅನುಕೂಲವೋ ಅಷ್ಟು ಸಾಧಿತವಾಗಿಬಿಟ್ಟರೆ ಸಾಕು. ತಕ್ಷಣದ ವೈಯಕ್ತಿಕ ಲಾಭ, ಅನುಕೂಲಗಳೇ ಸಮಷ್ಟಿಯ ಹಕ್ಕೊತ್ತಾಯಗಳನ್ನೂ ನಿರ್ಧರಿಸಿಬಿಡುವ ದುರಂತ ಇಲ್ಲಿಂದ ಆರಂಭವಾಗುತ್ತದೆ. ಉದಾಹರಣೆಗೆ, 'ಅತ್ಯುತ್ತಮವಾದ' ಕೆಲವು ಖಾಸಗಿ ಶಾಲೆಗಳಲ್ಲಿ ದುರ್ಬಲ ಸಮುದಾಯದಲ್ಲೇ ಪ್ರಬಲವಾಗಿರುವ ಕೆಲವರ ಮಕ್ಕಳಿಗೆ ಶೇ.25ರ ಕೋಟಾದಲ್ಲಿ ಒಳ್ಳೆಯ ಶಿಕ್ಷಣ ಸಿಕ್ಕಿಯೂ ಬಿಡಬಹುದು. ಆದರೆ, ಇನ್ನೂ ಕೋಟ್ಯಾಂತರ ಮಕ್ಕಳು ಸರ್ಕಾರೀ ಶಾಲೆಗಳಲ್ಲೇ ಇರುತ್ತಾರಲ್ಲಾ ಅಥವಾ ಕೋಟ್ಯಾಂತರ ಮಕ್ಕಳು ಕೆಟ್ಟ ಖಾಸಗಿ ಶಾಲೆಗಳಲ್ಲೇ ಇರುತ್ತಾರಲ್ಲಾ. ಅವರ ಗತಿಯೇನಾಗಬೇಕು ಎಂದು ಯೋಚಿಸದೇ ಇದ್ದಲ್ಲಿ, ನಮ್ಮ ಉದ್ದೇಶ ವಿಫಲವಾಗುತ್ತದೆ. ಖಾಸಗಿ ಶಾಲೆಗಳಲ್ಲಿ ಶೇ.25ರಷ್ಟು ಮಕ್ಕಳಿಗೆ ಅವಕಾಶ ನೀಡಬೇಕು ಮತ್ತು ಅವರ ಶುಲ್ಕವನ್ನು ಸರ್ಕಾರವೇ ಭರಿಸುತ್ತದೆ ಎಂದರೆ, ಯಶಸ್ವಿನಿ – ಆರ್‌ಎಸ್‌ಬಿವೈ ಇತ್ಯಾದಿ ಯೋಜನೆಗಳ ಮೂಲಕ ಸರ್ಕಾರೀ ಹಣದಿಂದ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ಅವಕಾಶ ಕಲ್ಪಿಸುತ್ತದೆಂದರೆ, ಸರ್ಕಾರೀ ವ್ಯವಸ್ಥೆ ಈಗಾಗಲೇ ಕೆಟ್ಟುಹೋಗಿದೆ ಎಂದು ಸರ್ಕಾರವೇ ಒಪ್ಪಿಕೊಳ್ಳುತ್ತಿದೆ ಎಂದರ್ಥ. ಅಷ್ಟು ಮಾತ್ರವಲ್ಲದೇ, ಇನ್ನು ಮುಂದಕ್ಕೂ ಅದು ಕೆಟ್ಟೇ ಇರುತ್ತದೆ ಎಂತಲೂ ಅರ್ಥ. ಹಾಗಿದ್ದ ಮೇಲೆ ಲಾಭಕೋರ ಖಾಸಗಿಯವರ ಮರ್ಜಿಗೆ ದೇಶದ ಜನಸಾಮಾನ್ಯರ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳನ್ನು ಒಪ್ಪಿಸಿ, ಯಾವ ಸಾಮಾಜಿಕ ನ್ಯಾಯ ಸಾಧಿಸಲು ಸಾಧ್ಯ? ಶೇ.75ರಷ್ಟು ಸಾಮಾನ್ಯರಲ್ಲಿ ಸಾಮಾನ್ಯರೇ ಇರುವ ಈ ದೇಶದಲ್ಲಿ ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಲು ಹೇಗೆ ಸಾಧ್ಯ?

ಇದೇ ಮಾತನ್ನು ಅಸಂಘಟಿತ ವಲಯದ ಕಾರ್ಮಿಕರ ಒತ್ತಾಯವೇನಾಗಿರಬೇಕು ಎಂಬುದಕ್ಕೂ ಅನ್ವಯಿಸಬೇಕು. ದೇಶದ ಸಮಸ್ತ ರೈತಕುಲದ ಸಮಸ್ಯೆಗಳಿಗೆ ಪರಿಹಾರದ ವಿಷಯದಲ್ಲೂ ಅನ್ವಯಿಸಬೇಕು. ಅಂತಿಮವಾಗಿ ರೈತ-ಕಾರ್ಮಿಕರು ಬದುಕಿನ ಭದ್ರತೆ ಹೊಂದಿರಬೇಕು, ತಮ್ಮ ಉತ್ಪನ್ನಗಳಿಂದ ಸಂಗ್ರಹವಾಗುವ ಸಂಪತ್ತಿನಲ್ಲಿ ನ್ಯಾಯಯುತ ಪಾಲು ಪಡೆಯಬೇಕು. ಅದನ್ನು ಖಾತರಿಗೊಳಿಸಲು ಅಳವಡಿಸಬೇಕಾದ ವಿಧಾನ ಯಾವುದು ಎಂಬುದಷ್ಟೇ ಪ್ರಶ್ನೆ. ಆದರೆ, ನಮ್ಮ ದೀರ್ಘಕಾಲದ ಗುರಿ ಸಮಾಜವಾದವೇ. **Nothing short of socialism.**



ದೇಶದ ಅತಿ ದೊಡ್ಡ ಸಮುದಾಯವಾದ ದುಡಿಯುವ ಸಮುದಾಯವು ಅಸಂಘಟಿತವಾಗಿರುವಾಗ, ಕಾಯಂ ಸ್ವರೂಪದ ನೌಕರಿಯೇ ಕಾಣೆಯಾಗುತ್ತಿರುವಾಗ ಇದಕ್ಕೊಂದು ಮಹತ್ವವಿದೆ. ಕೆಲವು ಬೆಂಬಲ ಕ್ರಮಗಳಿಗಾಗಿ ನಾವು ಕೇಳುವುದೆಂದರೆ, ನಮ್ಮ ಹಕ್ಕುಗಳನ್ನು ಕಳೆದುಕೊಂಡು, ಖಾಸಗಿಯವರ ಕೈ ಬಲಪಡಿಸುವ ಅಂಶಗಳಿಗೆ ಮಾತ್ರ ಒತ್ತು ನೀಡುತ್ತಿದ್ದೇವೆಂದರ್ಥ. ಅಸಂಘಟಿತ ವಲಯದ ಕಾರ್ಮಿಕರಿಗೆ ಸರ್ಕಾರವೇ ಕಲ್ಯಾಣ ಮಂಡಳಿ ಸ್ಥಾಪಿಸಬೇಕು; ಅದರ ಮೂಲಕ ಸರ್ಕಾರವೇ ಗುರುತಿನ ಚೀಟಿ ನೀಡಬೇಕು; ಸರ್ಕಾರವೇ ಅವರ ಮಕ್ಕಳಿಗೆ ಸ್ಕಾಲರ್‌ಶಿಪ್ ನೀಡಬೇಕು; ಪಿಂಚಣಿ ನೀಡಬೇಕು; ಆಸ್ಪತ್ರೆ ಸೌಲಭ್ಯ ಕಲ್ಪಿಸಬೇಕು ಇತ್ಯಾದಿ ಒತ್ತಾಯಗಳು ಹಾಲಿ ಜಾರಿಯಲ್ಲಿವೆ. ಸಂಘಟನೆಗಳು ಗುರುತಿನ ಚೀಟಿ ಕೊಡಿಸಲು, ಸ್ಕಾಲರ್‌ಶಿಪ್ ಕ್ಲೇಮುಗಳನ್ನು ಜಾರಿ ಮಾಡಿಸಲು, ಇನ್ನಷ್ಟು ಖಾಸಗಿ ಆಸ್ಪತ್ರೆಗಳನ್ನು ಉಚಿತ ಚಿಕಿತ್ಸೆಯ ಪಟ್ಟಿಯಲ್ಲಿ ಸೇರಿಸಲು ಹೋರಾ... ಕಳೆದುಹೋಗುವಂತೆ ಮಾಡಲಾಗುತ್ತ... ಪುಡಿಗಾಸನ್ನು ಮಾತ್ರ, 'ಇಂತಹ ... ನೀಡುವುದರಿಂದ ಅದರಲ್ಲಿ ಗುರುತಿನ ಚೀಟಿ ... ಎಲ್ಲಾ ಮುಗಿದುಹೋಗುತ್ತದೆ. ಉಳಿದಂತೆ ... ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರಿ... ದಾಟಿಸಲು ಈ 'ಫಲಾನುಭವಿಗಳು' ವಾಹ... ಮಾಡುತ್ತಾರೆ. ಅತ್ಯುತ್ತಮ ಶಿಕ್ಷಣ ಅಥವಾ ... ಸೇವೆ ಈ ಎರಡಕ್ಕೂ ಗ್ಯಾರಂಟಿಯೇನೂ ...

ಅತ್ಯುತ್ತಮವಾದುದಲ್ಲದಿದ್ದರೂ ಘನತೆಯ... ನಡೆಸಲು ಬೇಕಾಗುವಷ್ಟು ಹಣವನ್ನು ಮಾಲಿ... ಪಡಿಸುವುದಿಲ್ಲ. ಕನಿಷ್ಠ ಬದುಕುವ ವ... ಪಾವತಿಸುವುದಿಲ್ಲ. (ಇದೀಗ ಕರ್ನಾಟಕ ಸರ್ಕಾ... ದೊಡ್ಡ ಕ್ರಮವಾದ 'ಕನಿಷ್ಠ ವೇತನವನ್ನು 10,00... ಏರಿಸುವು'ದೂ ಸಹಾ ಬದುಕುವ ... ಖಾತ್ರಿಗೊಳಿಸುವುದಿಲ್ಲ. ಬೆಂಗಳೂರಿನಲ್ಲಿ ... ರಾಜ್ಯದ ಬಹುತೇಕ ಪಟ್ಟಣಗಳಲ್ಲಿ ಸುಸ್ಥಿತಿಯ... ಮನೆಗೂ 3,000 ರೂ. ಬಾಡಿಗೆ... ಉಳಿದ 7,000 ರೂ.ಗಳಲ್ಲಿ ನಾಲ್ಕು... ಬಟ್ಟೆ, ಸಾರಿಗೆ, ಟಿವಿ, ಮೊಬೈ... ಆರೋಗ್ಯಗಳೆಲ್ಲವನ್ನೂ ಪಡೆದುಕೊಳ್ಳಲಾ... ಬದುಕಿರಬೇಕಲ್ಲಾ? ಉತ್ತಮ... ಭ್ರಮೆಯಲ್ಲಾದರೂ ಮಕ್ಕಳನ್ನು ಖಾಸಗಿ ... ಕಳುಹಿಸಬೇಕಲ್ಲಾ? ಅಷ್ಟಕ್ಕೆ ಬೇಕಾದ... ಶಿಕ್ಷಣ ಹಕ್ಕು ಕಾಯ್ದೆ ರೈಲ್ವೇ ಸೀ... ರಾಷ್ಟ್ರೀಯ ಸ್ವಾಸ್ಥ ಬಿಮಾ ಯೋಜನೆಗಳ... ಇದೇ ಜನರ ಹಣದಿಂದಲೇ ಮಾಡುತ್ತ... ಮೇಲೆ ಪಿಂಚಣಿಗೆ ನೀವೇ ಎನ್‌ಪಿಎ... ಎನ್ನುತ್ತದೆ. ಅಂದರೆ, ಇದೇ ದು... ಹಣದಿಂದಲೇ ಸರ್ಕಾರ ಒಂದಷ್ಟು 'ಸಿ... ತಂದು ಹಾಕುತ್ತದೆ. ದುಡಿಸಿಕೊ... ಮಾಡಿಕೊಳ್ಳುವ ಬಂಡವಾಳಿಗರು ... ಲೂಟಿ ಮಾಡುತ್ತಿರುತ್ತಾರೆ.

ಒಂದು ಸುಸಂಘಟಿತ ಕಂಪೆನಿಯಲ್... ಅಲ್ಲದ ಕಾರ್ಮಿಕರು ಬದುಕುವ ವೇತ... ವೇತನ ಪಡೆಯುತ್ತಿದ್ದೂ 'ಬದುಕುತ್ತಿರು... ಇದು ಸಮಾಜವಾದವೂ ಅ... ಬಂಡವಾಳಶಾಹಿಗಳೇ ಸ್ಥಾಪಿಸಿದ ಕಲ್ಯಾ... (Welfare state) ಅಲ್ಲ. ಕನಿಷ್ಠ ವೇ... ಗುರುತಿನ ಚೀಟಿ, ಕನಿಷ್ಠ ಕಲ್ಯಾಣ ಮ... ವೈದ್ಯಕೀಯ ವಿಮೆ ಕನಿಷ್ಠ ತುಟ್ಟಿಭತ್ಯೆ ಇ... ಸೀಮಿತವಾಗುವ ಚಿಂತನೆ ಮತ್ತು ಚಳವ... ಇದಾಗಿರುತ್ತದೆ. ದುಡಿಸಿಕೊಳ್ಳುವ ಮಾಲೀ... ಜವಾಬ್ದಾರರನ್ನಾಗಿ ಮಾಡುವುದು ಮಾತ್ರ ಇ... ಹಾಗಾಗಿಯೇ ಸಮಾಜವಾದಕ್ಕಿಂತ ಕಡಿಮೆ ... ಒಪ್ಪಬಾರದು. ಅಂದರೆ, ಸಮಾಜವಾದ... ಸಾಧ್ಯತೆಯ ಬಗ್ಗೆ ವಿಶ್ವಾಸ, ಸ್ವರೂಪದ ಬಗ್ಗೆ... ಎಲ್ಲಕ್ಕಿಂತ ಮುಖ್ಯವಾಗಿ ಅದು ನಮ್ಮ ... ಅರಿವು ಇದು ಇಲ್ಲದಿದ್ದಲ್ಲಿ, ನಾವು ... ಕನಿಷ್ಠತೆಯಲ್ಲಿ ಕಳೆದು ಹೋಗುತ್ತೇ... ಆಗುತ್ತಿರುವುದು ಅದೇ ಆಗಿದೆ. ಸಮಸ್ತ... ಸಮುದಾಯಗಳಲ್ಲಿ ಸಮಾಜವಾದದ ಅ... ಸಾಧ್ಯತೆಗಳ ಬಗ್ಗೆ ಭರವಸೆಯನ್ನು ಚಿಗುರಿಸುವ... ಯನ್ನು ಅರಿವುಳ್ಳ ಎಲ್ಲಾ ಜನರು ಹೊತ್...


ಮೌಢ್ಯದ ವಿರುದ್ಧ ಸಚಿವ ಜಾರಕಿಹೊಳಿಯ ಹೋರಾಟ



• ಗೌರಿ ಲಂಕೇಶ್
editorlankesh@gmail.com

ದ ಎರಡು ವರ್ಷಗಳಿಂದ ಸಣ್ಣ ಕೈಗಾರಿಕಾ ಮಂತ್ರಿ ಜಾರಕಿಹೊಳಿಯವರು ಸಂವಿಧಾನದ ಶಿಲ್ಪಿ ಬಾಬಾ ಅಂಬೇಡ್ಕರ್ ಅವರ ಪರಿನಿರ್ವಾಣ ದಿನವನ್ನು ಗಿ ಆಚರಿಸುತ್ತಾ ಬಂದಿದ್ದಾರೆ. ಅವರು ಹೋದ ಂತೆ ಈ ವರ್ಷವೂ ಡಿಸೆಂಬರ್ 6ರಂದು ಯ ಸದಾಶಿವನಗರದ ಸ್ಮಶಾನದಲ್ಲಿ ಬೃಹತ್ ಂಕರಣವನ್ನು ಆಯೋಜಿಸಿದ್ದರಲ್ಲದೆ, ಅವತ್ತಿನ ನ್ನೂ ಸ್ಮಶಾನದಲ್ಲೇ ಕಳೆಯುವ ಮೂಲಕ ದೆವ್ವ ಎಂಬುದೆಲ್ಲ ಇಲ್ಲ, ಹಾಗೆಯೇ ದೇವರುದಿಂಡರು ೂ ಇಲ್ಲ ಎಂದು ಜನರಿಗೆ ಮನದಟ್ಟು ಮಾಡಲು ದ್ದಾರೆ. ನಮ್ಮ ಸಮಾಜ ಜ್ಯೋತಿಷ್ಯ ವಾಸ್ತು ಶಾಸ್ತ್ರ ನಂಬಿಕೆಗಳಲ್ಲಿ ಮುಳುಗಿರುವಂತಹ ಇಂದಿನ ದಲ್ಲಿ ಜಾರಕಿಹೊಳಿಯವರ ಪ್ರಯತ್ನ ನಿಜವಾಗಲೂ ರ್ಹವೆ.

ಕಿಹೊಳಿಯವರು ಓರ್ವ ಅಪ್ಪಟ ರಾಜಕಾರಣಿ. ಬೇಕೆಂದರೆ ಅವರಂತಹ ರಾಜಕಾರಣಿಗಳು ತಮ್ಮ ಜನರನ್ನು ಮೆಚ್ಚಿಸುವ ಮೂಲಕವೇ ಚುನಾವಣೆಗಳಲ್ಲಿ ಬೇಕು. ಆ ಕಾರಣಕ್ಕೆ ಹೆಚ್ಚಿನ ರಾಜಕಾರಣಿಗಳು ನಂಬಿಕೆ, ಧಾರ್ಮಿಕ ಆಚರಣೆ ಇತ್ಯಾದಿಗಳ ವಿರುದ್ಧ ಕೊಳ್ಳುವುದಿರಲಿ, ಚಕಾರವನ್ನೂ ಎತ್ತುವುದಿಲ್ಲ. ಯೇ, ಹೋದ ವರ್ಷ ರಮೇಶ್ ಜಿಗಜಿಣಗಿ ಬಿಜೆಪಿಯ ದಲಿತ ಸಂಸದ ತಾನೆ ಗೆದ್ದು ಬಂದಿರುವ ರುವ ಒಂದು ದೇವಸ್ಥಾನವನ್ನು ಪ್ರವೇಶಿಸಲು ದ್ದು? ಅಂದು ಜಿಗಜಿಣಗಿ ಅವರು "ಚುನಾವಣಾ ಸಮಯದಲ್ಲಿ ಇಂತಹದ್ದೆಲ್ಲ ಅನಿವಾರ್ಯ. ನನ್ನ ಕ್ಷೇತ್ರದ ಸಂಖ್ಯಾತರು ದಲಿತರು ದೇಗುಲವನ್ನು



ಕೂಡದು ಎಂದು ನಂಬಿರುವುದರಿಂದ ನಾನು ವವನ್ನು ಪ್ರವೇಶಿಸುವ ಮೂಲಕ ಅವರ ನಂಬಿಕೆಗೆ ಮವುದಿಲ್ಲ" ಎಂಬಂತಹ ಮಾತುಗಳನ್ನಾಡಿದ್ದರು. ಲಿತ ನಾಯಕ, ಸಂಸದ, ಜನಪ್ರತಿನಿಧಿಯೇ ಕರ್ಮಟ ಗಳ ಮೂಢನಂಬಿಕೆಯನ್ನು ಪ್ರಶ್ನಿಸಲು ಹೆದರಿದರೆ, ಮಾನ್ಯ ಜನರು ತಾನೇ ಅದು ಹೇಗೆ ಸಂಪ್ರದಾಯ, ಧಾರ್ಮಿಕ ಆಚರಣೆ ಎಂಬುದನ್ನೆಲ್ಲ ವಿರೋಧಿಸಲು ನಮ್ಮ ಊರುಗಳಲ್ಲಿ ಇಂತಹ ಪರಿಸ್ಥಿತಿ ದಿಂದಲೇ ಹಾಸನ ಜಿಲ್ಲೆಯಲ್ಲಿ ಇತ್ತೀಚೆಗೆ ದೇವಸ್ಥಾನ ಲು ಮುಂದಾದ ದಲಿತ ಮಹಿಳೆಯರ ವಿರುದ್ಧವೇ ಕ ಬಹಿಷ್ಕಾರ ಘೋಷಿಸುವ ಉದ್ಧಟತನ ತ್ತಿರುವುದು. ಇದೇ ವಾರ ಮಹಾರಾಷ್ಟ್ರದಲ್ಲಿ ೊಬ್ಬಳು ಗರ್ಭಗುಡಿಯನ್ನು ಪ್ರವೇಶಿಸಿದ್ದಕ್ಕೆ ಯಿತು ಎಂದು ಹಾಲಿನ ಅಭಿಷೇಕ ಮಾಡಿ 'ಸ್ವಚ್ಛ'ಗೊಳಿಸುವ ಕ್ರಿಯೆ ನಡೆಯಿತು. ತಮಾಷೆಯ ಯಾವುದೆಂದರೆ ಈ ಪ್ರಕರಣ ಕುರಿತು ನಲ್ಲಿ ನಡೆದ ಚರ್ಚೆಯಲ್ಲಿ ಮಿತ್ರರೊಬ್ಬರು "ಅಲ್ಲಾ ಬಂದದ್ದು ಹೋರಿಯಿಂದಲೋ?" ಎಂದು !

ವರ್ಷ ಜಾರಕಿಹೊಳಿಯವರು ತಾವೇ ಮಾನವ ಬಂಧುತ್ವ ವೇದಿಕೆಯ ವತಿಯಿಂದ ವಿಕೆಯಿಂದಲೇ ಸ್ಮಶಾನದಲ್ಲಿ ಕಾರ್ಯಕ್ರಮವನ್ನು ಂಡಿದ್ದರು. ಇಂತಹ ಕಾರ್ಯಕ್ರಮಕ್ಕೆ ಹೆಚ್ಚಿನ ಬರದೇ ಇರಬಹುದು ಎಂಬುದು ಅವರ ಕಾರಣವಾಗಿತ್ತು, ಆದರೆ ಅಂದು ಸಾವಿರಾರು ಜನ ಸೇರಿದರು. ಹಲವು ಲಿಂಗಾಯತ ಮಠಗಳ ರು, ವಿಚಾರವಾದಿಗಳು, ಹೋರಾಟಗಾರರು, ರ ವಿರೋಧಿಗಳು, ಅಧ್ಯಾಪಕರು ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಿಂದ ದಲಿತರು ಮಾಜಿಕ ದಮನಿತ, ತುಳಿತಕ್ಕೊಳಗಾದವರು ಹಾಜರಾದರು. ಸ್ಮಶಾನದಲ್ಲೇ ಕೂತು ಭಾಷಣಗಳನ್ನು, ಸಾಮೂಹಿಕ ಊಟ ಸೇವಿಸಿದರು. ಇದೆಲ್ಲ ಗಾಗ ಅದೇ ಸ್ಮಶಾನದಲ್ಲಿ ಹಲವರ ಪಾರ್ಥೀವ

ಶರೀರಗಳನ್ನು ಹೂಳಲಾಯಿತು ಅಥವಾ ಸುಡಲಾಯಿತು. ಒಟ್ಟಾರೆಯಾಗಿ ಸಾವು ಎಂಬುದು ಬದುಕಿನ ಅಂತ್ಯ ಅದಾದನಂತರ ಪುನರ್‌ಜನ್ಮ ಎಂಬುದಾಗಲಿ, ಪ್ರೇತಾತ್ಮ ಎಂಬುದಾಗಲಿ ಯಾವುದೂ ಇಲ್ಲ ಎಂಬ ಸಂದೇಶವನ್ನು ಸಾರಲಾಯಿತು.

ಜಾರಕಿಹೊಳಿಯವರು ಮೂಢನಂಬಿಕೆಗಳನ್ನು ಸಾರ್ವಜನಿಕವಾಗಿ ವಿರೋಧಿಸಿದ್ದು ಇದೇ ಮೊದಲೇನಲ್ಲ. ಜ್ಯೋತಿಷಿಗಳ ಪ್ರಕಾರ ಗ್ರಹಣದ ಸಂದರ್ಭದಲ್ಲಿ ಯಾರೂ ಏನನ್ನೂ ತಿನ್ನಕೂಡದು, ನೀರನ್ನೂ ಕುಡಿಯಕೂಡದು. ಹಾಗೆ ಮಾಡಿದರೆ ಅನಿಷ್ಟ ಕಟ್ಟಿಟ್ಟ ಭುತ್ತಿ. ಜ್ಯೋತಿಷಿಗಳ ಮಾತನ್ನು ನಂಬುವ ಜನ ಗ್ರಹಣ ಮುಗಿದನಂತರ ಮನೆಯಲ್ಲಿದ್ದ ನೀರನ್ನೆಲ್ಲ ಚೆಲ್ಲಿ, ಹೊಸದಾಗಿ ನೀರನ್ನು ಸಂಗ್ರಹಿಸಿ, ಮನೆಯನ್ನು ಸ್ವಚ್ಛ ಮಾಡುವ ಮೂಲಕ ಗ್ರಹಣದಿಂದಾದ ಕೆಟ್ಟದ್ದನ್ನೆಲ್ಲ ನಿರ್ಮೂಲನೆ ಮಾಡಿದ್ದೇವೆ ಎಂದು ಭಾವಿಸುತ್ತಾರೆ. ಇಂತಹ ನಂಬಿಕೆಯನ್ನು ಸುಳ್ಳು ಮಾಡಲೆಂದು ಹೋದವರ್ಷ ಚಂದ್ರ ಗ್ರಹಣದ ಸಂದರ್ಭದಲ್ಲಿ ಜಾರಕಿಹೊಳಿಯವರು ವಡಪಾವ್ ಮತ್ತು ಚಾ ಸೇವಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಅವತ್ತು ಗ್ರಹಣದ ಸಂದರ್ಭದಲ್ಲಿ ಅವರು ತಮ್ಮ ಹಲವು ಮಿತ್ರರ ಜೊತೆಗೂಡಿ ವಡಪಾವ್ ತಿಂದು, ಚಾ ಕುಡಿಯುವ ಮೂಲಕ ಜ್ಯೋತಿಷಿಗಳದ್ದು ಬರೀ ಬೊಗಳೆ ಎಂಬುದನ್ನು ತೋರಿಸಿದ್ದರು.

ನಮ್ಮ ಸಮಾಜದಲ್ಲಿ ಇರುವ ಇನ್ನೊಂದು ಬಲವಾದ ಮೌಢ್ಯ ಯಾವುದೆಂದರೆ ಅಮಾವಾಸ್ಯೆ ದಿನದಂದು ಕ್ಷೌರ ಮಾಡಿಸಕೂಡದು ಎಂಬುದು. ಅದನ್ನೂ ತೊಡೆದು ಹಾಕಲು ಜಾರಕಿಹೊಳಿಯವರು ಮಹಾಲಯ ಅಮಾವಾಸ್ಯೆಯ ದಿನದಂದೇ ತಾವು ಕ್ಷೌರ ಮಾಡಿಸಿಕೊಳ್ಳುತ್ತಿರುವ ಫೋಟೋ ತೆಗೆದುಕೊಂಡು ಅದನ್ನು ತಮ್ಮ ಫೇಸ್‌ಬುಕ್ ಪೇಜ್‌ನಲ್ಲಿ ಪೋಸ್ಟ್ ಮಾಡಿದ್ದರಲ್ಲದೆ, ವಾಟ್ಸ್‌ಆಪ್ ಮೂಲಕವೂ ಎಲ್ಲರಿಗೆ ರವಾನಿಸಿದ್ದರು.

ನಾಸ್ತಿಕರಾದ ಜಾರಕಿಹೊಳಿಯವರು "ಈ ಜಾತಿ ಮತ್ತು ಕಂದಾಚಾರಗಳನ್ನು ಪುರೋಹಿತಶಾಹಿಗಳು ಜಾರಿಗೆ ತಂದಿರುವುದೇ ಬಹುಸಂಖ್ಯಾತರನ್ನು ಅಜ್ಞಾನದಲ್ಲಿಟ್ಟು ಸುಲಿಯುವುದಕ್ಕೆ ಮತ್ತು ಆ ಮೂಲಕ ತಾವು ಲಾಭದಾಯಕ ವೃತ್ತಿಯನ್ನು ನಡೆಸುವುದಕ್ಕೆ" ಎಂದೇ ಬಲವಾಗಿ ನಂಬಿದ್ದಾರೆ. "ನನಗೆ ಗೊತ್ತು, ಮೌಢ್ಯಗಳನ್ನು ವಿರೋಧಿಸುವುದು ಜೇನುಗೂಡಿಗೆ ಕೈಹಾಕುವುದಕ್ಕೆ ಸಮ ಎಂದು. ಆದರೆ ಎಲ್ಲಿಯತನಕ ಜನ ಇಂತಹ ಮೌಢ್ಯಗಳಿಗೆ ಬಲಿಯಾಗುತ್ತಲೇ ಇರುತ್ತಾರೋ ಅಲ್ಲಿನತನಕ ಅವರು ಅಭಿವೃದ್ಧಿ ಹೊಂದುವುದಿಲ್ಲ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮುಂದೆ ಬರುವುದಿಲ್ಲ. ಧಾರ್ಮಿಕ ದಮನಕ್ಕೊಳಗಾಗಿರುವ ಜನರಲ್ಲಿ ಅರಿವು ಮೂಡಿಸುವ ಸಾಮಾಜಿಕ ಜವಾಬ್ದಾರಿ ನನ್ನ ಮೇಲಿರುವುದರಿಂದ ನಾನು ಇಂತಹ ಯೋಜನೆಗಳನ್ನು ಹಮ್ಮಿಕೊಳ್ಳುತ್ತೇನೆ" ಎನ್ನುತ್ತಾರೆ.

ಸಮಾಜೋದ್ಧಾರದ ಕೆಲಸ ಸುಲಭದ್ದಲ್ಲ ಎಂಬುದು ಜಾರಕಿಹೊಳಿಯವರಿಗೆ ಚೆನ್ನಾಗಿ ಗೊತ್ತು. ಹೋದವರ್ಷ ಅವರು ಸ್ಮಶಾನದಲ್ಲಿ ಮಾಡಿದ ಭಾಷಣದಲ್ಲಿ "ಈ ಹಿಂದೆ ಭಾರತದಲ್ಲಿ ಧರ್ಮದ ಹೆಸರಲ್ಲಿ ನಡೆಯುವ ಆಚರಣೆಗಳನ್ನು ವಿರೋಧಿಸಿದ್ದ ಬೌದ್ಧ ಧರ್ಮವನ್ನೇ ಭಾರತದಿಂದ ಪುರೋಹಿತಶಾಹಿಗಳು ಓಡಿಸಿದ್ದರು. ಹನ್ನೆರಡನೆ ಶತಮಾನದಲ್ಲಿ ಸಮಾನ ಸಮಾಜಕ್ಕೆ ಯತ್ನಿಸಿದ್ದ ಬಸವಣ್ಣ ಕೂಡ ತನ್ನ ಮಂತ್ರಿ ಸ್ಥಾನದಿಂದ ಕೆಳಗಿಳಿಯುವಂತೆ ಅದೇ ಪುರೋಹಿತಶಾಹಿಗಳು ಮಾಡಿದ್ದರು. ನಾನು ಅಧಿಕಾರ ಕಳೆದುಕೊಂಡರೂ ಪರವಾಗಿಲ್ಲ, ನನ್ನ ಜೊತೆ ಯಾರೂ ಬಾರದಿದ್ದರೂ ಪರವಾಗಿಲ್ಲ, ನಾನು ಒನ್ ಮ್ಯಾನ್ ಆರ್ಮಿ ತರಹ ಮೌಢ್ಯಗಳ ವಿರುದ್ಧ ಹೋರಾಡುತ್ತಲೇ ಇರುತ್ತೇನೆ" ಎಂದಿದ್ದರು.

ಮೌಢ್ಯದ ವಿಚಾರಕ್ಕೆ ಬಂದರೆ ಜಾರಕಿಹೊಳಿಯವರು ಎಂದೂ 'ಹೇಳೋದು ಒಂದು, ಮಾಡೋದು ಮತ್ತೊಂದು' ಎಂಬ ತಂತ್ರವನ್ನು ಉಪಯೋಗಿಸಿದವರಲ್ಲ, ಬದಲಾಗಿ ಅವರು ತಮ್ಮ ನಂಬಿಕೆಗಳನ್ನು ತಮ್ಮ ಖಾಸಗಿ ಜೀವನದಲ್ಲೂ ಅನುಸರಿಸಿಕೊಂಡು ಬಂದಿರುವವರು. ಅವರೇ ಹೇಳಿರುವಂತೆ ಅವರು ಮದುವೆಯಾದದ್ದೂ ತಮ್ಮ ಸ್ನೇಹಿತರ ಉಪಸ್ಥಿತಿಯಲ್ಲೇ ಹೊರತು ಅಲ್ಲಿ ಶಾಸ್ತ್ರಗಳನ್ನು ಪಠಿಸಲು ಯಾವ ಪುರೋಹಿತನನ್ನು ಕರೆಸಿರಲಿಲ್ಲ. "ಆದರೂ ನಾನು ಮತ್ತು ನನ್ನ ಮಡದಿ ಸಂತೋಷವಾಗಿಯೇ ಇದ್ದೇವೆ" ಎನ್ನುತ್ತಾರೆ ಅವರು. ಹಾಗೆಯೇ ಅವರು ಚುನಾವಣೆಗೆ ಮುನ್ನ ಅಧಿಕಾರಿಗಳ ಮುಂದೆ ಪ್ರಮಾಣಪತ್ರವನ್ನು ಸಲ್ಲಿಸುವಾಗಲೂ ರಾಹುಕಾಲ, ಗುಳಿಕ ಕಾಲ, ಯಮಗಂಡಕಾಲ ಇತ್ಯಾದಿ ಎಂದೆಲ್ಲ ನೋಡುವುದೂ ಇಲ್ಲ, ಇನ್ನು ದೇವಸ್ಥಾನಗಳನ್ನು ಸುತ್ತುವುದು, ಹೋಮಹವನ ಎಂದೆಲ್ಲ ಹೊಗೆ ಎಬ್ಬಿಸುವುದು ಅವರ ಬದುಕಿನಿಂದ ದೂರ ದೂರ.

ಜಾರಕಿಹೊಳಿಯವರಿಗೆ ಸಂಬಂಧಿಸಿದ ಇನ್ನೊಂದು ಕುತೂಹಲಕಾರಿ ಸಂಗತಿಯನ್ನು ಹೇಳಲೇಬೇಕು. ಕಳೆದ ವರ್ಷದ ತನಕ ಅವರು ಗೋಕಾಕ್‌ನಲ್ಲಿರುವ ತಮ್ಮ ಭವ್ಯ ಬಂಗಲೆಯಲ್ಲಿ ವಾಸ್ತವ್ಯ ಹೂಡಿದ್ದರು. ಆದರೆ ಬೆಳೆಯುತ್ತಿರುವ ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲೆಂದು ಅವರು ಹೋದ ವರ್ಷ ಬೆಳಗಾವಿಗೆ ವಾಸ್ತವ್ಯವನ್ನು ಬದಲಾಯಿಸಲು ನಿರ್ಧರಿಸಿದರು. ಆಗ ಅವರ ಗಮನಕ್ಕೆ ಒಂದು ಮನೆ ಬಂತು. ಅದನ್ನು ಕಟ್ಟಿ ಮೂರ್‍ನಾಲ್ಕು ವರ್ಷಗಳಾಗಿದ್ದರೂ ಯಾರೂ ಅದರಲ್ಲಿ ವಾಸಿಸುವ ಧೈರ್ಯ ಮಾಡಿರಲಿಲ್ಲ. ಯಾಕೆಂದು ಜಾರಕಿಹೊಳಿಯವರು ವಿಚಾರಿಸಿದಾಗ "ಅದನ್ನು ಸ್ಮಶಾನದಲ್ಲಿ ಕಟ್ಟಿದ್ದಾರೆ. ಆದ್ದರಿಂದ ಯಾರು ಅಲ್ಲಿ ವಾಸಿಸುತ್ತಾರೆ?" ಎಂಬ ಉತ್ತರ ಬಂತು. ಆದರೆ ಪುನರ್ಜನ್ಮದಲ್ಲಾಗಲಿ, ದೆವ್ವ, ಇತ್ಯಾದಿಗಳಲ್ಲಾಗಲಿ ಕಿಂಚಿತ್ತೂ ನಂಬಿಕೆ ಹೊಂದಿರದ ಅವರು "ನನಗೆ ಭೂತಗಳ ಬಗ್ಗೆ ಒಂದಿಷ್ಟೂ ನಂಬಿಕೆ ಇಲ್ಲ, ನಾನು ಅವುಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ, ಭೂತಗಳೂ ನನ್ನ ತಂಟೆಗೆ ಬರುವುದಿಲ್ಲ" ಎಂದು ಅದೇ ಮನೆಯಲ್ಲಿ ಈಗ ವಾಸಿಸುತ್ತಿದ್ದಾರೆ. ಅಂದಹಾಗೆ ಅವರೇ ಹೇಳುವಂತೆ ಆ ಮನೆಯನ್ನು ಪ್ರವೇಶಿಸುವ ಮುನ್ನ ಪ್ರೇತಾತ್ಮಗಳಿಂದ ಬಿಡುಗಡೆ ಹೊಂದಲು ಅಲ್ಲಿ ಯಾವ ಪೂಜೆಯನ್ನೂ ಮಾಡಿಸಲಿಲ್ಲ, ಗೃಹಪ್ರವೇಶವನ್ನೂ ಆಚರಿಸಲಿಲ್ಲ, ಕೊನೆಗೆ ಹಾಲನ್ನೂ ಉಕ್ಕಿಸಲಿಲ್ಲ!

ಎಲ್ಲರಿಗೂ ಗೊತ್ತಿರುವಂತೆ ಜಾರಕಿಹೊಳಿಯವರು ಕೆಲಕಾಲ 'ಸಮಯ' ಟಿವಿ ಚಾನೆಲ್‌ನ ಒಡೆಯರಾಗಿದ್ದರು. ಆಗ ಆ ಚಾನೆಲ್ ಲಾಭದಾಯಕವಾಗಿಯೇನೂ ನಡೆಯುತ್ತಿರಲಿಲ್ಲ. ಆಗ ಹಲವು ಜ್ಯೋತಿಷಿಗಳು ಚಾನೆಲ್ ಅನ್ನು ಸಂಪರ್ಕಿಸಿ, ತಾವು ಇತರೆ ಚಾನೆಲ್‌ಗಳಿಗೆ ಹೇಗೆ ಹಣ ತೆತ್ತು ಜನರನ್ನು ಮುಂಡಾಮೋಚುವ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದ್ದಾರೋ, ಅಂತಹದ್ದೇ ನೀಚ ಕೆಲಸವನ್ನು ಮಾಡಲು ಸ್ಲಾಟ್ ಕೊಡಬೇಕೆಂದೂ, ಅದಕ್ಕಾಗಿ ತಿಂಗಳಿಗೆ ಐವತ್ತು ಲಕ್ಷ ರೂಪಾಯಿಗಳನ್ನು ಸಮಯ ಚಾನೆಲ್‌ಗೆ ಕೊಡಲು ತಾವು ಸಿದ್ಧ ಎಂದೂ ಹೇಳಿದರು. ಜ್ಯೋತಿಷಿಗಳಿಗೆ ಚಾನೆಲ್‌ನಲ್ಲಿ ಸ್ಲಾಟ್ ಕೊಟ್ಟಿದ್ದರೆ ಪ್ರತಿ ತಿಂಗಳು ಆಗುತ್ತಿದ್ದ ನಷ್ಟವನ್ನು ಕಡಿಮೆ ಮಾಡಿಕೊಳ್ಳಬಹುದಿತ್ತು. ಆದರೆ ಜಾರಕಿಹೊಳಿಯವರು ಅದಕ್ಕೆ ಒಪ್ಪಲಿಲ್ಲ. "ನಾನು ಮೂಢನಂಬಿಕೆಗಳ ವಿರುದ್ಧ ಹೋರಾಡುತ್ತಿರುವಾಗ ನಾನೇ ಹೇಗೆ ನನ್ನ ಮಾಲೀಕತ್ವದ ಚಾನೆಲ್‌ನಲ್ಲಿ ಮೂಢನಂಬಿಕೆಗಳನ್ನು ಪ್ರೋತ್ಸಾಹಿಸುವ ಕಾರ್ಯಕ್ರಮಗಳಿಗೆ ಅನುಮತಿ ಕೊಡಲಿ?" ಎಂದು ನಿರಾಕರಿಸಿದರು. ಆಮೇಲೆ ಆ ಚಾನಲ್ ಅನ್ನು ಬೇರೆಯವರಿಗೆ ಮಾರಿ ಸುಮ್ಮನಾದರು.


ಬುದ್ಧ, ಬಸವಣ್ಣ ಮತ್ತು ಅಂಬೇಡ್ಕರ್ ಹೊರತಾಗಿ ಯಾವ ದೇವರ ಅಗತ್ಯವೂ ತಮಗಿಲ್ಲ ಎಂದೇ ನಂಬಿರುವ ಜಾರಕಿಹೊಳಿ ಸಂತೋಷದಿಂದಲೇ ಹೀಗೆನ್ನುತ್ತಾರೆ: "ಬಿಲ್ ಗೇಟ್ಸ್ ಆಗಲಿ, ನಾನಾಗಲಿ ಎಂದೂ ಲಕ್ಷ್ಮಿಗೆ ಪೂಜೆ ಸಲ್ಲಿಸಿಲ್ಲ, ಆದರೂ ಇವತ್ತು ಬಿಲ್ ಗೇಟ್ಸ್ ಜಗತ್ತಿನ ಅತಿ ಶ್ರೀಮಂತರಲ್ಲಿ ಒಬ್ಬ, ನನ್ನ ಮಾಲೀಕತ್ವದ ಕಂಪನಿಗಳ ವಾರ್ಷಿಕ ವಹಿವಾಟು ಆರು ನೂರು ಕೋಟಿಗಿಂತಲೂ ಹೆಚ್ಚು. ಅಂದರೆ ಇದೆಲ್ಲ ನಾವು ಗಳಿಸಿದ್ದು ಯಾವುದೋ ದೇವತೆಗೆ ಪೂಜೆ ಸಲ್ಲಿಸಿದ್ದರಿಂದಲ್ಲ, ಬದಲಾಗಿ ನಮ್ಮ ಬುದ್ಧಿ ಮತ್ತು ಶ್ರಮವನ್ನು ವ್ಯಯಿಸಿದ್ದರಿಂದ. ಇನ್ನು ಸರಸ್ವತಿ ದೇವತೆಯನ್ನು ಪೂಜಿಸುವ ಬದಲು ನಮ್ಮ ದೇಶದಲ್ಲಿ ಹೆಣ್ಣು ಮಕ್ಕಳಿಗೆ ಪ್ರಥಮ ಶಾಲೆಯನ್ನು ತೆರೆದ ಸಾವಿತ್ರಿಬಾಯ್ ಫುಲೆಯವರನ್ನು ನೆನೆಯುವುದು ಉತ್ತಮ ಕೆಲಸ."

ರಾಹುಲ್ ಮತ್ತು ಪ್ರಿಯಾಂಕ ಎಂಬ ಇಬ್ಬರು ಮಕ್ಕಳ ತಂದೆ ಆಗಿರುವ ಜಾರಕಿಹೊಳಿ ಅವರಲ್ಲೂ ವೈಚಾರಿಕತೆಯನ್ನು ಬಿತ್ತಲು ಪ್ರಯತ್ನಿಸುತ್ತಿರುವವರು. "ಅವರಿನ್ನೂ ಚಿಕ್ಕವರಾಗಿರುವುದರಿಂದ ಅವರಿಗೆ ಜಾತಿಯಿಂದಾಗುವ ಅನಾಹುತಗಳು ತಟ್ಟಿಲ್ಲ. ಆದರೇನಂತೆ, ಅವರ ಜೊತೆ ಮಾತನಾಡುವಾಗ ನಾನು ಅವರಿಗೆ ಅಂಬೇಡ್ಕರ್ ಅವರ ವಿಚಾರಗಳ ಬಗ್ಗೆ, ಬಸವಣ್ಣನ ಕ್ರಾಂತಿಯ ಬಗ್ಗೆ, ಬುದ್ಧನ ಬೋಧನೆಗಳ ಬಗ್ಗೆ ಹೇಳುತ್ತಿರುತ್ತೇನೆ. ಯಾಕೆಂದರೆ ಮೂಢನಂಬಿಕೆಗಳ ವಿರುದ್ಧದ ಹೋರಾಟ ನನ್ನ ಜೀವಿತಾವಧಿಯಲ್ಲಿ ಮುಗಿಯುವಂತಹದ್ದೇನಲ್ಲ. ಅದನ್ನು ನನ್ನ ಮಕ್ಕಳೂ ವೈಚಾರಿಕತೆಯ ಝಂಡಾ ಹಿಡಿದು ಮುಂದುವರಿಸಬೇಕಿದೆ. ಆದ್ದರಿಂದ ಅವರೊಂದಿಗೆ ಈ ವಿಚಾರಗಳನ್ನೆಲ್ಲ ಚರ್ಚಿಸುತ್ತಿರುತ್ತೇನೆ" ಎನ್ನುತ್ತಾರೆ ಮಾತ್ರವಲ್ಲ ಸ್ಮಶಾನದಲ್ಲಿ ತಾವು ಆಯೋಜಿಸಿದ್ದ ಕಾರ್ಯಕ್ರಮಕ್ಕೆ ತಮ್ಮ ಇಬ್ಬರು ಮಕ್ಕಳನ್ನೂ ಕರೆತಂದಿದ್ದರು.

"ಭಾರತದಲ್ಲಿ ಹಲವಾರು ಸಮಾಜ ಸುಧಾರಕರು ಜನ್ಮತಾಳಿದ್ದಾರೆ. ಬುದ್ಧ ಬಸವಣ್ಣ ಪೆರಿಯಾರ್, ಜ್ಯೋತಿಬಾ ಫುಲೆ, ನಾರಾಯಣ ಗುರು, ಅಂಬೇಡ್ಕರ್ ಅವರೆಲ್ಲ ಇಲ್ಲಿನ ದಮನಿತ, ಶೋಷಿತ ಸಮುದಾಯಗಳ ಏಳಿಗೆಗೆ ಶ್ರಮಿಸಿದ್ದಾರೆ. ಆದರೂ ನಮ್ಮ ನಾಡಲ್ಲಿ ಮೂಢನಂಬಿಕೆ, ಅವೈಜ್ಞಾನಿಕ ಚಿಂತನೆ, ಧರ್ಮದ ಹೆಸರಲ್ಲಿ ಕಂದಾಚಾರ ಹೆಚ್ಚಾಗಿದ್ದು ಇವೆಲ್ಲವುಗಳಿಂದಾಗಿ ಬಹುಸಂಖ್ಯಾತ ಜನರು ಇನ್ನೂ ಅನಕ್ಷರರಾಗಿ, ಬಡವರಾಗಿ, ಸುಲಿತಕ್ಕೆ ಬಲಿಪಶುಗಳಾಗಿ ಮುಂದುವರಿಯುತ್ತಿದ್ದಾರೆ. ಅದಕ್ಕೆ ಕಾರಣ ನಮ್ಮ ಜನ ಸಮಾಜ ಸುಧಾರಕರ ತತ್ವಚಿಂತನೆಗಳನ್ನು ಮರೆತು ಮತ್ತದೇ ಪುರೋಹಿತಶಾಹಿಗಳ ಮೋಸಕ್ಕೆ ಬಲಿಯಾಗಿದ್ದು. ನಾವು ಬುದ್ಧ ಬಸವ ಮತ್ತು ಅಂಬೇಡ್ಕರ್ ಅವರ ಚಿಂತನೆಗಳನ್ನು ಸಮಾಜದಲ್ಲಿ ಹಬ್ಬಿದರೆ ನಮ್ಮ ಜನ ಉದ್ಧಾರವಾಗುತ್ತಾರೆ" ಎಂದೇ ಜಾರಕಿಹೊಳಿ ಬಲವಾಗಿ ಪ್ರತಿಪಾದಿಸುತ್ತಾರೆ.

ಜಾರಕಿಹೊಳಿ ಓರ್ವ ರಾಜಕಾರಣಿ ಆಗಿದ್ದರೂ ಅವರು ಇತರೆ ನಾಯಕರಂತಲ್ಲ, ಮೂಢನಂಬಿಕೆ ವಿರುದ್ಧದ ಅವರ ನಿಲುವು ಮೆಚ್ಚುಗೆಗೆ ಪಾತ್ರವಾಗುವಂತಹದ್ದು ಮಾತ್ರವಲ್ಲ, ಇತರೆ ಜನನಾಯಕರಿಗೂ ಮಾದರಿಯಾಗುವಂಥದ್ದು. ಜಾರಕಿಹೊಳಿಯವರ ಈ ನಿಲುವು ಮತ್ತು ಬದ್ಧತೆಯನ್ನು ಇತರರೂ ಮೈಗೂಡಿಸಿಕೊಳ್ಳುವಂತಾಗಲಿ. ■

ಕರಾವಳಿ: ಕಾಂಗ್ರೆಸ್‌ನಲ್ಲಿ ಬಂಡಾಯ ತಂದಿಟ್ಟ ಭಂಡ ಮುಖಂಡರ


ಆಸ್ಕರ್ ಫರ್ನಾಂಡಿಸ್

ಕರಾವಳಿ ಕಾಂಗ್ರೆಸ್ ಬಂಡಾಯದ ಬೆಂಕಿಯಲ್ಲಿ ಬೂದಿಯಾಗುತ್ತಿದೆ. ಪಕ್ಷ ನಿಷ್ಠೆ ನಿಯತ್ತು ಲವಲೇಶವೂ ಇಲ್ಲದ ಹೈಕಮಾಂಡ್ ಸಖ್ಯದ ಔಟ್‌ಡೇಟೆಡ್ ನಾಯಕರೇ ಕರಾವಳಿಯ ಮೂರೂ ಜಿಲ್ಲೆಯ ಕಾಂಗ್ರೆಸ್‌ಗೆ ಮಗ್ಗಲು ಮುಳ್ಳಾಗಿ ಹೋಗಿದ್ದಾರೆ. ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆ ಹುರಿಯಾಳುಗಳ ಆಯ್ಕೆಯಲ್ಲಿ ಹೈಕಮಾಂಡ್ ದಾರಿ ತಪ್ಪಿಸಿದ ಭಂಡ ಮುಖಂಡಾಗ್ರೇಸರ ಪ್ರಜ್ಞಾಪೂರ್ವಕ ಪ್ರಮಾದದಿಂದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಕಾಂಗ್ರೆಸ್ ಪಕ್ಷವೆಂಬುದು ಗಂಡಾಂತರಕ್ಕೆ ಸಿಲುಕಿದೆ! ಇವತ್ತು ದಕ್ಷಿಣ ಕರಾವಳಿಯ ಅವಳಿ ಜಿಲ್ಲೆಯಲ್ಲಿ ಕಾಂಗ್ರೆಸ್ ಖತಮ್ ಆಗುತ್ತಿರುವುದಕ್ಕೆ ಕಾಂಗ್ರೆಸ್ ಅಧಿನಾಯಕಿ ಸೋನಿಯಾರ ಬಂಟ ಆಸ್ಕರ್ ಫರ್ನಾಡಿಸ್ ಎಡಬಿಡಂಗಿತನವೇ ಪ್ರಮುಖ ಕಾರಣ; ಅತ್ತ ಉತ್ತರ ಕನ್ನಡದಲ್ಲಿ ಪಾಳೆಗಾರಿ ಪೊಗರಿನ ಮಂತ್ರಿ ಆರ್ವಿ ದೇಶಪಾಂಡೆಯ ಸ್ವಾರ್ಥ, ಸ್ವಜನಪಕ್ಷಪಾತ ಮತ್ತು ಪುತ್ರ ವ್ಯಾಮೋಹದಿಂದ ಕಾಂಗ್ರೆಸ್ ಹಳ್ಳ ಹಿಡಿದಿದೆ....

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಕಾಂಗ್ರೆಸ್ ಒಂದು ಪಕ್ಷವಾಗಿ ಸಂಘಟಿತವಾಗಿಲ್ಲ. ಸಂಘಟನೆ-ಸಮರ ತಂತ್ರಗಳ ಗಂಧವೇ ಇಲ್ಲದ ಹ್ಯಾಪರ ಕೈಗೆ ಎರಡು ಜಿಲ್ಲಾ ಕಾಂಗ್ರೆಸ್ ಸಿಲುಕಿ ಒದ್ದಾಡುತ್ತಿದೆ. ಈ ಸೋಕಾಲ್ಡ್ ನಾಯಕರಿಗೆ ಕೋಮುವಾದಿ ಬಿಜೆಪಿ ಹಿಮ್ಮೆಟ್ಟಿಸುವ ಸ್ಟ್ರಾಟಜಿಯೇ ಗೊತ್ತಿಲ್ಲ. ಆಧುನಿಕ ತಂತ್ರಜ್ಞಾನ ಬಳಸಿ ಪಾರ್ಟಿ ಕಟ್ಟುವ ಪ್ಲಾನುಗಳೇ ಇಲ್ಲ. ಹೀಗಾಗಿ ದಕ್ಷಿಣ ಕರಾವಳಿಯಲ್ಲಿ ಬಿಜೆಪಿ ಎದುರಾಳಿಗಳೇ ಇಲ್ಲದಂತೆ ಒಂದೇ ಸಮನೆ ಕೊಬ್ಬುತ್ತಿದೆ. ಇವತ್ತು ಕಾಂಗ್ರೆಸ್‌ಗೆ ಈ ಎರಡೂ ಜಿಲ್ಲೆಯಲ್ಲಿ ಅಳಿದುಳಿದ ಜೀವವೇನಾದರೂ ಇದೆಯೆಂದಾದರೆ ಅದು ಮುಖಂಡರ ಪ್ರಯತ್ನದಿಂದಲ್ಲ; ಸಂಘ ಪರಿವಾರದ ಪಾತಕದಿಂದ ಕಂಗಾಲಾದ ಜನರು ಬದಲಿ ಒಂದಿರಲಿ ಎಂದು ಕಾಂಗ್ರೆಸ್ ಕಾಪಾಡಿದ್ದರ ಫಲವಿದಷ್ಟೇ!

ಉಡುಪಿ-ದಕ್ಷಿಣ ಕನ್ನಡ ಕಾಂಗ್ರೆಸ್ ಕಸರತ್ತುಗಳೆಲ್ಲ ಕೇಂದ್ರೀಕೃತವಾಗಿರುವುದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಆಸ್ಕರ್ ಫರ್ನಾಂಡಿಸ್, ಮಾಜಿ ಕೇಂದ್ರ ಮಂತ್ರಿ ವೀರಪ್ಪ ಮೊಯ್ಲಿ ಮತ್ತು ಮಾಜಿ ಕೆಪಿಸಿಸಿ ಅಧ್ಯಕ್ಷ ಜನಾರ್ದನ ಪೂಜಾರಿಗಳೆಂಬ ದಂಡಪಿಂಡಗಳ ಕೈಯ್ಯಲ್ಲಿ. ಸತತ ಸೋಲು-ವೀರಾವೇಶದ ಪೂಜಾರಿ ಹೈಕಮಾಂಡ್ ಮಟ್ಟದಲ್ಲಿ ಕಿಮ್ಮತ್ತು ಕಳೆದುಕೊಂಡಿದ್ದರೆ, ಮೊಯ್ಲಿ ಮಹಾತ್ಮನ ಆಸಕ್ತಿ ಚಿಕ್ಕಬಳ್ಳಾಪುರಕ್ಕೆ ವಲಸೆ ಹೋದನಂತರ ಕಡಿಮೆಯಾಗಿದೆ. ಹಾಗಾಗಿ ಆಸ್ಕರ್ ಅವಳಿ ಜಿಲ್ಲೆಯ ಕಾಂಗ್ರೆಸ್‌ನ ಏಕಮೇವಾದ್ವಿತೀಯ ದೊರೆಯಾಗಿ ಹೊರಹೊಮ್ಮಿದ್ದಾರೆ. ನಾಲ್ಕು ದಶಕದಿಂದ ರಾಜಕಾರಣ ಮಾಡುತ್ತಿರುವ ಈ ಆಸ್ಕರಣ್ಣನಿಗೆ ಕರಾವಳಿ ರಾಜಕಾರಣದ ನಾಡಿ ಮಿಡಿತವೇ ಇನ್ನೂ ಪತ್ತೆ ಹಚ್ಚಲಾಗಿಲ್ಲ. ಸೋಷಿಯಲ್ ಇಂಜಿನಿಯರಿಂಗ್ ಎಂಬುದೇ ಆತನಿಗೆ ಅರ್ಥವಾಗುತ್ತಿಲ್ಲ. ರಾಜೀವ್ ಗಾಂಧಿ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಪರಿವಾರದ ಜತೆಗಿನ ನಂಟು ನಾಜೂಕಾಗಿ ನಿಭಾಯಿಸಿಕೊಂಡು ಬಂದಿರುವ 'ಫಾದ್ರಿ' ನಡವಳಿಕೆಯ ಆಸ್ಕರ್‌ರ ಪೆದ್ದುತನ, ಎರಡನೇ ಹಂತದ ನಾಯಕತ್ವ ಬೆಳೆಯಲು ಬಿಡದ ಕೀಳರಿಮೆಗಳು ಕರಾವಳಿ ಕಾಂಗ್ರೆಸ್‌ನ್ನು ಅವಸಾನದ ಅಂಚಿಗೆ ತಂದು ನಿಲ್ಲಿಸಿದೆ.

ಅವಳಿ ಜಿಲ್ಲೆಯ ಕಾಂಗ್ರೆಸ್‌ನ ಎಲ್ಲ ಹಂತದ ಅಧಿಕಾರ ಹಂಚಿಕೆಯಲ್ಲಿ ಮೂಗು ತೂರಿಸಿ ಅದ್ವಾನ ಮಾಡೋದು ಆಸ್ಕರ್‌ರ ಜಾಯಮಾನ. ಅಸಮರ್ಥರು-ಅಪಾತ್ರರನ್ನು ಅಟ್ಟಕ್ಕೇರಿಸಿ ಸಮರ್ಥರು-ನಿಷ್ಠಾವಂತರನ್ನು ಕಡೆಗಣಿಸುವ ಆಸ್ಕರ್‌ರ ಅವಾಂತರ ಹಾಲಿ ವಿಧಾನ ಪರಿಷತ್ ಚುನಾವಣೆಯಲ್ಲಿ ಜೋರಾಗಿ ನಡೆದಿದೆ. ಪಾರ್ಟಿ ಬೆಳೆಸಬೇಕೆಂಬ ನಿಯತ್ತಿನಿಂದ ಆತ ಕೆಲಸ ಮಾಡಿದ್ದೇ ಇಲ್ಲ. ಪಕ್ಷ ಹಾಳಾಗಿಹೋದರೂ ಚಿಂತೆಯಿಲ್ಲ ತನ್ನ ಅಸ್ತಿತ್ವಕ್ಕೆ ಧಕ್ಕೆ ತರಲಾರದ ಬೋದಾಳಗಳು ಆಯಕಟ್ಟಿನ ಸ್ಥಾನದಲ್ಲಿರಬೇಕೆಂಬ ಏಕೈಕ ಹಿಡನ್ ಉದ್ದೇಶ ಆತನ ಅಭ್ಯರ್ಥಿ ಆಯ್ಕೆಯಲ್ಲಿರುತ್ತದೆ. ಈ 'ನೀತಿ'ಯಂತೆಯೇ ಈಗ ಆಸ್ಕರ್ ತನ್ನ ಪರಮಾಪ್ತ ಚೇಲ ಪ್ರತಾಪ್‌ಚಂದ್ರ ಶೆಟ್ಟಿ ಎಂಬ ಶುದ್ಧ ಸೋಂಭೇರಿಗೆ ಎಮ್ಮೆಲ್ಸಿ ಟಿಕೆಟ್ ಕೊಡಿಸಿದ್ದಾರೆ. ಪ್ರತಾಪ್ ಕಾರ್ಯಕರ್ತರಿಗೆ ಒಪ್ಪಿಗೆಯಾಗದ ಸೋಲುವ ಕ್ಯಾಂಡಿಡೇಟೆಂದು ಗೊತ್ತಿದ್ದೂ ಗೆಲ್ಲುವ ಆಸಾಮಿ ಮುಂದೆ ತನಗೆಲ್ಲಾದರೂ ಸವಾಲಾಗಬಹುದೆಂಬ ಭಯದಿಂದ ಈತನಿಗೇ ಮತ್ತೊಂದು ಚಾನ್ಸ್ ದಯಪಾಲಿಸಿದ್ದಾರೆ ಆಸ್ಕರಣ್ಣ.

ತಮಾಷೆ ನೋಡಿ. ಈ ಪ್ರತಾಪ್ ಹಿಂದೆರಡು ಬಾರಿ ಇದೇ ಕ್ಷೇತ್ರದಿಂದ ಎಮ್ಮೆಲ್ಸಿಯಾಗಿರುವ ವೇಸ್ಟ್ ಬಾಡಿ. ತನ್ನನ್ನು ಗೆಲ್ಲಿಸಿದ ಕ್ಷೇತ್ರಕ್ಕೆ- ಮತದಾರರಿಗೆ ಆತ ನ್ಯಾಯ ಒದಗಿಸಬೇಕೆಂಬ ಕರ್ತವ್ಯಪ್ರಜ್ಞೆಯಿಂದ ಅಧಿಕಾರ ಚಲಾಯಿಸಿದ ಕುರುಹುಗಳೇ ಕಾಣಿಸದು. ಕಳೆದ ಅಸೆಂಬ್ಲಿ, ಪಾರ್ಲಿಮೆಂಟ್ ಅಥವಾ ಸ್ಥಳೀಯಾಡಳಿತ ಸಂಸ್ಥೆಗಳ ಚುನಾವಣೆಯಲ್ಲಿ ಪಾರ್ಟಿ ಪರ ಕೆಲಸವೂ ಈತ ಮಾಡಿಲ್ಲ; ಪಕ್ಷ ಕಟ್ಟುವ ಯೋಚನೆಯಂತೂ ಈ ಫ್ಯೂಡಲ್ ಪ್ರತಾಪ್ ತಲೆಗೆ ಹೊಳೆಯದು ಬಿಡಿ. 1990ರ ದಶಕದಲ್ಲಿ ಹಾಲಾಡಿ ಶ್ರೀನಿವಾಸ್ ಶೆಟ್ಟಿ ಎದುರು ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಸೋತ ಕ್ಷಣದಿಂದಲೇ ಅಸ್ತಿತ್ವ ಕಳೆದುಕೊಂಡಿರುವ ಪ್ರತಾಪ್ ಪರಿಷತ್ ಪ್ರವೇಶಿಸಿ ಆರಾಮಾಗಿ ಕಾಲಹರಣ ಮಾಡುತ್ತ ಬಂದಿರುವ ಪುಢಾರಿ. ಆಸ್ಕರ್ ನಂತರದ ಜಿಲ್ಲಾ ಕಾಂಗ್ರೆಸ್ ಲೀಡರಿಕೆ ತನ್ನದೇ ಎಂಬ ಒಣಗತ್ತಿನಿಂದ ಗಡ್ಡ ನೀವುತ್ತ ಅಂಡಲೆಯುವ ಪ್ರತಾಪ್ ಪರಾಕ್ರಮಕ್ಕೆಲ್ಲ ಆಸ್ಕರ್‌ದೇ ಶ್ರೀರಕ್ಷೆ! ಅದೇನು ದೋಸ್ತಿಯೋ ಏನೋ? ಪ್ರತಾಪ್‌ಗೆ ಆಗಾಗ ಪುನರ್ವಸತಿ ಕಲ್ಪಿಸುತ್ತ ಬಂದಿರುವ ಆಸ್ಕರ್‌ಗೆ ಆತನಿಂದ ಪಕ್ಷಕ್ಕೆ ದಮ್ಮಡಿ ಪ್ರಯೋಜನವಿಲ್ಲ ಎಂಬುದು ಗೊತ್ತಿದೆ. ತನಗೆ ತೊಂದರೆ ಕೊಡದ ಎದುರಾಡದ ಸನ್ಮಿತ್ರನೆಂಬುದೇ ಆಸ್ಕರ್‌ಗೆ ಸಮಾಧಾನ!!


ಕಾರ್ಯಕರ್ತರ- ಜನಸಾಮಾನ್ಯರ ಸಂಪರ್ಕ ಕಳೆದುಕೊಂಡಿರುವ ಪ್ರತಾಪ್‌ಗೆ ಈ ಬಾರಿ ಮತ್ತೆ ಎಮ್ಮೆಲ್ಸಿ ಟಿಕೆಟ್ ಕೇಳುವ ಉಮೇದಿಯೇ ಇರಲಿಲ್ಲ. ಟಿಕೆಟ್ ಕ್ಲೇಮ್ ಮಾಡಿದರೆ ಪಾರ್ಟಿಯಲ್ಲಿ ದೊಡ್ಡ ವಿರೋಧ ಎದುರಾಗುವ ಸೂಚನೆ ಆತನಿಗೆ ಅದ್ಯಾವಾಗಲೋ ಸಿಕ್ಕಿತ್ತು. ಹೀಗಾಗಿ ಆತ ಟಿಕೆಟ್‌ಗೆ ಅರ್ಜಿಯೇ ಹಾಕಿರಲಿಲ್ಲ. ಹಾಗಂತ ಎಮ್ಮೆಲ್ಸಿಯಾಗುವ ತೆವಲೇನೂ ಕಡಿಮೆ ಆಗಿರಲಿಲ್ಲ. ಆಸ್ಕರಣ್ಣನಿಗೂ ಈ ನಿಷ್ಠಾವಂತ ಬಂಟನ ಬದಲಿಸುವ ಇರಾದೆಯೂ ಇರಲಿಲ್ಲ. ಹಾಗೊಮ್ಮೆ ಪ್ರತಾಪ್‌ರನ್ನು ನಿವೃತ್ತಿಗೊಳಿಸಿದರೆ ತನಗಿಂತಲೂ ಬುದ್ಧಿವಂತ, ಬೇರು ಮಟ್ಟದ ಜನಸಂಪರ್ಕವಿರುವ ಮತ್ತು ಅವಳಿ ಜಿಲ್ಲೆಯ ಬೇಕು-ಬೇಡ ಅರಿತಿರುವ ಸಮರ್ಥ ಪಾರ್ಲಿಮೆಂಟರಿಯನ್ ಜಯಪ್ರಕಾಶ್ ಹೆಗ್ಡೆಗೆ ಅಥವಾ ತನ್ನ ಸರಳತೆ-ಸಜ್ಜನಿಕೆಯಿಂದ ಜನಮನ ಗೆದ್ದಿರುವ ಕೆಲಸಗಾರ ಕಾರ್ಕಳದ ಗೋಪಾಲ ಭಂಡಾರಿಗೆ, ಧಾಡಸಿ ಗುಣಧರ್ಮದ ಭುಜಂಗ ಶೆಟ್ಟಿ, ಹರಿಕೃಷ್ಣ ಬಂಟ್ವಾಳ್‌ಗೆ ಟಿಕೆಟ್ ಕೊಡಬೇಕಾಗುತ್ತದೆಂಬ ಭಯ ಆಸ್ಕರದು.

ಹೀಗಾಗಿ ಆತ ಯೋಗ್ಯ-ನಿಷ್ಠಾವಂತ ಟಿಕೆಟ್ ಆಕಾಂಕ್ಷಿಗಳನ್ನು ಮೂಲೆಗೆ ದಬ್ಬುವ ಸ್ಕೆಚ್ ಹಾಕಿಬಿಟ್ಟರು. ಪ್ರತಾಪ್ ಟಿಕೆಟ್‌ಗೆ ಅರ್ಜಿ ಹಾಕದಂತೆ ನೋಡಿಕೊಂಡರು. ಅಷ್ಟೇ ಅಲ್ಲ "ನನಗೆ ಮತ್ತೆ ಎಮ್ಮೆಲ್ಸಿಗಿರಿ ಬೇಡ... ನಾನೀಗ ಸಕ್ರಿಯ ರಾಜಕಾರಣದಲ್ಲಿ ಇಲ್ಲ... ಆರಾಮಾಗಿ ಮನೆಯಲ್ಲಿ ಇರುವ ಯೋಚನೆ ನನ್ನದು..." ಎಂದು ಆಗಾಗ ಪ್ರತಾಪ್ ಹೇಳಿಕೆ ಒಗಾಯಿಸುತ್ತಲೇ ಬಂದರು. ಪ್ರತಾಪ್ ಟಿಕೆಟ್ ಕೇಳಿದರೆ ಪಕ್ಷದಲ್ಲಿ ಬಂಡಾಯ-ಬೊಬ್ಬೆ ಭುಗಿಲೇಳುತ್ತದೆಂದು ಆಸ್ಕರ್ ಈ ಸಂಚು ಹೂಡಿದ್ದರು. ಪ್ರತಾಪ್ ಟಿಕೆಟ್ ಸ್ಪರ್ಧೆಯಲ್ಲಿ ಇಲ್ಲವೆಂದು ತೋರಿಸಲು ಆಸ್ಕರ್ ಅದೆಷ್ಟು ವ್ಯವಸ್ಥಿತವಾಗಿ ತಂತ್ರಗಾರಿಕೆ ಮಾಡಿದರೆಂದರೆ, ಆಕಾಂಕ್ಷಿಗಳಿಗೆಲ್ಲ ಅರ್ಜಿ ಗುಜರಾಯಿಸಲು ಒಳಗೊಳಗೇ ಕುಮ್ಮಕ್ಕು ಕೊಟ್ಟರು. ಹೈಕಮಾಂಡ್ ಮಾಂಡಲೀಕನದೇ ಪ್ರಚೋದನೆ ಇರುವಾಗ ಟಿಕೆಟ್ ಸಿಕ್ಕೇಸಿಗುತ್ತದೆಂದು ಬರೋಬ್ಬರಿ ಹತ್ತು ಮಂದಿ ಟಿಕೆಟ್‌ಗೆ ಅರ್ಜಿ ಹಾಕಿದರು.

ಟಿಕೆಟ್ ಆಕಾಂಕ್ಷಿಗಳ ದೊಡ್ಡ ದಂಡೇ ಇದೆಯೆಂದು ಬಿಂಬಿಸಿ ಗೊಂದಲ ಮೂಡಿಸಿ ತನಗೆ ಬೇಕಾದ ಪ್ರತಾಪ್‌ಗೆ ಅವಕಾಶ ಕೊಡುವ ಹಿಕಮತ್ತು ಆಸ್ಕರ್‌ದಾಗಿತ್ತು. ಸಿಎಂ ಸಿದ್ದು ತನ್ನ ಜನತಾ ಪರಿವಾರ ಪೂರ್ವಾಶ್ರಮದ ಗೆಣೆಗಾರ ಜಯಪ್ರಕಾಶ್ ಹೆಗ್ಡೆ ಪರ ಲಾಬಿ ಮಾಡಿದರು. ಇಷ್ಟೇ ಬಿರುಸಾಗಿ ಜಯಪ್ರಕಾಶ್‌ರ ಭಾವ ರವಿಶಂಕರ್ ಶೆಟ್ಟಿ ಎಂಬ ಬೆಂಗಳೂರು ಬೇಸ್ಡ್ ಪುತ್ತೂರು ಉದ್ಯಮಿಯೂ ಸರ್ಕಸ್ ನಡೆಸಿದರು. ಮಾಜಿ ಸಿಎಂ ಮೊಯ್ಲಿ ತನ್ನ ಶಿಷ್ಯ ಮಾಜಿ ಶಾಸಕ ಗೋಪಾಲ ಭಂಡಾರಿಗಾಗಿ ಕಟಿಪಿಟಿ ನಡೆಸಿದರು. ಬ್ರಹ್ಮಾವರದ ಭುಜಂಗ ಶೆಟ್ಟಿ ಕಳೆದ ಬಾರಿ ಆಸ್ಕರ್ ತನಗೆ ಮುಂದಿನ ಬಾರಿ ಚಾನ್ಸ್ ಕೊಡುವ ಆಶ್ವಾಸನೆ ಕೊಟ್ಟು ಸುಮ್ಮನಾಗಿಸಿದ್ದು ನೆನಪಿಸಿ ಹಾರಾಡಿದರು. ಟಿಕೆಟ್ ಆಕಾಂಕ್ಷಿಗಳ ಜಿದ್ದಾಜಿದ್ದಿ ಜೋರಾಗುವಂತೆ ಆಸ್ಕರ್ ನೋಡಿಕೊಂಡರು. ಈ ಗಲಾಟೆಯಲ್ಲಿ ರಾಜಿ ಅಭ್ಯರ್ಥಿಯೆಂದು ಹಾಲಿ ಎಮ್ಮೆಲ್ಸಿ ಪ್ರತಾಪ್‌ಗೆ ಅವಕಾಶ ಕೊಡುವ ಕರಾಮತ್ತು ಆತನದಾಗಿತ್ತು. ಹಾಗೇ ಮಾಡಿದರು.

ಆಸ್ಕರ್‌ರ ದಗಲುಬಾಜಿ ನಡೆ-ನುಡಿ ಸಹಜವಾಗೇ ಪಾರ್ಟಿಯಲ್ಲಿ ಅಲ್ಲೋಲ ಕಲ್ಲೋಲ ಮಾಡಿದೆ! ಜನಪರ ನೀತಿ-ನಿಲುವು-ಕೆಲಸಗಾರಿಕೆಯ ತಾಕತ್ತಿನಿಂದ ಅವಳಿ ಜಿಲ್ಲೆಯಲ್ಲಿ ಚಿರಪರಿಚಿತರಾಗಿರುವ ಡೈನಮಿಕ್ ಜಯಪ್ರಕಾಶ್ ಹೆಗ್ಡೆ ಬಂಡಾಯದ ಬಾವುಟ ಮುಗಿಲೆತ್ತರಕ್ಕೆ ಹಾರಿಸಿದ್ದಾರೆ. ಭುಜಂಗ ಶೆಟ್ಟಿಯೂ ಬಂಡಾಯ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ. ಜೆಪಿಗೆ ಕಾಂಗ್ರೆಸ್ ಕಾರ್ಯಕರ್ತರಷ್ಟೇ ಅಲ್ಲ ಬೇರೆ ಪಕ್ಷದಿಂದಲೂ ರಹಸ್ಯ ಬೆಂಬಲ ಸಿಗುವ ಸೂಚನೆ ಗೋಚರಿಸಲಾರಂಭಿಸಿದೆ. ಆಡಳಿತಾರೂಢ ಪಕ್ಷದ ಅಧಿಕೃತ ಅಭ್ಯರ್ಥಿ ಸೋಲಿಸುವ ಮೂಲಕ ರಾಜಕೀಯ ಲಾಭ ಗಿಟ್ಟಿಸಲು ಬಿಜೆಪಿ ತನ್ನ ಹೆಚ್ಚುವರಿ ಮತ ಜೆಪಿ ಕಡೆಗೆ ತಿರುಗಿಸುವ ನಿರ್ಧಾರಕ್ಕೆ ಬಂದಿದೆ. ಭುಜಂಗ ಶೆಟ್ಟಿ ಜೆಪಿ ಪರವಾಗಿ ನಾಮಪತ್ರ ವಾಪಸ್ ಪಡೆಯುವ ನಿರ್ಧಾರಕ್ಕೂ ಬಂದಿದ್ದಾರೆ. ಎಲೆಕ್ಷನ್ ತಂತ್ರಗಾರಿಕೆಯಲ್ಲಿ ನಿಸ್ಸೀಮರಾದ ಜೆಪಿ ಎದುರು ಚಲಾವಣೆ ಕಳೆದುಕೊಂಡಿರುವ ಪ್ರತಾಪ್ ಗೆಲ್ಲುವುದು ಕಷ್ಟವೆಂಬಂಥ ವಾತಾವರಣ ಕ್ಷೇತ್ರದಲ್ಲಿ ಈಗಾಗಲೇ ಮೂಡಿಬಿಟ್ಟಿದೆ!

ಆಸ್ಕರ್‌ರ ಗೊಡ್ಡು ಸರ್ವಾಧಿಕಾರಕ್ಕೆ ಧಿಕ್ಕಾರ ಹಾಕಲು ಕಾಂಗ್ರೆಸ್ ಕಾರ್ಯಕರ್ತರು ಸಜ್ಜಾಗಿದ್ದಾರೆ. ಈ ವರದಿ ಸಿದ್ಧವಾಗುತ್ತಿರುವ ಹೊತ್ತಿಗೆ ಮುಖಭಂಗ ತಪ್ಪಿಸಿಕೊಳ್ಳಲು ಪ್ರತಾಪ್‌ರನ್ನು ಕಣದಿಂದ ಹಿಂದೆ ಸರಿಸಿ ಭುಜಂಗ ಶೆಟ್ಟಿಗೆ ಅಧಿಕೃತ ಅಭ್ಯರ್ಥಿ ಮಾಡುವ ಚಿಂತನೆ ಆಸ್ಕರ್ ಬಳಗದಲ್ಲಿ ನಡೆದಿದೆ. ಪ್ರತಾಪ್ ಸ್ಪರ್ಧೆಗೆ ಹಿಂಜರಿಯುತ್ತಿದ್ದಾರೆ. ಭುಜಂಗ ಶೆಟ್ಟಿಗೆ ಚಾನ್ಸ್ ಕೊಡಿಸಿ ಸ್ವಜಾತಿ ಪ್ರತಿಸ್ಪರ್ಧಿ ಜಯಪ್ರಕಾಶ್ ಹೆಗ್ಡೆ ಶಸ್ತ್ರ ತ್ಯಜಿಸಿ ತಟಸ್ಥನಾಗುವಂತೆ ಮಾಡುವ ಯೋಚನೆ ಪ್ರತಾಪರದು. ಅರ್ಜಿ ಹಾಕಿದ ಹತ್ತು ಜನರಲ್ಲಿ ಯಾರಿಗೆ ಟಿಕೆಟ್ ಕೊಟ್ಟರೂ ತಾನು ಕಣದಿಂ[...] ಸರಿಯುವುದಾಗಿ ಜೆಪಿ ಹೇಳಿದ್ದಾರೆ. ಹೀಗಾಗಿ [...] ವಾಪಸ್ ಪಡೆಯುವ ಕೊನೆಯ ಕ್ಷಣದವರೆಗೂ [...] ರಾಜಕಾರಣ ನಡೆಯಲಿದೆ!


ಆರ್.ವಿ. ದೇಶಪಾಂಡೆ


ಒಂದಂತೂ ಖರೆ. ಎರಡು ಸ್ಥಾನಗಳ ದ[...] ಉಡುಪಿ ಸ್ಥಳೀಯಾಡಳಿತ ಕ್ಷೇತ್ರದಲ್ಲಿ ಬಿಜೆಪಿ ನಿ[...] ಒಂದು ಸೀಟು ಗೆಲ್ಲುತ್ತದೆ. ಪೈಪೋಟಿ ನ[...] ಕಾಂಗ್ರೆಸ್‌ನ ಅಧಿಕೃತ-ಬಂಡಾಯ ಅಭ್ಯರ್ಥಿ ನ[...] ಜೆಪಿ v/s ಪಿಸಿ ಹೋರಾಟವಾದರೆ ಕಾಂಗ್[...] ಮುಕ್ಕಲಿದೆ. ಆಸ್ಕರ್‌ನ ನಿರಂತರ ಹು[...] ಹೇಸಿಹೋಗಿರುವ ಕಾಂಗ್ರೆಸಿಗರು ಪ್ರತಾಪರನ್ನು [...] ಮೂಲಕ ಕರಾವಳಿ ಕಾಂಗ್ರೆಸ್‌ನ್ನು ಆಸ್ಕರ್ ಕಪಿ[...] ಬಿಡಿಸುವ ಕೆಲಸ ಮಾಡುವ ಮೂಡ್‌ನಲ್ಲಿದ[...]


ಉತ್ತರ ಕನ್ನಡ: ದೇಶಪಾಂಡೆಗೆ [...]


ದಕ್ಷಿಣ ಕನ್ನಡ-ಉಡುಪಿ ಕಾಂಗ್ರೆಸ್‌ನಲ್ಲಿ [...] ಒಳಸುಳಿ ಉತ್ತರ ಕನ್ನಡ ಕಾಂಗ್ರೆಸ್‌ನಲ್ಲಿ ಜೋರಾ[...] ಡಾನ್ ದೇಶಪಾಂಡೆಯ ದಾದಾಗಿರಿ ರಾಜಕಾರ[...] ದೊಡ್ಡ ಮಟ್ಟದ ಆಕ್ರೋಶ ಭುಗಿಲೆದ್ದಿದೆ! [...] ವ್ಯರ್ಥವಾಗಿ ಕಳೆದ ನಾಲಾಯಕ್ [...] ಫೋಟನೇಕರ್‌ಗೆ ಮತ್ತೆ ಕಾಂಗ್ರೆಸ್ ಟಿಕೆಟ್ ಕ[...] ಬಹುಸಂಖ್ಯಾತ ಕಾಂಗ್ರೆಸಿಗರನ್ನು ಕೆರಳಿಸಿದೆ. ಜಿಲ್ಲೆಯ ರಾಜಕಾರಣದಲ್ಲಿ ನಿರ್ಣಾಯಕರಾ[...] (ಈಡಿಗರು) ದೇಶಪಾಂಡೆಯ ವ[...] ದುಮುಗುಡುತ್ತಿದ್ದಾರೆ. ಈ ಅಸಮಾಧಾನ [...] ಅಧಿಕೃತ ಅಭ್ಯರ್ಥಿಯನ್ನೇ ಅಪೋಷನ [...] ತನಕಹೋಗುವ ಸಕಲ ಸೂಚನೆಗಳೂ ಗೋ[...]


ಎಮ್ಮೆಲ್ಸಿ ಅನುದಾನ ಸರಿಯಾಗಿ ಬಳ[...] ಮಾಡಿರುವ ಫೋಟನೇಕರ್ ಮತ್ತೆ ಆ ಸ್ಥಾ[...] ಅಲ್ಲವೆಂಬುದು ಹಲವು ಬ್ಲಾಕ್ ಅಧ್ಯಕ್ಷರೇ ಆಕ್ಷೇ[...] ಈತನ ಬದಲಿಗೆ ಬೇರೆ ಯಾರಿಗಾದರೂ ಟಿ[...] ಗೆಲ್ಲಿಸುತ್ತೇವೆ ಎಂದು ಬಹಳ ಹಿಂದೆಯೇ [...] ಹೇಳಿದ್ದರು. ದೇಶಪಾಂಡೆಗೂ ಈ ಫೋಟನೇ[...] ಅವಕಾಶ ಕೊಡುವ ಮನಸ್ಸು ಒಂಚೂರ[...] ದಳವಾಯಿ ಆಗಿದ್ದಾಗಿಂದಲೂ ದೇಶಪಾಂ[...] ಚಾನ್ಸ್ ಎಮ್ಮೆಲ್ಸಿಗೆ ಕೊಟ್ಟ ನಿದರ್ಶನವೇ [...] ಈ ಬಾರಿ ಆತ ಫೋಟನೇಕರ್‌ಗೆ ಮಣೆ[...] ತವರು ಕ್ಷೇತ್ರ ಹಳಿಯಾಳದ ಬಹುಸಂಖ್[...] ಸಮುದಾಯದ ಫೋಟನೇಕರ್‌ನ ಎದುರು [...] ಕಷ್ಟವೆಂಬ ಕಾರಣಕ್ಕೆ ಆತ ಅನಿವಾರ್ಯವಾಗಿ [...]


ಜಿಲ್ಲೆಯ ಅಷ್ಟೂ ಕಾಂಗ್ರೆಸ್ ಶಾಸಕರು [...] ಶಾಸಕರೂ ಫೋಟನೇಕರ್ ಪರವೇ ವಾದಿ[...]


ಭುಜಂಗ ಶೆಟ್ಟಿ



ರವೀಂದ್ರ ನಾಯ್ಕ್



ರವಿಕುಮಾರ್



ಪ್ರತಾಪ್‌ಚಂದ್ರ ಶೆಟ್ಟಿ



ಎಸ್.ಎಲ್. ಘೋಟನೇಕ[...]

ಧಾರವಾಡ: ದೋಸ್ತಿ ರಾಜಕಾರಣ ಮತ್ತು ದುಷ್ಮನಿ ಜುಗಲ್‌ಬಂದಿ



ವಾಗೀಶ್ ಪ್ರಸಾದ್


ಸಿದ್ದು ತೇಜಿ


ಪ್ರದೀಪ್ ಶೆಟ್ಟರ್


ನಾಗರಾಜ್ ಛಬ್ಬಿ

…ದ ವಾರವಷ್ಟೇ 'ಪತ್ರಿಕೆ' ಮಾಡಿದ್ದ ವರದಿ ಅಕ್ಷರಶಃ …ದೆ. ಬಿಜೆಪಿಯ ಶೆಟ್ಟರ್ ಮತ್ತು ಜೆಡಿಎಸ್‌ನ …ಟ್ಟಿಯ 'ಡೀಲ್ ದೋಸ್ತಿ' ಈ ವಾರ …ವಾಗಿಯೇ ಪ್ರಕಟಗೊಂಡಿದೆ. ಹಿಂದಿನ ಬುಧವಾರ …ಮುದ್ರಣಕ್ಕೆ ಹೋಗುವ ಕೊನೇ ಘಳಿಗೆಯವರೆಗೂ …ಪ್ ಮತ್ತು ಜೆಡಿಎಸ್ ಪಾರ್ಟಿಗಳ ಅಧಿಕೃತ …ದಾರರ ಪಟ್ಟಿ ಪ್ರಕಟವಾಗಿರಲಿಲ್ಲ. ಆದಾಗ್ಯೂ …-ಧಾರವಾಡ ಚುನಾವಣಾ ಕಣದ ರಂಗಿನಾಟದ …ು ಪತ್ರಿಕೆಗೆ ತಲುಪಿಯಾಗಿತ್ತು. ಶೆಟ್ಟರ್ ತನ್ನ ತಮ್ಮ …ನನ್ನು ಗೆಲ್ಲಿಸಿಕೊಳ್ಳಲು ಹಾಗೂ ಹೊರಟ್ಟಿ ತನ್ನ …ತ್ರದ ಎಂಎಲ್‌ಸಿ ಸ್ಥಾನ ಉಳಿಸಿಕೊಳ್ಳಲು 'ಮೈತ್ರಿ' …ೊಂಡಿರುವ ಗುಮಾನಿಯನ್ನು ಪತ್ರಿಕೆ ಮುಂದಿಟ್ಟಿತ್ತು. … ಶೆಟ್ಟರ್ ಗೆಲ್ಲಲು ನೆರವಾಗುವಂತೆ ಜೆಡಿಎಸ್‌ನಿಂದ …ಡಮ್ಮಿ ಕ್ಯಾಂಡಿಡೇಟನ್ನು ಕಣಕ್ಕಿಳಿಸುವುದು ಈ …ಪ್ಪಕಾರ ಹೊರಟ್ಟಿ ಮಾಡಬೇಕಿದ್ದ ಕಾಯಕವಾಗಿತ್ತು. …ಜೆಯೇ ಜೆಡಿಎಸ್ ಪಾರ್ಟಿಯನ್ನು ಗೆಲುವಿನಂಚಿಗೆ …ಯ್ಯಬಹುದಾಗಿದ್ದ ರಾಜಣ್ಣ ಕೊರವಿಗೆ ಟಿಕೆಟ್ … ವಾಗೀಶ್ ಪ್ರಸಾದ್ ಎಂಬಾತನಿಗೆ ಟಿಕೆಟ್ …ುವಂತೆ ಹೊರಟ್ಟಿ ನೋಡಿಕೊಂಡಿದ್ದಾರೆ. ಈ … ಮೂಲತಃ ಸವಣೂರು ತಾಲ್ಲೂಕಿನವನಾದರೂ …ರಿನ ಉದ್ಯಮಿ. ಹುಬ್ಬಳ್ಳಿ, ಧಾರವಾಡ, ಹಾವೇರಿ



ಬಸವರಾಜ್ ಹೊರಟ್ಟಿ

…ಣದಲ್ಲಿ ಈತನ ಮುಖ ಕಂಡವರಿಲ್ಲ, ಹಾಗಾಗಿ … ಇಲ್ಲಿ ನೆಪಕ್ಕೆಂಬಂತೆ ಸ್ಪರ್ಧಿಸಿದಂತಾಗಿದೆ. ಈ …ಹ ಪ್ರದೀಪ್ ಶೆಟ್ಟರ್‌ನ ಗೆಲುವಿನ ಹಾದಿ …ಷ್ಟು ಸುಗಮವಾಗಿದೆ. ಇನ್ನುಳಿದದ್ದೇನಿದ್ದರೂ ಜೋಡಿ …ಗರೊಂದಿಗಿನ ಸೆಣೆಸಾಟ ಅಷ್ಟೆ!

…ರವಾಡ ಜಿಲ್ಲೆಯ ಪಾಲಿಗೆ ಹೊರಟ್ಟಿ ಎಂದರೆ …ಸ್, ಜೆಡಿಎಸ್ ಎಂದರೆ ಹೊರಟ್ಟಿ …ಂತಾಗಿಹೋಗಿದೆ. ನವಲಗುಂದದಿಂದ …ಚ್.ಕೋನರೆಡ್ಡಿ ಜೆಡಿಎಸ್ ಶಾಸಕನಾಗಿ ಇದ್ದನಾದರು … ಕೂಡಾ ಹೊರಟ್ಟಿಯ ಕಿಚನ್ ಪ್ರಾಡಕ್ಟ್! …ನಾ ಸೆಣೆಸಾಟದ ಚುನಾವಣೆಗಳನ್ನು ಎದುರಿಸಲಾರದೆ …ಮತ ಕ್ಷೇತ್ರದಿಂದ ಸತತ ಐದು ಬಾರಿ ಎಂಎಲ್‌ಸಿ …ನ್ನು ಉಳಿಸಿಕೊಂಡು ಬಂದಿರುವ ಹೊರಟ್ಟಿ …ದ ಸರದಾರ ಎನಿಸಿದ್ದಾರೆ. ಆತನ ಗೆಲುವಿನ …ತಹುದೇ 'ಬಲಿಪೂಜೆ'ಗಳಿರುತ್ತವೆ ಎನ್ನುವುದನ್ನು …ಳುವ ಅಗತ್ಯವಿಲ್ಲ. ಈ ಸಲ ಎಲ್ಲಿ ತಾನು …ತ್ರ ಎಂಎಲ್‌ಸಿ ಎಲೆಕ್ಷನ್‌ನಲ್ಲಿ ಸೋತುಬಿಡುತ್ತೇನೋ ಎಂಬ ಭಯಕ್ಕೆ ಬಿದ್ದ ಹೊರಟ್ಟಿ, ಶೆಟ್ಟರ್‌ನೊಂದಿಗೆ ಮೆತ್ತಗೆ ಡೀಲ್ ಕುದುರಿಸಿಕೊಂಡಿದ್ದಾರೆ. ಶೆಟ್ಟರ್ ತಮ್ಮನ ಗೆಲುವಿಗೆ ನೆರವಾಗುವಂತೆ ಜೆಡಿಎಸ್‌ನಿಂದ ಡಮ್ಮಿ ಕ್ಯಾಂಡಿಡೇಟ್ ಹಾಕಿದರೆ ಅದಕ್ಕೆ ಪ್ರತಿಯಾಗಿ ಶಿಕ್ಷಕ ಕ್ಷೇತ್ರದ ಎಂಎಲ್‌ಸಿ ಚುನಾವಣೆಯಲ್ಲಿ ಬಿಜೆಪಿ ಓಟುಗಳು ಹೊರಟ್ಟಿಗೆ ತಲುಪುವಂತೆ ಮಾಡುವುದು ಶೆಟ್ಟರ್ ಜವಾಬ್ದಾರಿಯಾಗಿರುತ್ತದೆ. ಇದು 'ಮಹಾಮೈತ್ರಿ'ಯ ಸಾರಾಂಶ! ಅದರಂತೆ ಈಗಾಗಲೇ ಶಿಕ್ಷಕರ ಮತ ಕ್ಷೇತ್ರಕ್ಕೆ ಬಿಜೆಪಿ ಎಂ.ನಾಗರಾಜ ಎಂಬ ಡಮ್ಮಿ ಕ್ಯಾಂಡಿಡೇಟ್ ಕೊಡುಗೆಯಾಗಿ ನೀಡಿಯಾಗಿದೆ. ಕಳಸಾ-ಬಂಡೂರಿ ಹೋರಾಟದಿಂದಾಗಿ ಜೆಡಿಎಸ್ ಪಕ್ಷದ ರಾಜಣ್ಣ ಕೊರವಿ ಎಂಬ ಉತ್ಸಾಹಿ ಯುವಕ ಜನರ ಗಮನ ಸೆಳೆದಿದ್ದ. ಹೊರಟ್ಟಿಯ ಮನೆಮಗನಷ್ಟು ವಿಶ್ವಾಸ ಗಿಟ್ಟಿಸಿಕೊಂಡಿದ್ದ ಈತ ಈ ಸಲ ಟಿಕೇಟ್ ತನಗೇ ಸಿಗುತ್ತದೆಂಬ ವಿಶ್ವಾಸದಲ್ಲೂ ಇದ್ದ. ಆದರೆ ಸ್ವತಃ ಹೊರಟ್ಟಿಯೇ ರಾಜಣ್ಣ ಕೊರವಿಯ ಆಸೆಗೆ ತಣ್ಣೀರು ಹಾಕಿದ್ದಾರೆ. ಹಿಂದೊಮ್ಮೆ 'ಚುನಾವಣೆಯನ್ನು ಎದುರಿಸಬೇಕೆಂದರೆ ಕೋಟಿಕೋಟಿ ಹಣ ಬೇಕಾಗುತ್ತೆ, ಅಷ್ಟು ಹಣ ಕೊಟ್ಟವರಿಗೆ ಮಾತ್ರ ಟಿಕೇಟು' ಅಂತ ಅಣಿಮುತ್ತು ಉದುರಿಸಿ ಕರ್ನಾಟಕದ ಜನರ ಮುಂದೆ ಕೃತಾರ್ಥರಾಗಿದ್ದ ಜೆಡಿಎಸ್ ಕುಮಾರಣ್ಣ-ಹೊರಟ್ಟಿಯನ್ನು ನಂಬಿ ತೆನೆಹೊತ್ತಿದ್ದ ಆ ಯುವ ಪ್ರತಿಭೆಗೆ ಭಾರೀ ಮೋಸವಾಗಿದೆ.

ಹೊರಟ್ಟಿಯ ದೋಸ್ತಿ ವರ್ಕ್‌ಔಟ್ ಆಯ್ತು ಅಂತ ಶೆಟ್ಟರ್ ನಿರಾಯಾಸವಾಗಿ ಕೂರುವಂತಹ ಪರಿಸ್ಥಿತಿಯೇನೂ ಕಮಲ ಪಾಳೆಯದಲ್ಲಿ ಇಲ್ಲ. ಶೆಟ್ಟರ್ ಸೋಲಿನಿಂದ ಪಕ್ಷದೊಳಗೆ ತನಗಾಗಬಹುದಾದ ದೂರದೃಷ್ಟಿ ಲೆಕ್ಕಾಚಾರಗಳನ್ನು ಅಳೆದುತೂಗಿರುವ ಯಡ್ಡಿಯ ಮಾಸ್ಟರ್ ಮೈಂಡ್ ಆದಾಗಲೇ ರಣತಂತ್ರ ರಚಿಸಿ, ಸೇನಾನಿಗಳನ್ನು ಯುದ್ಧಭೂಮಿಗೆ ಅಟ್ಟಿಯಾಗಿದೆ. ತನ್ನೊಂದಿಗೆ ಕೆಜೆಪಿಗೆ ಬಂದು ಗುರುತಿಸಿಕೊಂಡಿದ್ದ ಶಿವಕುಮಾರ್ ಉದಾಸಿ, ಮೋಹನ ಲಿಂಬಿಕಾಯಿ, ಬೇವಿನಮರದ ಮೊದಲಾದವರಿಗೆ ರಹಸ್ಯ ಫರ್ಮಾನು ತಲುಪಿಸಿರುವ ಯಡ್ಡಿ, ಹೇಗಾದರು ಮಾಡಿ ಎಂಎಲ್‌ಸಿ ಎಲೆಕ್ಷನ್‌ನಲ್ಲಿ ಪ್ರದೀಪ ಶೆಟ್ಟರ ಮಕಾಡೆ ಮಲಗುವಂತೆ ಮಾಡಬೇಕೆನ್ನುವ ತನ್ನ ಮನದಾಸೆಯನ್ನು ತಿಳಿಸಿದ್ದಾರೆ. ಜೊತೆಗೆ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದರೂ ಲಿಂಗಾಯತ (ಗಾಣಿಗ) ಸಮುದಾಯಕ್ಕೆ ಸೇರಿದ ನಾಗರಾಜ ಛಬ್ಬಿಯತ್ತ ತಮ್ಮ ವಿಶ್ವಸನೀಯ ಮತಗಳು ಹರಿದುಹೋಗುವಂತೆ ನೋಡಿಕೊಳ್ಳಬೇಕೆನ್ನುವುದು ಯಡ್ಡಿ ಫರ್ಮಾನಿನ ಒನ್‌ಲೈನ್ ಸ್ಟೋರಿ. ಇದರ ಸುಳಿವಿಡಿದು, ಹೆದರಿರುವ ಜಗದೀಶ ಶೆಟ್ಟರ್ ಹೇಗಾದರೂ ಮಾಡಿ ತಮ್ಮ ಪ್ರದೀಪ ಶೆಟ್ಟರ್‌ನನ್ನು ಗೆಲ್ಲಿಸಿಕೊಳ್ಳಲು ಪ್ರಯಾಸ ಪಡುತ್ತಿದ್ದಾರೆ.

ಇತ್ತ ಕೈ ಪಾರ್ಟಿಯಲ್ಲೂ ಇಂತಹ ವಿಪರ್ಯಾಸಗಳಿಗೇನು ಕಮ್ಮಿಯಿಲ್ಲ. ತಮ್ಮ ಮತಗಳ ಸಂಖ್ಯೆ ಜಾಸ್ತಿ ಇದೆ ಎನ್ನುವ ಕಾರಣಕ್ಕೆ ಇಬ್ಬರಿಗೆ ಟಿಕೆಟ್ ನೀಡಿ ಕಾಂಗ್ರೆಸ್ ಯಡವಟ್ಟು ಮಾಡಿಕೊಂಡಿದೆ. ನಾಗರಾಜ್ ಛಬ್ಬಿ ಮತ್ತು ಶ್ರೀನಿವಾಸ್ ಮಾನೆ, ಈ ಇಬ್ಬರ ನಡುವೆ ಬಂಡಾಯವನ್ನು ಹತ್ತಿಕ್ಕಲು ಕಾಂಗ್ರೆಸ್ ಈ ಉಪಾಯ ಮಾಡಿರುವುದೇನೋ ಸರಿ, ಆದರೆ ತನ್ನ ತಮ್ಮ


ಜಗದೀಶ್ ಶೆಟ್ಟರ್

ಡಿ.ಆರ್.ಪಾಟೀಲ್ ಇಲ್ಲವೇ ಕಟ್ಟಾ ಅನುಯಾಯಿ ಎ.ಎಂ.ಹಿಂಡಸಗೇರಿಗೆ ಟಿಕೆಟು ನೀಡಬೇಕೆಂದು ಬೇಡಿಕೆ ಇಟ್ಟಿದ್ದ ಸಚಿವ ಎಚ್.ಕೆ.ಪಾಟೀಲ್ ಟೀಮಿಗೆ ಇದು ಭಾರೀ ಬೇಸರವನ್ನೇ ತರಿಸಿದೆ. ಒಬ್ಬರಿಗೆ ಕೊಟ್ಟಿದ್ದರೆ ಪರವಾಗಿಲ್ಲ, ಇಬ್ಬರಿಗೆ ಟಿಕೆಟು ನೀಡುವುದು ಖಚಿತವಾದಾಗ, ತಮ್ಮ ಬಣದ ಒಬ್ಬರಿಗಾದರು ಟಿಕೆಟ್ ನೀಡಬಹುದಿತ್ತಲ್ಲವೇ, ಎರಡಕ್ಕೆ ಎರಡೂ ವಿನಯ್ ಕುಲಕರ್ಣಿ ಗುಂಪಿನ ಪಾಲಾಗುವಂತೆ ಮಾಡಿದ್ದು ಸರಿಯಲ್ಲ ಎಂಬ ಮುನಿಸು ಪಾಟೀಲ್ ಗುಂಪಿನಲ್ಲಿದೆ. ಅವರು ಪಕ್ಷದ ಪರವಾಗಿ ಮತದಾರರ ಮುಂದೆ ವಕಾಲತ್ತು ವಹಿಸುವುದು ಡೌಟು. ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಶಾಸಕ ಕೋಳಿವಾಡ ಹಾಗೂ ಮಾಜಿ ಮಂತ್ರಿ ಕಮ್ ಕಲಘಟಗಿ ಶಾಸಕ ಸಂತೋಷ್ ಲಾಡ್ ಗೈರು ಇಂತಹದ್ದೊಂದು ಅನುಮಾನ ಈಗಾಗಲೇ ದೃಢಪಡಿಸಿಯಾಗಿದೆ. ಜಾತಿಯ ಕಾರಣಕ್ಕೆ ಶ್ರೀನಿವಾಸ್ ಮಾನೆಯನ್ನು ಬೆಂಬಲಿಸುವಂತೆ ಲಾಡ್ ತನ್ನ ಶಿಷ್ಯರಿಗೆ ಸಂದೇಶ ರವಾನಿಸಿದ್ದಾರೆ ಎನ್ನುವ ಮಾತು ಕೇಳಿಬರುತ್ತಿವೆಯಾದರು ನಂಬುವುದು ಕಷ್ಟ.

ಇವೆಲ್ಲ ಗೋಜಲುಗಳ ನಡುವೆ ಧಾರವಾಡ, ಗದಗ ಜಿಲ್ಲೆಯ ಮತಗಳಿಗಿಂತ ಹೆಚ್ಚು ಮತ ಹೊಂದಿರುವ ಹಾವೇರಿ ಜಿಲ್ಲೆಯನ್ನು ರಾಜಕೀಯವಾಗಿ ಕಡೆಗಣಿಸಲಾಗುತ್ತಿದೆ ಎನ್ನುವ ಆಕ್ರೋಶವೂ ಕೇಳಿಬರುತ್ತಿದೆ. ಬಿಜೆಪಿ ಹಾಗೂ ಕಾಂಗ್ರೆಸ್ ಹಾವೇರಿ ಜಿಲ್ಲೆಯವರಿಗೆ ಟಿಕೆಟ್ ನೀಡಿಲ್ಲ. ಹಾವೇರಿ ಜಿಲ್ಲೆಯ ಸವಣೂರು ತಾಲ್ಲೂಕಿನ ವಾಗೀಶ್ ಪ್ರಸಾದ್‌ಗೆ ಜೆಡಿಎಸ್ ಟಿಕೆಟ್ ನೀಡಿದೆಯಾದರು 'ಅವ ನಮ್ಮವ' ಎಂಬ ಅಭಿಮಾನ ಯಾರಲ್ಲೂ ಕಾಣಿಸುತ್ತಿಲ್ಲ. ಇಲ್ಲಿ ಗಮನಿಸಬೇಕಾದ ಮತ್ತೂ ಒಂದು ಅಂಶವಿದೆ. ಈಗ ಪ್ರಬಲ ಪೈಪೋಟಿ ಏರ್ಪಟ್ಟಿರುವ ಪ್ರದೀಪ್ ಶೆಟ್ಟರ್, ಶ್ರೀನಿವಾಸ ಮಾನೆ, ನಾಗರಾಜ್ ಛಬ್ಬಿ ಈ ಮೂವರೂ ಲಿಂಗಾಯತ ಜಾತಿಗೆ ಸೇರಿದವರೆ. ಲಿಂಗಾಯತರ ಹೊರತಾಗಿ ಇಲ್ಲಿ ಕುರುಬರ ಮತಗಳೂ ಗಣನೀಯ ಸಂಖ್ಯೆಯಲ್ಲಿದ್ದು ಆ ಜಾತಿಗೆ ಯಾವ ಪಕ್ಷವೂ ಟಿಕೆಟ್ ನೀಡಿಲ್ಲ ಎಂಬ ಅಸಮಾಧಾನವಿದೆ. ಅದನ್ನು ಲಾಭ ಮಾಡಿಕೊಳ್ಳಲು ಕಳಸಾ-ಬಂಡೂರಿ ಹೋರಾಟದಲ್ಲಿ ಜನಪ್ರಿಯತೆಗೆ ಬಂದಿರುವ ಸಿದ್ದು ತೇಜಿ ಎಂಬುವವರು ಸರ್ವೋದಯ ಪಕ್ಷ ಮತ್ತು ರೈತಸಂಘದಿಂದ ಕಣಕ್ಕೆ ಇಳಿದಿದ್ದಾರೆ. ಈತ ಕುರುಬ ಸಮುದಾಯಕ್ಕೆ ಸೇರಿರುವುದರಿಂದ ಕ್ಷೇತ್ರದ ಕುರುಬ ಮತಗಳನ್ನು ಸೆಳೆಯುವ ಸಾಧ್ಯತೆ ಇದೆ. ಹಾಗೇನಾದರು ಆದಲ್ಲಿ, ಅದು ಕಾಂಗ್ರೆಸ್‌ಗೆ ಭಾರೀ ಏಟು ನೀಡುವುದರಲ್ಲಿ ಸಂಶಯವಿಲ್ಲ. ಸಿದ್ದರಾಮಯ್ಯನ ಕಾರಣಕ್ಕೆ ಕಾಂಗ್ರೆಸ್‌ನ ಮಾನೆಗೊ, ಛಬ್ಬಿಗೊ ಸಂದಾಯವಾಗಬೇಕಿದ್ದ ಮತಗಳು ಜಾತಿಯ ಕಾರಣಕ್ಕೆ ಸಿದ್ದು ತೇಜಿಗೆ ಹರಿದುಹೋದರೆ ಲಾಭ ಆಗೋದು ಬಿಜೆಪಿಯ ಪ್ರದೀಪ್ ಶೆಟ್ಟರ್‌ಗೆ!


ಕಳೆದ ಬಾರಿ 15 ಸಾವಿರ ರೂಪಾಯಿಗೆ ಬಿಕರಿಯಾಗಿದ್ದ ಒಂದು ಮತ ಈ ಬಾರಿ 25 ಸಾವಿರ ಗಡಿ ದಾಟಿದೆ. ಈಗಾಗಲೇ ಮುಂಗಡವಾಗಿ 10 ಸಾವಿರ ಪಾವತಿಸಿರುವ ಅಭ್ಯರ್ಥಿಗಳು ಮುಂದಿನ ಬಾಕಿ ಹಣ ಹೊಂದಿಸಲು ತಯಾರಿ ನಡೆಸಿದ್ದಾರೆ. ಹಣದ ಥೈಲಿಯೊಂದಿಗೆ ಟಿಕೆಟ್ ಪಡೆದಿರುವ ನಾಗರಾಜ್ ಛಬ್ಬಿ ತಮ್ಮದೇ ಪಕ್ಷದ ಇನ್ನೊಬ್ಬ ಅಭ್ಯರ್ಥಿ ಶ್ರೀನಿವಾಸ್ ಮಾನೆ ಹಾಗೂ ಬಿಜೆಪಿಯ ಪ್ರದೀಪ್ ಶೆಟ್ಟರ್‌ನೊಂದಿಗೆ ಸೆಣಸಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಪ್ರತ್ಯೇಕವಾಗಿ ಚುನಾವಣಾ ಪ್ರಚಾರದಲ್ಲಿ ತೊಡಗಿರುವ ಛಬ್ಬಿ ತನಗೇ ಪ್ರಥಮ ಪ್ರಾಶಸ್ತ್ಯದ ಮತ ನೀಡಿ ಅಂತ ಕೇಳುತ್ತಿದ್ದಾನೆಯೇ ಹೊರತು ಇಬ್ಬರಿಗೂ ಮತ ನೀಡಿ ಎಂದು ಕೇಳುತ್ತಿಲ್ಲ. ಇದೂ ಕೂಡಾ ಕಾಂಗ್ರೆಸ್ ಪಾಲಿಗೆ ಮುಳ್ಳಾಗುವ ಸಾಧ್ಯತೆ ಇದೆ.

■ ಹುಬ್ಬಳ್ಳಿಯಾಂವ

…ಪಾಂಡೆಯನ್ನು ನಿಯಂತ್ರಿಸುವ ಹರಕು ಬಾಯಿ- …ನಾಲಿಗೆಯ ಘೋಟನೇಕರ್ ಈ ಶಾಸಕರಿಗೆಲ್ಲ …ಷ್ಟ. ದೇಶಪಾಂಡೆ ವಿರುದ್ಧ ತಿರುಗಿ ಬಿದ್ದಿರುವ …ರೆಲ್ಲ ಘೋಟನೇಕರ್‌ನ ಮುಂದಿಟ್ಟುಕೊಂಡೇ …ಯಿಸಿಕೊಳ್ಳುತ್ತಿದ್ದಾರೆ.

…ಸ್ ಮುನಿಸಿನಿಂದ ದೇಶಪಾಂಡೆ ಮತ್ತು ತುಂಬ …ನ ಶಾಸಕರೆಲ್ಲರೂ ಘೋಟನೇಕರ್ ಪರ ನಿಂತಿದ್ದಾರೆ. …ಜವಾಗೇ ನಿಷ್ಠಾವಂತ ಕಾಂಗ್ರೆಸಿಗರನ್ನು ಕೆರಳಿಸಿದೆ. …ತಿಕ್ರಮಣದಾರರ ಹೋರಾಟಗಾರ ಎ. ರವೀಂದ್ರ …ಕಾಂಗ್ರೆಸ್ ಟಿಕೆಟ್‌ಗೆ ತಿಪ್ಪರಲಾಗ ಹಾಕಿದ್ದರು. …ಬಿಯ ಕಾಗೋಡು ತಿಮ್ಮಪ್ಪ, ಹರಿಪ್ರಸಾದ್ …ತ್ತಡ ಹಾಕಿಸಿದ್ದರು. ಆದರೆ ದೇಶಪಾಂಡೆ ತಾಕತ್ತಿನ …ದಾವುದೂ ಕೆಲಸಕ್ಕೆ ಬರಲೇ ಇಲ್ಲ. ಜಿಲ್ಲೆಯ …ತ ದೀವರ ಕೋಮಿನ ರವೀಂದ್ರ ನಾಯ್ಕ್, …ದಾಯ ಅಭ್ಯರ್ಥಿಯಾಗಿ ಕಣಕ್ಕೆ ಧುಮುಕಿದ್ದಾರೆ. …ರೆ ಲಾಗಾಯ್ತಿನಿಂದಲೂ ಬುದ್ಧಿಪೂರ್ವಕವಾಗೇ …ಅನ್ಯಾಯ ಮಾಡುತ್ತ ಬಂದಿದ್ದಾರೆಂಬ ಮುನಿಸು …ದೆ. ಈ ಬಾರಿಯೂ ಬೇಕಂತಲೇ ದೇಶಪಾಂಡೆ …ಸ ಶಾಸಕರು ಗ್ಯಾಂಗ್ ಆಗಿ ದೀವರಿಗೆ ಮೋಸ ಮಾಡಿದ್ದಾರೆಂಬ ಭಾವನೆ ದಟ್ಟವಾಗಿ ವ್ಯಾಪಿಸಿದೆ.

ಜಿಲ್ಲೆಯ ಒಟ್ಟು ಸ್ಥಳೀಯಾಡಳಿತದ ಮತದಾರರಲ್ಲಿ ಅರ್ಧಕ್ಕಿಂತ ಹೆಚ್ಚು ಕಾಂಗ್ರೆಸ್ ಬೆಂಬಲಿಗರಿದ್ದಾರೆ. ಆದರೆ


ಜಯಪ್ರಕಾಶ್ ಹೆಗ್ಡೆ

ಈ ಬಾರಿ ರವಿನಾಯ್ಕನ ಎದುರು ಅಧಿಕೃತ ಅಭ್ಯರ್ಥಿ ಗೆಲ್ಲಲು ತಿಣುಕಾಡಬೇಕಾಗುತ್ತದೆ. ಪಾರ್ಟಿಯಲ್ಲಿನ ಅಸಮಾಧಾನದ ಜತೆಗೇ ಶೇಕಡಾ 30ರಷ್ಟಿರುವ ದೀವರ ಮತದಾರರು ಕಾಂಗ್ರೆಸ್‌ಗೆ ಓಟು ಕೊಡಲಾರರು. ಹಾಗೆಯೇ ಅರಣ್ಯ ಅತಿಕ್ರಮಣದಾರರು ಮತ್ತು ಅರಣ್ಯ ಅತಿಕ್ರಮಣದಾರರ ಕುಟುಂಬಸ್ಥರಾದ ಜನಪ್ರತಿನಿಧಿಗಳೂ ಗಣನೀಯವಾಗಿದ್ದಾರೆ. ಇವರೆಲ್ಲ ಹೋರಾಟಗಾರ ರವಿನಾಯ್ಕನಿಗೆ ಒಲಿಯುವ ಸಾಧ್ಯತೆಯಿದೆ.

ಜೆಡಿಎಸ್‌ನಿಂದ ಮಲೆಯಾಳಿ ಬಿಲ್ಲವ (ತಿಯಾಸ್) ಸಮುದಾಯದ ರವಿಕುಮಾರ್ ಎಂಬ ನಿಗೂಢ ದಂಧೆದಾರ ಅಖಾಡಕ್ಕೆ ಇಳಿದಿದ್ದಾನೆ. ಈತನಿಗೆ ಹಣವೇ ಅರ್ಹತೆ. ಕಳೆದ ಬಾರಿ ಈತನ ಅಣ್ಣ ಅನಿಲ್‌ಕುಮಾರ್ ಪಕ್ಷೇತರವಾಗಿ ಸ್ಪರ್ಧಿಸಿ ಭರ್ಜರಿ ಮತ ಪಡೆದಿದ್ದ. ಹಣ ಕೊಟ್ಟು ಓಟು ಖರೀದಿಸುವ ತಾಕತ್ತಿನ ರವಿಕುಮಾರ್‌ಗೆ ಅಣ್ಣ ಕಳೆದ ಬಾರಿ ಸಣ್ಣ ಅಂತರದಲ್ಲಿ ಸೋತದ್ದೇ ಎಲೆಕ್ಷನ್‌ಗೆ ನಿಲ್ಲುವ ಉಮೇದಿ ತಂದಿದೆ. ಕಳೆದ ಬಾರಿ ಈ ರವಿಕುಮಾರನೇ ಅಣ್ಣನ ಎಲೆಕ್ಷನ್ ಮ್ಯಾನೇಜರ್ ಆಗಿದ್ದರಿಂದ ಆತನಿಗೆ ಯುದ್ಧಾಂಗಣದ ಸಕಲ ಪರಿಚಯವಿದೆ. ಎಲೆಕ್ಷನ್ ಬಂದಾಗಷ್ಟೇ ಜೆಡಿಎಸ್ ಶಾಲು ಹಾಕಿಕೊಂಡು ಜಿಲ್ಲೆಗೆ ಬರುವ ಈ ಅಣ್ಣ-ತಮ್ಮ ದೊಡ್ಡ ಪಕ್ಷಗಳ ಹುರಿಯಾಳುಗಳಲ್ಲಿ ನಡುಕ ಮೂಡಿಸುವುದಂತೂ ಖರೆ.

ಉತ್ತರ ಕನ್ನಡ ಅಖಾಡ ಸೂಕ್ಷ್ಮವಾಗಿ ಅವಲೋಕಿಸಿದರೆ ಹಣದ ಹಣಾಹಣಿಯೇ ನಡೆಯುವ ಸಾಧ್ಯತೆ ಕಾಣಿಸುತ್ತದೆ. ಬಿಜೆಪಿ ಕಣಕ್ಕೆ ಇಳಿಸಿರುವ ಗಣಪತಿ ಉಳ್ವೇಕರ್ ಪರಿಚಯ ಕಾರವಾರದ ಆಚೆ ಚಿಡ್ಡಿಗಳಿಗೆ ಇಲ್ಲ. ಕಾರವಾರ ಬಂದರು ಮಾಫಿಯಾದ ಕಿಂಗ್‌ಪಿನ್ ಆಗಿರುವ ಈ ಉಳ್ವೇಕರ್‌ನ ಕಳ್ಳ ಕಾಸು ನೋಡಿಯೇ ಬಿಜೆಪಿಯ ಭೂಪರು ಗಂಟು ಬಿದ್ದಿದ್ದಾರೆ. ಕಳೆದ ಬಾರಿ ಕೇವಲ 500 ಮತ ಪಡೆದು ಠೇವಣಿ ಕಳೆದುಕೊಂಡಿದ್ದ ಬಿಜೆಪಿಯ ಅಭ್ಯರ್ಥಿ ವಿನೋದ್ ಪ್ರಭು ಗತಿಯೇ ಉಳ್ವೇಕರ್‌ಗೂ ಬರುತ್ತದೆಂದು ಸಂಘಿಗಳೇ ಹೇಳುತ್ತಿದ್ದಾರೆ.

ಕಾಂಗ್ರೆಸ್ ಒಳಗಿನ ಕಿಚ್ಚು ನೋಡಿದರೆ ದೇಶಪಾಂಡೆಗೆ ಪಾಠ ಕಲಿಸಲು ಘೋಟನೇಕರ್‌ನ ಸೋಲಿಸುವ ಸ್ಕೆಚ್ ಒಂದು ತುಂಬಾ ನಾಜೂಕಾಗಿ ಹೆಣೆಯಲಾಗುತ್ತಿರುವುದು ಕಾಣಿಸುತ್ತದೆ. ದಕ್ಷಿಣದಲ್ಲಿ ಆಸ್ಕರ್ ಫರ್ನಾಂಡಿಸ್ ಉತ್ತರದಲ್ಲಿ ದೇಶಪಾಂಡೆ ಸರ್ವಾಧಿಕಾರದಿಂದ ಕಾಂಗ್ರೆಸ್‌ಗೆ ಮುಕ್ತಿ ಸಿಗುವ ಪರ್ವಕಾಲವಂತೂ ಬಂದಿದೆ. ಅದನ್ನು ಕಾಂಗ್ರೆಸಿಗರು ಹೇಗೆ ಬಳಸಿಕೊಳ್ಳುತ್ತಾರೆಂಬುದೇ ಈಗಿರುವ ಕುತೂಹಲ.

■ ನಹುಷ

ಮಂಡ್ಯ ಮೈಷುಗರ್: ಹರ.. ಹರಾ 'ಮಹದೇವ

ಮಂಡ್ಯದ ಮೈಷುಗರ್ ಸಕ್ಕರೆ ಕಾರ್ಖಾನೆಯ ದುರ್ಗತಿ ಇಂದು ನಿನ್ನೆಯದಲ್ಲ. ಹೆಗ್ಗಣಗಳಂತೆ ಅಲ್ಲಿಗೆ ತೂರಿಕೊಳ್ಳುತ್ತಲೇ ಬಂದ ಭ್ರಷ್ಟ ಅಧಿಕಾರಿ ಮತ್ತು ಜನಪ್ರತಿನಿಧಿಗಳಿಂದಾಗಿ ಒಂದು ಕಾಲದ ಆರ್ಥಿಕ ಚಿಲುಮೆಯಂತಿದ್ದ ಮೈಷುಗರ್ ಇವತ್ತು ರೈತರ ತುತ್ತಿನ ಚೀಲವನ್ನೂ ತುಂಬಿಸಲಾರದ ಶೋಚನೆಗೆ ಬಂದುನಿಂತಿದೆ. ಕಾವೇರಿ ಕೊಳ್ಳದ ಕಬ್ಬು ಬೆಳೆಗಾರರ ಏಕೈಕ ಆಸರೆಯಂತಿದ್ದ ಮೈಷುಗರ್ ಕಾರ್ಖಾನೆಗೆ ಸದ್ಯಕ್ಕಂತು ಕಂಟಕಗಳು ದೂರವಾಗುವ ಲಕ್ಷಣಗಳೇ ಗೋಚರಿಸುತ್ತಿಲ್ಲ. ಕಬ್ಬು ಸುಗ್ಗಿಯ ಈ ವೇಳೆಗಾಗಲೇ ಹತ್ತಾರು ಸಾವಿರ ಟನ್ ಕಬ್ಬು ಅರೆಯಬೇಕಿದ್ದ ಕಾರ್ಖಾನೆ ಇದುವರೆಗೂ ತನ್ನ ಕ್ರಷಿಂಗ್ ಕಾರ್ಯ ಆರಂಭಿಸಿಲ್ಲವೆಂದರೆ ಜನಪ್ರತಿನಿಧಿಗಳಿಗೆ ಅದರ ಬಗ್ಗೆ ಅದಿನ್ನೆಂಥಾ ಆಸ್ಥೆ ಇದ್ದಿರಬೇಡ!




ಸದ್ಯದ ಮಟ್ಟಿಗಂತೂ ಮೈಷುಗರ್‌ಗೆ 'ಮಹದೇವ'ಗಳೇ ಮಹಾಪಾಯ ಎನಿಸಿದ್ದಾರೆ. ಒಬ್ಬರು ಸಕ್ಕರೆ ಸಚಿವ ಮಹದೇವ ಪ್ರಸಾದ್, ಮತ್ತೊಬ್ಬ ಇದೇ ಸಚಿವರ ಆತ್ಯಾಪ್ತ ಅಧಿಕಾರಿ ಎಚ್.ಆರ್.ಮಹದೇವ್. ಕೆಎಎಸ್ ಹುದ್ದೆಯಿಂದ ಬಡ್ತಿಯ ಮೇಲೆ ಐಎಎಸ್ ಶ್ರೇಣಿಗೆ ದಾಟಿಕೊಂಡ ಎಚ್.ಆರ್.ಮಹದೇವನೇ ಮೈಷುಗರ್ ಕಾರ್ಖಾನೆಯ ಹಾಲಿ ನಿರ್ದೇಶಕ. ಅವನ ದಯೆಯಿಂದಲೇ ಕಾರ್ಖಾನೆ ಇವತ್ತು ಕ್ರಷಿಂಗ್ ಆರಂಭಿಸುವುದಕ್ಕೂ ಪರದಾಡುವಂತಹ ಪರಿಸ್ಥಿತಿ ಎದುರಾಗಿರೋದು. ಸಚಿವ ಮಹದೇವ್ ಪ್ರಸಾದ್‌ರ ಕೃಪಾಕಟಾಕ್ಷ ತನ್ನ ಮೇಲಿದೆಯೆಂಬ ಏಕೈಕ ಕಾರಣಕ್ಕೆ ಇಡೀ ಮೈಷುಗರ್ ಆಡಳಿತಕ್ಕೇ ಜಡತ್ವ ಬರಿಸಿರುವ ಎಚ್.ಆರ್.ಮಹದೇವ್ ಅಕ್ಷರಶಃ ಹಿಟ್ಲರ್‌ನಂತೆ ಮುಕ್ಕುತ್ತಿದ್ದಾನೆ. ಈತನ ಅಪರಾತಪರಾಗಳನ್ನು ಅರ್ಜೆಂಟಾಗಿ ಅರ್ಥಮಾಡಿಕೊಂಡು ಕ್ರಮ ಕೈಗೊಳ್ಳದಿದ್ದರೆ ಸಕ್ಕರೆ ಸಚಿವ ಮಹದೇವ ಪ್ರಸಾದ್ ತಮ್ಮ ರಾಜಕೀಯ ಜೀವನದ ಬಹು ದೊಡ್ಡ ಕಳಂಕ ಹೊತ್ತುಕೊಳ್ಳಬೇಕಾಗಿ ಬಂದರೂ ಅಚ್ಚರಿಯಿಲ್ಲ; ಅದೂ ಮೈಷುಗರ್ ಕಾರ್ಖಾನೆಯ ವಿಚಾರದಲ್ಲಿ!

ಮೈಷುಗರ್‌ಗೆ 'ಮಹಾಘಾತ'!

ಅಂತೂಇಂತೂ ಎಚ್.ಆರ್.ಮಹದೇವ್ ಎಂಬ ಆಸಾಮಿ, ಮೈಷುಗರ್ ಕಾರ್ಖಾನೆಗೆ ಒಂದು ಗತಿ ಕಾಣಿಸಿಯೇ ಹೋಗಬೇಕೆಂದು ಪಣ ತೊಟ್ಟು ನಿಂತಂತಿದೆ. ಇಲ್ಲದೇ ಹೋಗಿದ್ದರೆ, ಕಾರ್ಖಾನೆಯ ಮಟ್ಟಿಗೆ ಬಹುದಿನಗಳಿಂದ ಕಾಮನ್ ಸಮಸ್ಯೆ ಎನಿಸಿಬಿಟ್ಟಿರುವ ಬಾಯ್ಲರ್‌ಗಳ ನೆಪವಿಟ್ಟುಕೊಂಡು ಮೈಷುಗರ್ ಕಾರ್ಖಾನೆಯನ್ನೇ ಮುಚ್ಚಬಿಡುತ್ತಿರಲಿಲ್ಲ. ಬಂಡವಾಳಶಾಹಿ ರಾಜಕಾರಣಿಗಳ ಕಬ್ಜಾದಲ್ಲಿರುವ ಸಾಕಷ್ಟು ಸಕ್ಕರೆ ಕಾರ್ಖಾನೆಗಳು ಇದುವರೆಗೂ ರೈತರ ಬಾಕಿ ಪಾವತಿಸದೆ, ಕ್ರಷಿಂಗ್ ಕಾರ್ಯವನ್ನೂ ಆರಂಭಿಸದೆ ರೈತದ್ರೋಹಿ ಉನ್ಮಾದದಲ್ಲಿವೆ. ಇಂತಹ ಸಮಯದಲ್ಲಿ ಸರ್ಕಾರ ಅವುಗಳ ಮೇಲೆ ಚಾಟಿ ಬೀಸಿ, ಬಿಸಿ ಮುಟ್ಟಿಸಬೇಕಿತ್ತು, ಆದರೆ ಸರ್ಕಾರಿ ಸ್ವಾಮ್ಯದ ಮೈಷುಗರ್ ಕಾರ್ಖಾನೆಯೇ ಕ್ರಷಿಂಗ್ ಕಾರ್ಯ ಆರಂಭಿಸದೆ ಸೋಗಲಾಡಿಯಂತೆ ಮಲಗಿರುವುದರಿಂದ ಅಂತಹದ್ದೊಂದು ನೈತಿಕ ಗಟ್ಟಿತನವನ್ನೂ ಸರ್ಕಾರ ಕಳೆದುಕೊಂಡಂತಾಗಿದೆ.

ಅಸಲಿಗೆ ಮೈಷುಗರ್ ಕಾರ್ಖಾನೆಯ ಎರಡೂ ಬಾಯ್ಲರ್‌ಗಳು ವಿಪರೀತ ಹಾಳಾಗಿಹೋಗಿರುವುದು ಹೊಸ ಸಂಶೋಧನೆ ಏನಲ್ಲ, ಕಾರ್ಖಾನೆಯ ಕಾರ್ಮಿಕರಿಗೆ ಮಾತ್ರವಲ್ಲದೇ, ಕಬ್ಬು ಸರಬರಾಜು ಮಾಡುವ ರೈತರಿಗೂ ಇದು ಹಳೆಯ ಸುದ್ದಿಯೇ. ಆದಾಗ್ಯೂ ಕಾರ್ಖಾನೆ ಕಬ್ಬು ಅರೆಯುವಿಕೆಯನ್ನು ಮುಂದುವರಿಸಿಕೊಂಡು ಬಂದಿತ್ತು, ಆದರೆ ಮಹದೇವ್ ಬಾಯ್ಲರ್‌ಗಳ ನೆಪವಿಟ್ಟುಕೊಂಡು ಕಾರ್ಖಾನೆಯನ್ನೇ ಸಂಪೂರ್ಣ ತಟಸ್ಥತೆಗೆ ತಳ್ಳಿದ್ದಾನೆ. ಕಾರ್ಮಿಕ ಮೂಲಗಳಿಂದ ಕೇಳಿಬರುತ್ತಿರುವ ಗುಲ್ಲುಗಳ ಪ್ರಕಾರ ಕಳೆದ ಇಷ್ಟೂ ವರ್ಷಗಳಲ್ಲಿ ಬಾಯ್ಲರ್‌ಗಳು ಎಷ್ಟು ಹಾಳಾಗಿದ್ದವೋ, ಅಷ್ಟು ಕಳೆದ ಒಂದೇ ವರ್ಷದಲ್ಲಿ ಹಾಳಾಗಿವೆಯಂತೆ. ಅರ್ಥಾತ್ ಎಂ.ಡಿ. ಮಹದೇವ್‌ನ ಆಪ್ತರೇ ಈ ಬಾಯ್ಲರ್‌ಗಳನ್ನು ಅತ್ಯಂತ ವ್ಯವಸ್ಥಿತವಾಗಿ ಹಾಳುಮಾಡಿದ್ದಾರೆ ಎನ್ನಲಾಗುತ್ತಿದೆ.

ಹಾಗಂತ ಸರ್ಕಾರವೇನು ಕೈಕಟ್ಟಿ ಕೂತಿಲ್ಲ, ಕಳೆದ ಆರು ತಿಂಗಳಿನಿಂದ ಬಾಯ್ಲರ್‌ಗಳ ರಿಪೇರಿಗೆಂದು ಕೋಟಿಗಟ್ಟಲೆ ಹಣವನ್ನು ಬಿಡುಗಡೆ ಮಾಡಿದೆ. ಆ ಹಣ, ಅಕೌಂಟ್ ಪುಸ್ತಕದ ಪ್ರಕಾರ, ಬಹುತೇಕ ಖರ್ಚೂ ಆಗಿಹೋಗಿದೆ. ಆದರೂ ಕಾರ್ಖಾನೆ ಮಾತ್ರ ತನ್ನ ಕೆಲಸ ಶುರು ಮಾಡಿಲ್ಲ. ಇಂತಹದ್ದೊಂದು ಪ್ರಶ್ನೆಯನ್ನು ಎಂ.ಡಿ.ಮಹದೇವ್ ಮುಂದಿರಿಸಿದರೆ ಬಲು ಚಾಣಾಕ್ಷತೆಯಿಂದ 'ಬಾಯ್ಲರ್‌ನ ಸಮಸ್ಯೆಗೆ ಕಾರಣ ಈ ಹಿಂದೆ ಆಡಳಿತ ನಡೆಸಿದವರು ಮತ್ತು ಕಾರ್ಮಿಕರು ಕಾರಣ' ಎಂಬ ಆರೋಪ ಮಾಡುತ್ತ ವಿಷಯಾಂತರಿಸುವ ಹುನ್ನಾರ ನಡೆಸುತ್ತಾರೆಯೇ ಹೊರತು ಸೀದಾಸಾದಾ ಉತ್ತರ ಕೊಡುವ ಗೋಜಿಗೇ ಹೋಗುವುದಿಲ್ಲ, ಯಾಕೆಂದರೆ, ಅಂತಹದ್ದೊಂದು ಸಾಹಸಕ್ಕೇನಾದರು ಕೈಹಾಕಿದರೆ ತನ್ನ ಬುಡಕ್ಕೇ ಬಿಸಿ ತಗಲುತ್ತದೆಂಬುದು ಆತನಿಗೆ ಚೆನ್ನಾಗಿ ಗೊತ್ತು, 'ಮಾತನಾಡುವ ಕಲೆ ನನಗೆ ಒಲಿದು ಬಂದಿದೆ' ಎಂದು ಬಹಿರಂಗವಾಗಿ ತುಂಬಿದ ಸಭೆಗಳಲ್ಲೇ ಬಲು ವಿಶ್ವಾಸದಿಂದ ಹೇಳಿಕೊಳ್ಳುವ ಮಹದೇವ್ ಈ ವಿಚಾರದಲ್ಲೂ ಅದನ್ನು ಬಳಸಿಕೊಳ್ಳುತ್ತಾರೆ.



ಹಾಗಾಗಿಯೇ ತಾನು ಉಸ್ತುವಾರಿ ವಹಿಸಿದ ಸಂದರ್ಭದಲ್ಲೇ ಕಾರ್ಖಾನೆಯ ಕ್ರಷಿಂಗ್ ಇತಿಹಾಸದಲ್ಲೇ ಅತ್ಯಂತ ಹೆಚ್ಚು ಬಾರಿ ನಿಲುಗಡೆ ಆಗಿತ್ತೆಂಬುದನ್ನು, ಈ ರೀತಿ ನಿಲುಗಡೆ ಹೊಂದಲು ತನ್ನ ಅವಧಿಯಲ್ಲಿ ಬಾಯ್ಲರ್‌ನ ಸಮಸ್ಯೆ ಅತ್ಯಂತ ಹೆಚ್ಚು ತೀವ್ರಗೊಂಡಿದ್ದೇ ಕಾರಣ ಎಂಬುದನ್ನು ಅಪ್ಪಿತಪ್ಪಿಯೂ ಬಿಟ್ಟುಕೊಡುವುದಿಲ್ಲ, ಆತ ಎಂಡಿ ಆದಮೇಲೆ, ಕಲುಷಿತ ನೀರನ್ನು ಓಡಿಸಿದ್ದು ಗೊತ್ತಾಗಬಾರದೆಂದು ಬಾಯ್ಲರ್‌ನ ಲಾಗ್ ಪುಸ್ತಕವನ್ನೇ ಖಾಲಿ ಬಿಟ್ಟಿದ್ದು, ಬಾಯ್ಲರ್‌ಗೆ ಬೆಂಕಿ ಹತ್ತಿಕೊಂಡರೂ ನಿಲ್ಲಿಸದೇ ಓಡಿಸಿದಂತಹ ಗಂಭೀರ ಪ್ರಮಾದಗಳಿಂದಾಗಿಯೇ ಇವತ್ತು ಅವು ಈ ಸ್ಥಿತಿಗೆ ಬಂದು ತಲುಪಿರೋದು. ಈ ಕುರಿತ ಆರೋಪಪಟ್ಟಿಯು ಅಗತ್ಯ ದಾಖಲಾತಿಗಳೊಂದಿಗೆ ಈಗಾಗಲೇ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಕಾರ್ಯದರ್ಶಿಗೂ ತಲುಪಿಯಾಗಿದೆ. ಆದರೆ ಸಚಿವ ಮಹದೇವಪ್ರಸಾದ್‌ರ ಶ್ರೀರಕ್ಷೆ ಎಂಡಿ ಮಹದೇವ್‌ನನ್ನು ಬಚಾವು ಮಾಡುತ್ತಿರೋದೆ ಮೈಷುಗರ್ ಪಾಲಿನ ಲೇಟೆಸ್ಟ್ ದುರಂತ!

ಮಹದೇವನ 'ಹಿಟ್ಲರಿಸಂ'

ಕಾರ್ಖಾನೆಯ ಸಮಸ್ಯೆ ಕುರಿತು ಪ್ರಶ್ನೆ ಇಟ್ಟಾಗಲೆಲ್ಲ ಕಳೆದ 15 ವರ್ಷದಲ್ಲಿ ಕಾರ್ಖಾನೆಯಲ್ಲಿ ಆಗಿರುವ ಸಮಸ್ಯೆಗಳನ್ನೇ ಪುಂಖಾನುಪುಂಖವಾಗಿ ಪಟ್ಟಿ ಮಾಡುತ್ತಾ ಪ್ರಶ್ನೆ ಕೇಳಿದವರೇ ತಲೆದೂಗುವಂತೆ ವ್ಯಾಖ್ಯಾನಿಸುವ ಮಹದೇವ್ ತಾನು ಅಧಿಕಾರ ವಹಿಸಿಕೊಂಡ ಒಂದೂವರೆ ವರ್ಷದಲ್ಲಿ ಈ ಸಮಸ್ಯೆಗಳನ್ನು ನೀಗಿಸಲು ಮಾಡಿದ್ದೇನು ಎಂಬುದನ್ನೇ ಮರೆಸಿಬಿಡುತ್ತಾನೆ. ತನ್ನ ತಪ್ಪುಗಳು ಹೊರಬೀಳಬಾರದೆಂದೇ ಕಾರ್ಖಾನೆಯ ಎರಡನೇ ಹಂತದ ಬಹುತೇಕ ಅಧಿಕಾರಿಗಳಿಗೆ ಅಧಿಕಾರ ಕೊಡದೇ, ಎಲ್ಲವನ್ನೂ ಮುಚ್ಚಿಡುವ ವ್ಯವಸ್ಥಿತ ಪ್ರಯತ್ನ ನಡೆಸುತ್ತಿದ್ದಾನೆನ್ನುವ ಆರೋಪವೂ ಆತನ ಮೇಲಿದೆ. ಹಾಗೆ ನೋಡಿದರೆ, ಕಾರ್ಖಾನೆಗೆ ಒಬ್ಬ ಮುಖ್ಯ-ಆಡಳಿತಾಧಿಕಾರಿಯೇ ಇಲ್ಲ. ತಾನೇ ನೇಮಕ ಮಾಡಿಕೊಂಡಿರುವ ಸಿಬ್ಬಂದಿ-ಅಧಿಕಾರಿಗಳಿಗೇ ಅದರ ಹೆಚ್ಚುವರಿ ಜವಾಬ್ದಾರಿಯನ್ನೂ ನೀಡಲಾಗಿದೆ. ಸಾಮಾನ್ಯವಾಗಿ ಕೆಎಎಸ್ ಅಧಿಕಾರಿ ನಿರ್ವಹಿಸುವ ಈ ಹುದ್ದೆಯನ್ನು ಸುದೀರ್ಘ ಅವಧಿಗೆ ಖಾಲಿ ಬಿಟ್ಟಿರುವುದು ಏತಕ್ಕೆ ಎಂಬುದಕ್ಕೆ ಎಂ.ಡಿ. ಉತ್ತರವನ್ನೇ ನೀಡುವುದಿಲ್ಲ, ಇನ್ನು ತಾನೇ ನೇಮಕ ಮಾಡಿಕೊಂಡಿದ್ದ ಜನರಲ್ ಮ್ಯಾನೇಜರ್ ಪ್ರೇಮ್‌ಕುಮಾರ್, ತನ್ನ ತಾಳಕ್ಕೆ ತಕ್ಕಂತೆ ಕುಣಿಯಲಿಲ್ಲ ಎಂಬ ಕಾರಣಕ್ಕೆ 6 ತಿಂಗಳಿಂದ ಪೂರಾ ಡಮ್ಮಿ ಮಾಡಿಟ್ಟಿದ್ದ. ಈಗ ಆತನನ್ನು ಮನೆಗೇ ಕಳಿಸಲಾಗಿದೆ. ಕೆಲವು ಇಂಜಿನಿಯರ್‌ಗಳಿಗೂ ಇದೇ ಗತಿ ತಂದಿಟ್ಟಿದ್ದಾನೆ. ಒಂದೋ ಅವರನ್ನು ಕೆಲಸದಿಂದ ಬಿಡುಗಡೆಗೊಳಿಸಿದ್ದಾನೆ, ಇಲ್ಲವೇ ಅಮಾನತ್ತಿನಲ್ಲಿಟ್ಟಿದ್ದಾನೆ.

ಕೆಲಸವನ್ನೇ ಆರಂಭಿಸಲಾರದಷ್ಟು ಕೃಶವಾಗಿ ಹೋಗಿರುವ ಕಾರ್ಖಾನೆಯ ಕೆಲಸಕ್ಕೆಂದು ತನಗಿಷ್ಟ ಬಂದಷ್ಟು ವೇತನ ನಿಗದಿ ಮಾಡಿ ಹೊಸದಾಗಿ ಕೆಲವರನ್ನು ಇದೇ ಮಹದೇವ್ ನೇಮಕ ಮಾಡಿಕೊಂಡಿದ್ದಾನೆ. ಇಂತಹ ನೇಮಕಗಳಲ್ಲಿ ಕಂಪೆನಿಯ ನಿಯಮಾವಳಿಗಳಿಗೆ ನಯಾಪೈಸೆಂ ನೀಡಲಾಗಿಲ್ಲ ಎಂಬುದನ್ನು ಬಿಡಿಸಿ ಹೇಳುವ ಅಗತ್ಯವಿಲ್ಲ, ವಿಪರ್ಯಾಸವೆಂದರೆ, ಅಂತಹ ಅ ನೇಮಕಾತಿಗಳೇ ಇವತ್ತು ಮಹದೇವನನ್ನು ಕೊ ಕಟಕಟೆಯಲ್ಲಿ ನಿಲ್ಲುವಂತೆ ಮಾಡಿದರೂ ಅಚ್ಚ ಇದಕ್ಕೊಂದು ಉದಾಹರಣೆಯೆಂದರೆ ಮೆಕ್ಯಾನಿ ವಿಭಾಗದ ಸಹಾಯಕ ಇಂಜಿನಿಯರ್ ಆನಂದ ಪ್ರಕರಣ. ಸದರಿ ಆನಂದ್ ಬಾಬುವನ್ನು 12.01.2015ರಂದು ಮಹದೇವ್‌ರ ಖುದ್ದು ಆಸಕ್ತಿಯ ಮೇಲೆ ನೇಮಕ ಮಾಡಿಕೊಳ್ಳಲಾಗಿ ಇಂತಹ ನೇಮಕಕ್ಕೆ ಮುಂಚೆ ಪತ್ರಿಕಾ ಪ್ರಕಟಣ ಹೊರಡಿಸಬೇಕು. ಅದನ್ನು ಮಾಡಲಿಲ್ಲ, ನೇರ ಸಂದರ್ಶನದ ಆಹ್ವಾನವನ್ನೂ ನೀಡಲಿಲ್ಲ, ಆಯ್ ಸಮಿತಿ ಮುಂದೆಯೂ ತರಲಿಲ್ಲ, ಮೀಸಲಾತಿ ಮಾನದಂಡ ಅನುಸರಿಸಲಿಲ್ಲ, ಗರಿಷ್ಠ ಮತ್ತು ವೇತನಶ್ರೇಣಿ ಅನುಸರಿಸಲಿಲ್ಲ, ಇಷ್ಟೆಲ್ಲಾ ನಿಯ ಉಲ್ಲಂಘಿಸಿ ನೇಮಿಸಿಕೊಂಡಿರುವ ವ್ಯಕ್ತಿಯ ಅ ವಿದ್ಯಾರ್ಹತೆಯೇ ಗಾಬರಿ ಹುಟ್ಟಿಸುವಂತದ್ದು.

ಬೋಗಸ್ ಸರ್ಟಿಫಿಕೇಟ್


ಮೆಕ್ಯಾನಿಕಲ್ ವಿಭಾಗದ ಸಹಾಯಕ ಇಂಜಿನಿಯರ್ ಹುದ್ದೆಗೆ ಆಯ್ಕೆಯಾಗಬೇಕೆಂದ ಡಿಪ್ಲೊಮಾ ಇನ್ ಮೆಕ್ಯಾನಿಕಲ್ ಇಂಜಿನಿಯರಿ ಮತ್ತು 4 ವರ್ಷದ ಅನುಭವ ಇರಬೇಕೆನ್ನುವ ಮಾನದಂಡವಿದೆ. ಆನಂದ್ ಬಾಬುವಿನ ಅನು ಕಥೆ ಒತ್ತಟ್ಟಿಗಿರಲಿ, ಆತ ಮಿನಿಮಮ್ ಡಿಪ್ಲೊ ಮಾಡಿಲ್ಲ! ಆದರೆ, ಡಿಪ್ಲೊಮಾ ಸರ್ಟಿಫಿಕೇಟ್ ಇದೆ!! ಬಟ್, ಆ ಸರ್ಟಿಫಿಕೇಟ್ ಕೊಟ್ಟಿರುವ ಸಂಸ್ಥೆಯೇ ಅಸ್ತಿತ್ವದಲ್ಲಿಲ್ಲ!!!


ಆತನ ಡಿಪ್ಲೊಮಾ ಸರ್ಟಿಫಿಕೇಟ್‌ನಲ್ಲಿ, ನ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್‌ನಿಂದ ಡಿಪ್ಲೊಮಾ ಮಾಡಿದ್ದಾನೆ ಎಂದು ಹೇಳಲಾಗಿ ಸರ್ಟಿಫಿಕೇಟ್‌ನಲ್ಲಿ ಆ ಸಂಸ್ಥೆಯು ಮಹಾರಾಷ್ಟ್ರ ಇದೆ ಎಂದು ತೋರಿಸಲಾಗಿದೆಯೇ ಹೊರತು ಊರು, ಯಾವ ತಾಲ್ಲೂಕು, ಕಡೇಪಕ್ಷ ಯಾವ ಅಂತಲೂ ಇಲ್ಲ, ಮಹಾರಾಷ್ಟ್ರದ ತಾಂತ್ರಿಕ ಶಿ ಮಂಡಳಿಗೆ ಸಂಯೋಜಿತವಾಗಿರುವ ಇಡೀ ಪ ಇದರ ಹೆಸರೇ ಇಲ್ಲ, ಇದೊಂದು ಕರೆಸ್ಪಾಂಡೆ ಕೋರ್ಸ್ ಅಂತಲೂ ಕೆಲವರು ವಾದಿಸುತ್ತಾರೆ ಶಿಕ್ಷಣವನ್ನು ಕರೆಸ್ಪಾಂಡೆನ್ಸ್‌ನಲ್ಲಿ ಕಲಿತು ಫ್ಯಾಕ್ಟರಿ ಕೆಲಸ ಮಾಡಲು ಸಾಧ್ಯವೇ ಎಂಬ ಪ್ರಶ್ನೆಯನ್ ಪಕ್ಕಕ್ಕಿಡೋಣ. ಆದರೆ, ಡಿಪ್ಲೊಮಾ ಕೋರ್ಸ್ ಕರೆಸ್ಪಾಂಡೆನ್ಸ್ ಕೋರ್ಸ್‌ನಲ್ಲಿ ಒದಗಿಸುವ ಕಾ ಯಾವುದು ಎಂದು ನೋಡಿದರೆ, ಕರೆಸ್ಪಾಂಡೆನ್ ಕೋರ್ಸ್ ನಡೆಸುವ ಮಹಾರಾಷ್ಟ್ರದ ವಿದ್ಯಾಲ ಪಟ್ಟಿಯಲ್ಲೂ ಈ ಸಂಸ್ಥೆಯ ಹೆಸರಿಲ್ಲ,

ಅಸಲಿ ಸಂಗತಿ ಏನೆಂದರೆ, ಯಾವ ವಿಶ್ವವಿದ್ಯಾಲಯಕ್ಕೂ, ಶಿಕ್ಷಣ ಮಂಡಳಿಗಳಿಗೂ ಸಂಯೋಜಿತವಾಗದ ನ್ಯಾಷನಲ್ ಇನ್‌ಸ್ಟಿಟ್ಯೂ ಮ್ಯಾನೇಜ್‌ಮೆಂಟ್ ಎಂಬ ಸಂಸ್ಥೆಯೊಂದು ಮಹಾರಾಷ್ಟ್ರದಲ್ಲಿತ್ತು, ಅದು ಯಾವ ಕೋರ್ಸ್ ನಡೆಸುತ್ತಿರಲಿಲ್ಲ, ಅಸಲಿಗೆ ಕಾಲೇಜೇ ಇರಲಿಲ್ಲ ಬದಲಿಗೆ ನಕಲಿ ಸರ್ಟಿಫಿಕೇಟ್‌ಗಳನ್ನು ಸಾಕಷ ಜನರಿಗೆ ನೀಡುತ್ತಿತ್ತು, ಆ ಸಂಸ್ಥೆಯ ಮೇಲೆ ಮತ್ತು ಸೂರತ್ ಪೊಲೀಸರು ಈಗಾಗಲೇ ದಾಖಲಿಸಿದ್ದಾರೆ. ಆದರೆ ಸದರಿ ಆನಂದ್‌ಬಾ ಸರ್ಟಿಫಿಕೇಟ್ ತಂದಿರುವ ನ್ಯಾಷನಲ್ ಇನ್‌ಸ್ ಆಫ್ ಟೆಕ್ನಾಲಜಿಯದ್ದು ಬೋರ್ಡೂ ಸಹ ಕುರಿತು ಎಲ್ಲಾ ಮಾಹಿತಿ ಕಲೆ ಹಾಕಿರುವ ಕೆಲವು ಜವಾಬ್ದಾರಿಯುತ ನಾಗರಿಕರು ಸ್ಥಳೀ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸುವ ಆಲೋಚನೆಯಲ್ಲಿರುವ ಮಾಹಿತಿ 'ಪತ್ರಿಕೆ'ಗೆ ಹಾಗೇನಾದರು ಆದಲ್ಲಿ ಮಹದೇವ್ ಮತ್ತು ಇಬ್ಬರೂ ಕಟಕಟೆ ಏರುವುದು ಗ್ಯಾರಂಟಿ.

ಮಗ್ಗಲು ಬದಲಿಸುವ ಹುನ್ನಾರ

ಸಮಸ್ಯೆಗಳನ್ನು ತನಗಿಷ್ಟ ಬಂದಂತೆ ತಿರು ಹಾಕೋದು ಎಂಡಿ ಮಹದೇವ್‌ಗೆ ಕರಗತವ ಹೋಗಿದೆ. ತನ್ನ ತಪ್ಪುಗಳು ಬಯಲಿಗೆ ಬೀ ಎಂಬ ಸಣ್ಣ ಸುಳಿವು ಸಿಕ್ಕರೂ ಸಾಕು, ಮತ್ತೆ ಸಣ್ಣಪುಟ್ಟ ತಪ್ಪುಗಳನ್ನು ಮುಂದಿಟ್ಟು ಜನರ ದೃಷ್ಟಿಯನ್ನೇ ಮತ್ತೊಂದೆಡೆಗೆ ತಿರುಗಿಸುವುದು


ಮಹಾದೇವ್


ಆನಂದ್ ಬಾಬು

ಪಾರ್ಟಿ ಕಟ್ಟುವ ಜವಾಬ್ದಾರಿ ಜಗದ್ಗುರುಗಳಿಗೆ ಬಿದ್ದಿದೆಯಂತಲ್ಲಾ

ಥೂತ್ತೇರಿ

ಯಾಹೂ

...ತೇ ಉಸಿರಿರುವವರೆಗೂ ದೇಶಕ್ಕಾಗಿ ಹೋರಾಡಿ ...ವನಂತೆ ನಮ್ಮ ಭಾಸ್ಕರ್‌ರಾವ್ ಎಂಬ ಲೋಕಾಯುಕ್ತ ...ಜಿನಾಮೆ ಕೆರೆದು ವಜಾ ಅವಮಾನದಿಂದ ತಪ್ಪಿಸಿ ...ಕೊಂತಲ್ಲಾ. ಮಾನ ಅವಮಾನಗಳೆಂಬ ಪದಗಳೇ ...ಗೆ ಗೊತ್ತಿಲ್ಲವೇನೊ ಎಂಬಷ್ಟು ನಿರ್ಲಜ್ಜನಾಗಿ ನಡೆದು ... ಈತನ ಪದಚ್ಯುತಿಗಾಗಿ ಲೋಕಾಯುಕ್ತ ಕಾಯ್ದೆಯನ್ನೇ ...ದಿ ಮಾಡಬೇಕಾಯಿತು. ಆಗಲೂ ಆರಾಮವಾಗಿ ...ನ ಪ್ರಕರಣಗಳನ್ನ ವೀಕ್ಷಿಸುತ್ತಾ ಕುಳಿತಿದ್ದ ಈತನ ...ಕೆ ನೋಡಿದರೆ ಭಂಡತನವೇ ಬೆಚ್ಚಿರಬಹುದು. ...ಷ್ಣ ಹೆಗಡೆ ಕಾಲದಲ್ಲಿ ಜಾರಿಗೆ ಬಂದ ಈ ಲೋಕಾ ... ಹಲವು ದಾಖಲೆಗಳನ್ನು ಮಾಡಿದೆ. ಸಂತೋಷ್ ...ವರು ಯಡಿಯೂರಪ್ಪನ ಟೀಮು ಬಳ್ಳಾರಿ ಗುಡ್ಡಗಳನ್ನ ಸಿಂಗಾಪುರದ ಮುಖಾಂತರ ಚೈನಾಕ್ಕೆ ಮಾರಿದ ...ವನ್ನು ಶೋಧಿಸಿ ಆ ಬಗ್ಗೆ ಸಂಪುಟವನ್ನೇ ತಯಾರಿಸಿ ...ದ ಮುಂದಿಟ್ಟುಹೋಗಿ ರುವಾಗ, ಈಗ ಈ ಭಾಸ್ಕರನ ...ಯನ್ನು ಶೋಧಿಸಿ ಸರಕಾರದ ಮುಂದಿಡುವಂತಹ ಬಂದಿದೆಯಲ್ಲಾ, ಥೂತ್ತೇರಿ!!

* * *

ಭಾಸ್ಕರನೇನೋ ತೊಲಗಿದ. ಆದರೆ ಕಾನೂನು ...ಂಡವನಾದ್ದರಿಂದ ಪಿಂಚಣಿ ಬಾಪ್ತು ಯಾರ ನಿವೃತ್ತಿಯ ...ಮಕ್ಕೂ ಚ್ಯುತಿಬಾರದಂತೆ ವಜಾಗೊಳ್ಳುವ ಮುನ್ನ ...ದ್ದಾನೆ. ಆದರೆ ಲೋಕಾಯುಕ್ತ ನ್ಯಾಯಮೂರ್ತಿಯೇ ...ಎಗ್ಗೂಇಲ್ಲದೆ ಮುಕ್ಕುತ್ತಿರುವಾಗ ಇನ್ನುಳಿದ ಕೈಕೆಳಗಿನ ಸುಮ್ಮನಿರಲು ಸಾಧ್ಯವೆ. ಹಾಗೆಯೇ ಲೋಕಾಯುಕ್ತ ಎ.ಎನ್. ಕರಿಬಸವನ ಗೌಡ ಎಂಬ ಹೆಗ್ಗಣ ...ಲೇ ಇರುವ ಬಿಲಗಳೇ ಇಲ್ಲ ಮಾಡದಿರುವ ಆಸ್ತಿಗಳೇ ...ಯಾವಾಗ ಭಾಸ್ಕರನ ಭಾನಗಡಿಯನ್ನು ಹತ್ತಿರದಿಂದ ...ದನೊ, ಆ ಕೂಡಲೇ ತಾನೂ ಕಾರ್ಯ ತಂತ್ರನಾಗಿ ...ಹಳ್ಳಿಯಲ್ಲಿ ತಾಯಿ ಹೆಸರಲ್ಲಿ ಇಪ್ಪತ್ತು ಎಕರೆ ತೋಟ, ...ಗ್ಗ, ಹೊಸಪೇಟೆ, ಬೆಂಗಳೂರಿನ ರಾಜಾಜಿನಗರದಲ್ಲಿ ...ಚಿತ್ರದುರ್ಗದಲ್ಲಿ ಸೈಟು ಮಾಡಿದ. ಚಿತ್ರದುರ್ಗದ ...ಕೋಗುಂಟೆ ಜೊತೆ ಸೇರಿಕೊಂಡು ಬಡ್ಡಿ ವ್ಯವಹಾರ ...ಸ. ಲೋಕಾಯುಕ್ತದಲ್ಲೇ ಇದ್ದ ಈತ ಮಾಡಿಕೊಂಡ ...ಂದ ಬೆಚ್ಚಿಬಿದ್ದ ಜನಗಳು ಮುಖ್ಯಮಂತ್ರಿಗೆ ದೂರು ...ರೂ ಏನೂ ಆಗಲಿಲ್ಲವಂತಲ್ಲಾ, ಥೂತ್ತೇರಿ!!

* * *

ಕರ್ನಾಟಕದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಒಂದು ಸಮತೂಕದ ಪಾರ್ಟಿ ಇರಬೇಕೆಂದು ಪ್ರಜ್ಞಾವಂತರು ಯೋಚಿಸಿದಂತೆಲ್ಲಾ ಜೆಡಿಎಸ್ ಪಾರ್ಟಿ ಕುಸಿಯುತ್ತಲೇ ಹೊರಟಿದೆಯಂತಲ್ಲಾ. ಇದರ ಕಾರ್ಯವೈಖರಿಯ ಇತಿಹಾಸವನ್ನು ನೋಡಿದರೆ ಶಾನೆ ಉತ್ತರ ಸಿಕ್ಕುವ ಸಂಭವವಿದೆ. ಹಾಸನದಲ್ಲಿ ನಡೆವ ದನಗಳ ಜಾತ್ರೆಯಲ್ಲಿ ಸುಲಭದ ರೇಟಿಗೆ ಸಿಕ್ಕುವ ಹೋರಿಗರುಗಳನ್ನು ಕೊಳ್ಳುವುದು, ಅವುಗಳಿಗೆ ಯಥೇಚ್ಛವಾಗಿ ಹುಲ್ಲು ಹಿಂಡಿ ಹುಳ್ಳಿ ಕೊಟ್ಟು ಸಾಕುವುದು, ಕೊಬ್ಬಿದ ಆ ದನ ತಿರುಗಿ ಹಾಯಲು ಬಂದಾಗ ಅದನ್ನು ಹತ್ತಿಕ್ಕಲು ನೋಡುವುದು ಇಲ್ಲ ಸಾಬರಿಗೆ ಮಾರಿ ಬಿಡುವುದು... ಇಂತಹ ಕೆಲಸ ದೇವೇಗೌಡರಿಂದ ಕಳೆದ ಶತಮಾನದ ಅಂತ್ಯಭಾಗದಿಂದಲೂ ನಡೆದುಕೊಂಡು ಬಂದಿದೆಯಲ್ಲಾ, ಉದಾಹರಣೆ ಕೊಡುವುದಾದರೆ ಎಬಿವಿಪಿ ಹುಡುಗನಂತಿದ್ದ ಬಿ.ಎಲ್. ಶಂಕರ್‌ನನ್ನು ಬೆಳೆಸಿದರು. ಆತ "ನಾನೇನು ಕಡಿಮೆ. ನಾನು ಹೆಗಡೆ ಮಟ್ಟದ ನಾಯಕ" ಎಂದಾಗ ಕುಮಾರಣ್ಣನಿಂದ ಅವಾಚ್ಯವಾಗಿ ನಿಂದಿಸಿ ಓಡಿಸಿದರಂತಲ್ಲಾ, ಥೂತ್ತೇರಿ!!

* * *

ಇನ್ನ ಗೌಡರು ಬೆಳೆಸಿ ನಿರ್ನಾಮ ಮಾಡಲು ಯತ್ನಿಸಿದವರ ಪಟ್ಟಿ ಬಹಳ ದೊಡ್ಡದಿದೆ. ಈ ಪೈಕಿ ಸಿದ್ದು ನಿರ್ನಾಮ ಸಾಧ್ಯವಾಗಲಿಲ್ಲ. ಅಹಿಂದ ವರ್ಗ ಅವರನ್ನು ರಕ್ಷಿಸಿತು. ಆದರೆ ಅದೆಷ್ಟೋ ಜನ ಉಳಿದು ಬೆಳೆಯಲಾರದೆ ಹುತಾತ್ಮರಾಗಿ ಹೋದರು. ಈ ಪೈಕಿ ರಾಮಯ್ಯ, ನಾಗೇಗೌಡ, ಭೈರೇಗೌಡ, ಪುಟ್ಟಸ್ವಾಮಿಗೌಡ ಇತ್ಯಾದಿ... ಅತಿರಥ ಮಹಾರಥರ ದಂಡೇ ಇದೆ. ಆದರೆ ಈಗ ಗೌಡರ ಕುವರರ ಕೆಂಗಣ್ಣಿಗೆ ಗುರಿಯಾಗಿರುವ ಚೆಲುವಣ್ಣ, ಬಾಲಣ್ಣ ಮತ್ತು ಜಮ್ಮೀರಣ್ಣ ಬಲವಾಗಿಯೇ ಸೆಡ್ಡು ಹೊಡೆದಿದ್ದಾರಂತಲ್ಲಾ. ಈ ಪೈಕಿ ಚೆಲುವಣ್ಣ ಗೌಡರಿಗೆ ಬಹಳ ಖಾಸಿ ಮಾಡಿದ್ದಾನಂತೆ. ಏಕೆಂದರೆ ಸಣ್ಣಪುಟ್ಟ ರಸ್ತೆಗೆ ಮಣ್ಣು ಹುಗ್ಗಿ ಬಿಲ್ಲು ಮಾಡಿಕೊಳ್ಳುತ್ತಿದ್ದವನನ್ನು ನಾಗಮಂಗಲದಲ್ಲಿ ನಾಟಿ ಹಾಕಿ, ಬೆಳೆಸಿ, ಆರೋಗ್ಯ ಮತ್ತು ಸಾರಿಗೆ ಇಲಾಖೆ ಸಚಿವನನ್ನಾಗಿಸಿ, ಕೋಟ್ಯಾಂತರ ರೂ. ಮಾಡಿಕೊಂಡು, ಮೂರು ಕೋಟಿ ರೂ. ಮನೆ ಕಟ್ಟಿಕೊಳ್ಳಲು ಅವಕಾಶ ಮಾಡಿಕೊಟ್ಟಿರುವಾಗ ಆತ ನಮಗೆ ವಿಧೇಯನಾಗಿರುವುದು ಬಿಟ್ಟು ಬದಲಿ ನಾಯಕನಂತಾಡು ತ್ತಿರುವುದು ಅಕ್ಷಮ್ಯ, ನಮ್ಮ ಒಂದು ಜೆಡಿಎಸ್ ಸೀಟು ಹೋದರೆ ಹೋಗಲಿ, ಮುಂದಿನ ಚುನಾವಣೆಗೆ ಮಗ್ಗ ಮಲಗಿಸಬೇಕೆಂದು ದೇವು, ಕುಮಾರದ್ವಯರು ಶಪಥ ಮಾಡಿದ್ದಾರಂತಲ್ಲಾ, ಥೂತ್ತೇರಿ!!

* * *

ಜೆಡಿಎಸ್ ಹೀಗೆ ದಾಯಾದಿ ಕಲಹದಲ್ಲಿ ಕ್ಷೀಣಿಸುತ್ತಿರುವಾಗಲೇ ಅತ್ತ ಬಿಜೆಪಿಗಳು ಪೇಜಾವರ ಎಂಬ ಜಗದ್ಗುರುವಿಗೆ ಪಾರ್ಟಿ ಕಟ್ಟುವ ಜವಾಬ್ದಾರಿ ವಹಿಸಿ ನಿಶ್ಚಿಂತೆಯಿಂದಿವೆಯಂತಲ್ಲಾ. ಸದರಿ ಜಗದ್ಗುರು ತನ್ನ ಗೊಗ್ಗರುದನಿಯಲ್ಲೇ ಒದರುತ್ತ ನೇರ ಬಿಜೆಪಿಗೆ ಮತ ಕೇಳುವ ಬದಲು "ರಾಮಮಂದಿರ ಕಟ್ಟಲೇ ಬೇಕು. ಅದಕ್ಕಾಗಿ ಸಂಗ್ರಹಿಸಿದ ಇಟ್ಟಿಗೆ ಮಳೆಗಾಳಿಗೆ ಕರಗುತ್ತಿದೆ. ಮಂದಿರ ಕಟ್ಟಲು ದೇಶದಾದ್ಯಂತ ಸಂಗ್ರಹಿಸಿದ ಹಣ ಕರಗಿಹೋಗಿದೆ. ಆದ್ದರಿಂದ ಮಂದಿರ ಕಟ್ಟಲು ಆರಂಭಿಸಿದ ಕೂಡಲೇ ಮತ್ತೊಮ್ಮೆ ದೇಶ ತಿರುಗಿ ಹಣ ಸಂಗ್ರಹಿಸಬಹುದು. ಈಗಾಗಲೇ ನನ್ನ ತುಲಾಭಾರದಿಂದ ಕರ್ನಾಟಕದಲ್ಲಿ ಲಕ್ಷಾಂತರ ಹಣ ಸಂಗ್ರಹವಾಗಿದೆ. ಅದರಲ್ಲಿ ಸ್ವಲ್ಪ ಭಾಗವನ್ನು ಬೇಕಾದರೆ ಕೊಡುತ್ತೇನೆ. ನನ್ನ ಕಣ್ಮುಂದೆ ರಾಮಮಂದಿರ ತಲೆ ಎತ್ತಿ ನಿಲ್ಲಬೇಕು. ಯಜ್ಞ ಹೋಮ, ಹವನದಿಂದ ಉದ್ಘಾಟನೆಗೊಳ್ಳಬೇಕು. ರಾಮನಂತಹ ಶ್ರೇಷ್ಠ ವ್ಯಕ್ತಿಯಾದ ಮೋದಿಯಿಂದಲೇ ಉದ್ಘಾಟನೆಗೊಳ್ಳಬೇಕು. ಅಲ್ಲಿಗೆ ನಾವು ಕೆಡವಿಸಿದ ಮಸೀದಿ ಜಾಗದಲ್ಲಿ ಮಂದಿರ ತಲೆಯೆತ್ತಿದ್ದು ನೋಡಿ ನಾವು ನೆಮ್ಮದಿಯಾಗಿ ನಿರ್ಗಮಿಸುತ್ತೇವೆ" ಎಂದು ಮಾತ್ರ ಹೇಳಿಲ್ಲವಂತಲ್ಲಾ, ಥೂತ್ತೇರಿ!!

* * *




ಈ ಕಾಂಗ್ರೆಸ್ ಪಾರ್ಟಿಗೆ ಜನ ಬುದ್ಧಿ ಕಲಿಸಿ ಸಮಾಧಾನಗೊಂಡ ಮೇಲೆ ಮತ್ತೆ ಪವರಿಗೆ ತಂದಿದ್ದಾರೆಯೇ ಹೊರತು ಇದಾಗಿಯೇ ಬುದ್ಧಿ ಕಲಿತು ಸರಿಯಾಗಿ ನಡೆದುಕೊಂಡ ಉದಾಹರಣೆ ಕಡಿಮೆ. ಎಮ್ಮೆಲ್ಸಿ ಚುನಾವಣೆಯಲ್ಲಿ ಇದು ಆಯ್ಕೆ ಮಾಡಿರುವ ಅಭ್ಯರ್ಥಿಗಳ ಪೈಕಿ ನಾಗಮಂಗಲದ ಶಿವರಾಮೇಗೌಡ ಎಲ್ಲಾ ಪಾರ್ಟಿ ಸುತ್ತಿ ಬಂದವನು. ಕೊಲೆ ಆರೋಪದಡಿ ಜೈಲು ಅನುಭವಿಸಿದವನು. ಮಂಡ್ಯ ಜಿಲ್ಲೆಯಲ್ಲಿ ನಾಗಮಂಗಲ ಬಿಟ್ಟರೆ ಬೇರೆ ನೆಲೆಯಿಲ್ಲದವನು. ಆದರೂ ಕೂಡ ಆತ ಎಮ್ಮೆಲ್ಸಿ ಟಿಕೆಟ್ ಪಡೆಯುತ್ತಾನೆಂದರೆ ಅದು ಡಿಕೆಶಿ ಪ್ರಭಾವದಿಂದಲೇ ಇರಬೇಕು. ಈ ಡಿಕೆಶಿ ರಾಜಕಾರಣದ ಶೈಲಿಗೆ ಶಿವರಾಮೇಗೌಡನಂತವರೇ ಬೇಕು. ಎಷ್ಟೇ ಆಗಲಿ, ಎಸ್ಸೆಂ ಕೃಷ್ಣ ಮುಖ್ಯಮಂತ್ರಿಯಾಗುವುದಕ್ಕೆ ಮುನ್ನ ಶಿವರಾಮೇಗೌಡ ಮಂತ್ರಿಯಾಗಿ ಪ್ರಮಾಣವಚನ ತೆಗೆದುಕೊಳ್ಳಲು ಸಿಂಗಾಪುರಕ್ಕೆ ಹೋಗಿ ಜೋಡಿ ಸೂಟ್ ಹೊಲಿಸಿಕೊಂಡಿದ್ದರಲ್ಲವೆ. ಆ ಸೂಟುಗಳೀಗ ಕೆಲಸಕ್ಕೆ ಬರಬಹುದು. ಅದೂ ಶಿವರಾಮೇಗೌಡ ಗೆದ್ದರೆ. ಸದ್ಯಕ್ಕೆ ಓಟಿನ ಬೆಲೆ ಈಗ 1ಕ್ಕೆ 10 ಸಾವಿರವಿದೆಯಂತಲ್ಲಾ, ಥೂತ್ತೇರಿ!! ■

...ಗೆ ಸಾಕ್ಷಿ. ಯಾವಾಗ ಬಾಯ್ಲರ್ ಪುರಾಣ, ... ನೇಮಕಾತಿ, ಕಾರ್ಖಾನೆ ಕ್ರಷಿಂಗ್ ...ಸದಷ್ಟೂ ಕೃಶವಾಗಿರುವ ವಿಚಾರಗಳು ಜನರ ... ಬರಲಾರಂಭಿಸಿದವೊ ಆಗ ಆತ ಹೂಡಿದ ...ವೇ ಬೇನಾಮಿ ನೋಟಿಸ್ ಅಸ್ತ್ರ. ...ನೆಯಲ್ಲಿ ಬೇನಾಮಿ ಹೆಸರಿನಲ್ಲಿ ಕೆಲಸ ...ತ್ತಿದ್ದಾರೆ ಎಂದು 60ಕ್ಕೂ ಹೆಚ್ಚು ಕಾರ್ಮಿಕರಿಗೆ ...ವ್ ನೋಟಿಸ್ ನೀಡಿದ್ದಾನೆ. ಅವರಲ್ಲಿ ...ಕರು ಅಂತಹ ಯಾವ ತಪ್ಪೂ ಮಾಡದೇ, ...ನೆಗಾಗಿ 2-3 ದಶಕ ದುಡಿದು ಈಗ ...ಮ ಅಂಚಿನಲ್ಲಿರುವವರು. ಕಾರ್ಖಾನೆಗಾಗಿ 30 ...ದುಡಿದ ಇಂತಹ ಕಾರ್ಮಿಕರಿಗೆ ಬೇನಾಮಿ ...ಸ್ ನೀಡುವ ಮೊದಲು ನಿಜಕ್ಕೂ ಎಷ್ಟು ಜನ ...ವರು ಇರಬಹುದು ಎಂಬುದನ್ನು ...ಲಿಸುವ ಗೋಜಿಗೂ ಆತ ಹೋಗಿಲ್ಲ, ಅವರಲ್ಲಿ ... ನಿಜಕ್ಕೂ ಬೇನಾಮಿ ಇರಬಹುದಾದರೂ, ...ಗಟು ನೋಟಿಸ್ ನೀಡುವುದು ಯಾವ ...ಮ ಬೀರಬಹುದು ಎಂದು ಮಾನವೀಯ ...ಲ್ಲಿ ಆಲೋಚಿಸುವ ಇರಾದೆಯೂ ಆತನಗಿಲ್ಲ. ...ಷ್ಟೊಂದು ಪ್ರಮಾಣದಲ್ಲಿ ಬೇನಾಮಿ ...ದ್ದಾರೆ ಎಂದು ಆರೋಪಿಸಿ ನೋಟಿಸ್ ...ವುದು ಮಾತ್ರವಲ್ಲದೇ, ತನ್ನ ನೋಟಿಸಿನ ವಿವರ ...ಲ್ಲಿ ಬರುವಂತೆ ನೋಡಿಕೊಂಡಿದ್ದಾನೆ. ಯಾರೇ ...ಮಾಡಿದ್ದರೂ ಸರ್ಕಾರದ ಅಧಿಕಾರಿಯಾಗಿ ಅವರ ...ಕ್ರಮ ತೆಗೆದುಕೊಳ್ಳುವುದು ಉನ್ನತ ...ಲ್ಲಿರುವವರ ಕರ್ತವ್ಯ, ಆ ಅವಕಾಶವೂ ...ನ್ ಮುಂದಿತ್ತು, ಆದರೆ ಮಹದೇವ್‌ರ ...ನೇ ಬೇರೆ ಇದೆ; ತನ್ನ ಅದಕ್ಷತೆ ಹಾಗೂ ...ನ್ನು ಮುಚ್ಚಿಟ್ಟುಕೊಳ್ಳಲು ಕಂಪನಿಯ ನೌಕರರ ...ಸಾರಾಸಗಟು ಆರೋಪ ಮಾಡಿ ...ಂಡಿಸುವುದು ಆತನ ಹುನ್ನಾರ. ...ಗೆ ನೋಡಿದರೆ, ತಾನೇ ಆಸ್ಥೆ ವಹಿಸಿ ನೇಮಕ ...ಂಡಿರುವ ಆನಂದ್‌ಬಾಬು ಆಯ್ಕೆಯೇ ...ವಿದ್ದು, ಅಷ್ಟು ಜನ ಕಾರ್ಮಿಕರಿಗೆ ...ಕಾಗಿ ನೋಟಿಸ್ ನೀಡಿರುವ ಎಂಡಿ ಸಾಹೇಬರು ಈ ತಪ್ಪಿಗೆ ಎಂತಹ ಶಿಕ್ಷೆ ಕೊಟ್ಟುಕೊಳ್ಳುತ್ತಾರೆ? ಆತ ಶಿಕ್ಷೆ ಕೊಟ್ಟುಕೊಳ್ಳುತ್ತಾನೊ, ಇಲ್ಲವೋ ಗೊತ್ತಿಲ್ಲ; ಆದರೆ ಆನಂದ್‌ಬಾಬು ಪ್ರಕರಣದಲ್ಲಿ ಕೆಲವರು ದೂರು ದಾಖಲಿಸಲು ಸಜ್ಜಾಗಿರುವುದರಿಂದ ಎಂಡಿ ಮಹದೇವ್‌ಗೆ ನ್ಯಾಯಾಲಯವೇ ಶಿಕ್ಷೆ ಕೊಡುವ ಕಾಲ ಸನ್ನಿಹಿತವಾಗಿದೆ.

ಮೈಷುಗರ್ಸ್ ಎಂಬ ಪಾಪದ ಸಂಸ್ಥೆಯ ಪಾಲಿಗೆ ಇಂತಹ ಕರ್ಮಕಾಂಡಗಳ ಜುಗಲ್‌ಬಂದಿ ಹೊಸದೇನೂ ಅಲ್ಲ, ಅಸಲಿಗೆ ಪ್ರತಿ ಅಧ್ಯಕ್ಷ, ನಿರ್ದೇಶಕ, ಆಡಳಿತ ಮಂಡಳಿ ಸದಸ್ಯರು, ಅಧಿಕಾರಿಗಳ ಭರ್ಜರಿ ತಿನ್ನಾಟಕ್ಕೆ ತುತ್ತಾಗಿಯೇ ಅದು ಇವತ್ತು ಈ ದುಸ್ಥಿತಿಗೆ ಜಾರಿಕೊಂಡಿದೆ. ಅಂತದ್ದರಲ್ಲಿ ಈ ಮಹದೇವ್ ಎಂಬುವನದು ಮತ್ತೊಂದು ಹೊಸ ಅಧ್ಯಾಯವಷ್ಟೆ. ಆದರೆ ಅಸಲೀ ವಿಷಯ ಇರೋದು, ಮೈಷುಗರ್ ಕಾರ್ಖಾನೆ ಯಾವಾಗ ಕ್ರಷಿಂಗ್ ಆರಂಭಿಸುತ್ತದೆ ಎನ್ನುವ ಪ್ರಶ್ನೆ? ಯಾಕೆಂದರೆ ಇದು ಈ ಭಾಗದ ಕಬ್ಬು ಬೆಳೆಗಾರರ ಪ್ರಧಾನ ಆರ್ಥಿಕ ಮೂಲವಾಗಿದೆ. ಅದೇ ನಿಂತುಹೋದರೆ, ರೈತನ ಬದುಕಿನಿಂದ ಜೀವಜಲ ಒಮ್ಮೆಲೇ ಹಿಂಗಿಹೋಗುತ್ತೆ. ಮಹದೇವ್‌ನನ್ನು ಅಲ್ಲಿಂದ ತೊಲಗಿಸದ ಹೊರತು ಕ್ರಷಿಂಗ್ ಕಾರ್ಯ ಸಾಧ್ಯವಿಲ್ಲದ ಮಾತು ಎಂಬ ಅನಿಸಿಕೆಯೂ ರೈತ ವಲಯದಲ್ಲಿ ದಟ್ಟವಾಗುತ್ತಿದೆ. ಇದಕ್ಕೆ ಸರ್ಕಾರವೇ ಉತ್ತರ ಕೊಡಬೇಕು. ಅಂದಹಾಗೆ, ಎಚ್.ಆರ್.ಮಹದೇವ್ ಮೈಷುಗರ್‌ನಲ್ಲಿ ನಿಯಮಾವಳಿಗಳನ್ನು ಗಾಳಿಗೆ ತೂರಿ ಹಣ ಮಾಡಲು ನಿಂತಿರುವುದೇ ಸಚಿವ ಮಹದೇವಪ್ರಸಾದ್‌ಗೆ 'ಫೀಡ್' ಮಾಡಲು ಎಂಬ ಆರೋಪ ಈಗಷ್ಟೇ ಜೀವಪಡೆಯುತ್ತಿದೆ. ಇದರ ಕಾರಣಕರ್ತರು ಯಾರು, ಈ ಆರೋಪದ ಸತ್ಯಾಸತ್ಯತೆಯ ತಾಕತ್ತು ಎಂತದ್ದೆನ್ನುವುದು ಇದುವರೆಗೂ ತಿಳಿದುಬಂದಿಲ್ಲ; ಹಾಗಂತ ಕೈಕಟ್ಟಿ ಕೂತರೆ ಸಚಿವ ಮಹದೇವ ಪ್ರಸಾದ್‌ರ ಇಮೇಜು 'ತೂತು' ಬೀಳೋದರಲ್ಲಿ ಸಂಶಯವೇ ಇಲ್ಲ.

■ ವರದಿಗಾರ

ಜನಸಂಸ್ಕೃತಿ/ಅವಿರತ ಪುಸ್ತಕ/ ಬೆಂಗಳೂರು ಆರ್ಟ್ ಫೌಂಡೇಶನ್‌ರಿಂದ



ಈಗ ಇರಬೇಕಿತ್ತು ಲಂಕೇಶ್

ಚಿತ್ರೋತ್ಸವ

20-12-2015,
ಬೆಳಗ್ಗೆ 11ಕ್ಕೆ: ಎಲ್ಲಿಂದಲೋ ಬಂದವರು
ಮಧ್ಯಾಹ್ನ 3ಕ್ಕೆ: ಅನುರೂಪ

21-12-2015, ಬೆಳಗ್ಗೆ 11ಕ್ಕೆ: ಪಲ್ಲವಿ
ಸ್ಥಳ: ಬಾದಾಮಿ ಹೌಸ್,
ಬಿಬಿಎಂಪಿ ಕೇಂದ್ರ ಕಚೇರಿ ಎದುರು

22-12-2015 ಬೆಳಗ್ಗೆ 11ಕ್ಕೆ
ವಿಚಾರ ಸಂಕಿರಣ

ಗೋಷ್ಠಿ 1
ಜಾಣಜಾಣೆಯರು ಕಂಡ ಲಂಕೇಶ್
ಡಾ|| ಶ್ರೀನಿವಾಸಗೌಡ
ರೇಖಾರಾಣಿ

ಗೋಷ್ಠಿ 2
ಅಂದಿನ ಲಂಕೇಶ್ ಪತ್ರಿಕೆ ಮತ್ತು
ಇಂದಿನ ಸಮೂಹ ಮಾಧ್ಯಮಗಳು
ಶೂದ್ರ ಶ್ರೀನಿವಾಸ
ಬಿ. ಚಂದ್ರೇಗೌಡ

ಸಮಾರೋಪ : 5-30ಕ್ಕೆ
ಲಂಕೇಶ್ ಅನುಭವ ಮಂಟಪ
ಎಂ.ಜಿ. ಸತ್ಯ
ಲಂಕೇಶ್ ವ್ಯಕ್ತಿತ್ವ
ಟಿ.ಎನ್. ಸೀತಾರಾಂ
ಸಾಹಿತಿಗಳ ಸಾಹಿತ್ಯ ಲಂಕೇಶ್
ಎಸ್. ಸಿದ್ದಲಿಂಗಯ್ಯ
ನಾ ಕಾಣದ ಲಂಕೇಶ್
ಕೆ.ಎ. ದಯಾನಂದ್
ಈಗ ಇರಬೇಕಿತ್ತು ಲಂಕೇಶ್
ಸಿ.ಎಸ್. ದ್ವಾರಕಾನಾಥ್

ಸಮನ್ವಯ
ಶ್ರೀನಿವಾಸ್ ಜಿ. ಕಪ್ಪಣ್ಣ

ಸಂಜೆ : 7.15 ರಿಂದ 10ರ ತನಕ
ಲಂಕೇಶ ಕವಿತೆಗಳ ರಂಗರೂಪಕ
ವಿಜಯನಗರ ಬಿಂಬ ಕಲಾವಿದರಿಂದ
ಸ್ಥಳ: ನಯನ ರಂಗಮಂದಿರ, ಕನ್ನಡ ಭವನ


ಕೆಂಪೇಗೌಡರ ವೀರಮರಣದ ಕಗ್ಗಂಟು

ಅಗೆದಷ್ಟೂ ಬಗೆದಷ್ಟೂ ಕಗ್ಗಂಟಾಗುತ್ತಿರುವ ನಾಡಪ್ರಭು ಕೆಂಪೇಗೌಡರ ವೀರಮರಣದ ಪ್ರಶ್ನೆಗೆ ಉತ್ತರದ ಸಾಮೀಪ್ಯವೊಂದನ್ನು ಕಾಲವೇ ಕಲ್ಪಿಸಿಕೊಟ್ಟಿತೆ?


ಬೆಂಗಳೂರು ವಿಶ್ವವಿದ್ಯಾಲಯದ ಇತಿಹಾಸಕಾರ ಶೇಕ್ ಮಸ್ತಾನ್ ನಡೆಸಿದ ತನಿಖೆ, ಕಳೆದೊಂದು ತಿಂಗಳಿನಿಂದ ಕೈಗೊಂಡ ಸಂಶೋಧನೆ ಮತ್ತು ಕಾಕತಾಳೀಯವೆಂಬಂತೆ ಸಿಗುತ್ತಿರುವ ಶಾಸನಗಳೆಲ್ಲ ಸಾರಿ ಹೇಳುತ್ತಿರುವುದು 'ಚಿದಂಬರ ರಹಸ್ಯ'ವೊಂದರ ಅವತಾರ ಸ್ವರೂಪವನ್ನೇ...!

ಏಕೆಂದರೆ ಮಾಗಡಿ ಕೆಂಪಾಪುರದಲ್ಲಿ ಪತ್ತೆಯಾದ ವೀರ ಸಮಾಧಿಯು ಬೆಂಗಳೂರು ನಿರ್ಮಾತೃ ಕೆಂಪೇಗೌಡರದ್ದೇ ಎಂಬುದಕ್ಕೆ ಬೇರೆ ಯಾರೇ ಸಂಶೋಧಕರಿಂದಲೂ ಸಾಧ್ಯವಾಗದಷ್ಟು ಪುರಾವೆಗಳನ್ನು ಶೇಕ್ ಮಸ್ತಾನ್ ಕಲ್ಪಿಸಿಕೊಡುವ ಮೂಲಕ ನಾಡಪ್ರಭು ಕೆಂಪೇಗೌಡರ ತ್ಯಾಗ ಬಲಿದಾನದ ಹೊಸದೊಂದು ವೃತ್ತಾಂತವನ್ನೇ ಅನಾವರಣಗೊಳಿಸಿದ್ದಾರೆ. ಈತನಕ ನಾಗರಿಕ ಸಮಾಜದ ಅರಿವಿಗೆ ಬಂದದ್ದು ಕೆಂಪೇಗೌಡರ ಸೊಸೆ ಲಕ್ಷ್ಮಿದೇವಮ್ಮ ಕೆರೆಗೆ ಹಾರವಾಗುವ ಮೂಲಕ ಪ್ರಾಣಾರ್ಪಣೆ ಮಾಡಿಕೊಂಡ ತ್ಯಾಗದ ಕತೆ ಮಾತ್ರವೇ ಇದ್ದದ್ದು ಈಗ ಕೆಂಪೇಗೌಡರು ವೀರಮರಣವನ್ನಪ್ಪುವ ಮೂಲಕ ಬೇರೆಯದೇ ಬಲಿದಾನದ ಗಾಥೆಯೊಂದನ್ನು ತೆರೆದಿಟ್ಟಿದೆ. ಅದು ಕೆಂಪೇಗೌಡರ ಬಗೆಗಿದ್ದ ಪ್ರೀತಿಗೌರವಕ್ಕೆ ಮತ್ತಷ್ಟು ಮೆರಗು ಬಂದಂತೆ-

ಮಾಗಡಿ ತಾಲ್ಲೂಕು ತಿಪ್ಪಸಂದ್ರ ಹೋಬಳಿ ಚಿಕ್ಕಮುದಿಗೆರೆ ಪಂಚಾಯ್ತಿ ವ್ಯಾಪ್ತಿಯ ಕೆಂಪಾಪುರದಲ್ಲಿ ಸಿಕ್ಕ ವೀರಸಮಾಧಿ, ಇದಕ್ಕೆ ಕೂಗಳತೆಯ ಮಲ್ಲಸಂದ್ರದ ಸಮೀಪದ ಕೆಂಪಸಾಗರವೆಂಬ ಕೆರೆಯ ಬಳಿ ಪತ್ತೆಯಾದ ಶಿಲಾಶಾಸನ ಮತ್ತು ವೀರಸಮಾಧಿಯ ಶಿಲಾಭಿತ್ತಿಗಳೆಲ್ಲವೂ ಕೆಂಪೇಗೌಡರ ಕಾಲದ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಚಿತ್ರಣಗಳ ಹೊಸ ಅಧ್ಯಾಯವೊಂದನ್ನು ಬಿಚ್ಚಿಡುತ್ತಿವೆ. ಬೆಂಗಳೂರಿನ ನಿರ್ಮಾತೃ ಹಿರಿಯ ಕೆಂಪೇಗೌಡ ಅರ್ಥಾತ್ ಮೊದಲನೇ ಕೆಂಪೇಗೌಡರು ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿ ಬದುಕಿದ ಕಾಲಾವಧಿಯನ್ನು ಈತನಕ ಇತಿಹಾಸಕಾರರು ಲೆಕ್ಕ ಹಾಕಿದ್ದು ಕ್ರಿ.ಶ. 1510 ರಿಂದ 1569ರ ನಡುವಿನ ಕಾಲಘಟ್ಟವನ್ನು. ಬೆಂಗಳೂರು ಮಾಗಡಿ ರಸ್ತೆಯ ದಾಸರಹಳ್ಳಿ ಶಾಸನದ ಪ್ರಕಾರ 1537ರಲ್ಲಿ ಯಲಹಂಕದ ತನ್ನ ರಾಜಧಾನಿಯನ್ನು ಬೆಂಗಳೂರು ಕೋಟೆಗೆ ಸ್ಥಳಾಂತರಿಸಿ ಪಕ್ಕದಲ್ಲೇ ಬೆಂಗಳೂರು ನಗರವನ್ನೂ ನಿರ್ಮಿಸಿದರೆಂದೂ, ಊರಿನ ಸರ್ವತೋಮುಖ ಅಭಿವೃದ್ಧಿಗಾಗಿ ಸಾಲುಮರಗಳು, ಕೆರೆಕಟ್ಟೆ ಕಲ್ಯಾಣಿಗಳು, ರಸ್ತೆಗಳು ಮತ್ತು ಊರಿನ ನಾಲ್ಕೂ ದಿಕ್ಕಿಗೆ ಗಡಿಗೋಪುರಗಳನ್ನು ನಿರ್ಮಿಸುವ ಮೂಲಕ ರಾಜಧಾನಿ ಬೆಂಗಳೂರಿಗೊಂದು ಅಡಿಪಾಯವನ್ನೂ ಕಲ್ಪಿಸಿದ ಹಿರಿಯ ಕೆಂಪೇಗೌಡರ ಬಗ್ಗೆಯಾಗಲಿ, ಅವರ ಮಗ ಇಮ್ಮಡಿ ಕೆಂಪೇಗೌಡರು ಮಾಗಡಿಯನ್ನಾಳಿದ ಬಗ್ಗೆಯಾಗಲಿ, ಮೊಮ್ಮಗ ಮುಮ್ಮಡಿ ಕೆಂಪೇಗೌಡರು ಮಾಡಿದ ಯುದ್ಧ ಮತ್ತು ನಂತರ ತಲೆಮಾರಿನ ತನಕ ನಾಗರಿಕ ಸಮಾಜ ತಿಳಿದುಕೊಂಡಿದ್ದೇ ಅಳಿದುಳಿದ ಶಿಲಾಶಾಸನಗಳ ಮೂಲಕ. ಆದರೆ ಕೆಂಪೇಗೌಡರ ಅಂತ್ಯದ ಬಗ್ಗೆಯಾಗಲಿ ಯುದ್ಧದಲ್ಲಿ ಅವರು ವೀರಮರಣವನ್ನಪ್ಪಿದ ಬಗ್ಗೆಯಾಗಲಿ ಸಣ್ಣದೊಂದು ಸುಳಿವೂ ಕೂಡ ಲಭ್ಯವಿರಲಿಲ್ಲ.



ವೀರ ಸಮಾಧಿ ಬಳಿ ಇತಿಹಾಸಕಾರರು



ಕೆಂಪಾಪುರ ಕೆರೆ ಬಳೀ ದೊರೆತ ಶಾಸನ


ವಿಜಯನಗರದ ಅರಸರು...!


ಇಲ್ಲಿಗೆ ಆರು ತಿಂಗಳ ಹಿಂದೆ ಮಾಗಡಿ ತಾಲ್ಲೂಕಿನ ಕೆಂಪಾಪುರದಲ್ಲಿ ಪತ್ತೆಯಾದ ವೀರಸಮಾಧಿಯೊಂದರ ಮೇಲೆ 'ಹಿರಿಯ ಕೆಂಪೇಗೌಡರಯ್ಯನವರು ಕುಣಿಗಲಿಂದ ಬಂದು ಯಿ ಬಳಿಯ ಜಗಳವನು ಮಾಡಿ ಅಯಿಕ್ಯವಾಗಿ ಕೈಲಾಸಕ್ಕೆ ಪೋದ ಸ್ಥಳ' ಎಂಬ ಶಿಲಾಶಾಸನವನ್ನೇ ಕೆಂಪೇಗೌಡರ ಸಮಾಧಿಯೆಂದು ಕೆಂಪೇಗೌಡ ಸ್ಮಾರಕಗಳ ಸಂರಕ್ಷಣಾ ಸಮಿತಿಯ ಅಧ್ಯಕ್ಷ ನಟರಾಜ್‌ಗೌಡರು ಘೋಷಿಸಿದಾಗ ಅನೇಕರು ಅದನ್ನು ನಂಬಲಿಲ್ಲ. ಹಾಗೇ ನಂಬದೆ ಇರುವುದಕ್ಕಿದ್ದ ಮುಖ್ಯ ಕಾರಣ ಹಿರಿಯ ಕೆಂಪೇಗೌಡರು ಯಲಹಂಕ ಪ್ರಭುವೆಂದು ಚಾಲ್ತಿಯಲ್ಲಿದ್ದದ್ದು ಮತ್ತು ಬೆಂಗಳೂರಿನ ನಿರ್ಮಾತೃವೆಂದು ಆತನಕ ನಡೆದ ಸಂಶೋಧನೆಗಳಿಂದ ವ್ಯಕ್ತವಾಗಿದ್ದು.

ವಿಜಯನಗರದ ಸಾಮ್ರಾಟರಿಗೆ ಕೆಂಪೇಗೌಡರು ಸಾಮಂತರಾಗಿದ್ದದ್ದು, ಕೆಂಪೇಗೌಡರ ಮಹಾನ್ ಸೇವೆಗಳನ್ನು ಗುರುತಿಸಿದ ವಿಜಯನಗರದ ಅರಸರು ಅವರಿಗೆ ಹಲಸೂರು, ಬೇಗೂರು, ವರ್ತೂರು, ಜಿಗಣಿ, ತಲಘಟ್ಟಪುರ, ಕುಂಬಳಗೋಡು, ಕೆಂಗೇರಿ ಮತ್ತು ಬಾಣಾವರ ಹೋಬಳಿಗಳನ್ನು ಉಂಬಳಿಯಾಗಿ ನೀಡದ ಬಗ್ಗೆ ಐತಿಹ್ಯವಿತ್ತಾದರೂ ಅವರ ಕುಣಿಗಲ್ ಮೂಲದ ಕುರಿತಂತೆ ... ಪುರಾವೆಗಳಿರಲಿಲ್ಲ. ಕುಣಿಗಲಿಂದ ಬಂದು ಯ... ಸತ್ತಿದ್ದೇ ಆಗಿದ್ದರೆ ಅದು ಬೇರೆ ಯಾರೋ ... ಯಲಹಂಕ ಅಥವಾ ಬೆಂಗಳೂರಿನಿಂದ ತಾ... ಕೆಂಪೇಗೌಡರು ಬರಬೇಕಿದ್ದದ್ದು, ಅಂದರೆ ... ಬಂದು ವೀರಮರಣವನ್ನಪ್ಪಿದ್ದು ಬೇ... ಕೆಂಪೇಗೌಡರಲ್ಲ ಎಂಬ ಪ್ರಶ್ನೆಯೊಂದು ... ಉದ್ಭವವಾಗಿತ್ತು.

ಇಂಥ ಸಂದೇಹಗಳಿದ್ದುದರಿಂದಲೇ ಬ... ಮೇಯರ್ ಮಂಜುನಾಥ ರೆಡ್ಡಿಯವರು ... ಸಂಶೋಧನೆ ನಡೆಸುವಂತೆ ಬೆಂಗಳೂರ... ಕೆಂಪೇಗೌಡರ ಮಾನವಿಕ ಮತ್ತು ಸಮಾಜ ವಿ... ಪತ್ರಮುಖೇನ ಮನವಿ ಮಾಡಿಕೊಂಡಿದ್ದ... ನಿರ್ದೇಶಕ ಶೇಕ್ ಮಸ್ತಾನ್, ಶಾಸನ ತಜ್ಞ ... ನಾಗರಾಜ್, ಪ್ರಾಧ್ಯಾಪಕ ಡಾ. ಎಂ. ವ... ಹುಲಿಯೂರು ದುರ್ಗದ ಇತಿಹಾಸಕಾರ ... ಮುಂತಾದವರಿದ್ದ ಸಮಿತಿ ಮಾಗಡಿ ಕೆಂಪಾಪು... ಭೇಟಿ, ಕುಣಿಗಲ್ ಸುತ್ತಮುತ್ತಲ ಶಾಸನ... ಮಾಹಿತಿ ಮತ್ತು ಬೆಂಗಳೂರಿನ ಕೆಂಪೇಗೌಡ ... ಹೋಲಿಕೆಗಳೆಲ್ಲವೂ ಬೇರೆಯದೇ ಆಯಾ... ತೆರೆದಿಟ್ಟವು.







ರಕ್ಕಸತಂಗಡಿ ಕಾಳಗದಲ್...

ಮಂಟಪದ ಶಿಲ್ಪ ಮತ್ತು ಅದರ ಎದುರಿ... ಗುಡಿಯ ಚಹರೆಗಳು ಇದೊಂದು ವೀರಸಮ... ದನ್ನು ಸ್ಪಷ್ಟಪಡಿಸಿದ್ದವು. ಸ್ತಂಭಗಳ ಮೇಲೆ ಯು... ಖಡ್ಗವನ್ನು ಎತ್ತಿ ಹಿಡಿದಿರುವ ಅಶ್ವಾರೋ... ಗಜಾರೋಹಿ ಯೋಧರ ಭಿತ್ತಿಗಳು, ಮಲ್ಲ... ಕೆಂಪಾಪುರ ಕೆರೆಯ ಬಳಿಯ ಶಾ... ಕೆಂಪೇಗೌಡರಿಗೂ ಕುಣಿಗಲ್‌ಗೂ ಇದ್ದ... ಕುಣಿಗಲ್ಲಿನಲ್ಲಿ 1566 ರಲ್ಲಿ ದೊರೆತ ಆಂ... ಶಾಸನದ ಕಸಬ ನಾಯಕ ಚಿಕ್ಕಲಿಂಗ ಹಿರಿಯ... ಪ್ರತಿಷ್ಠಾಪಿತ ದಾನ ಶಾಸನದ ಒಕ್ಕಣೆ ಮತ್ತು ಇ... ತಾಲ್ಲೂಕು ಹೊಸೂರು ಗ್ರಾಮದ ಹೊ... ದೊರೆತ 'ಯಲಹಂಕ ನಾಡಪ್ರಭು ಕೆಂಪ... ಕೋಟೆ ಪುರಮಟದ ಸಸನ' ಎಂಬ ಶಾಸನ... ಹಿರಿಯ ಕೆಂಪೇಗೌಡರಿಗೂ ಕುಣಿಗಲ... ಸಂಬಂಧವನ್ನು ಸೂಚಿಸುತ್ತಿದ್ದವು.

ಬೆಂಗಳೂರಿನ ನಾಲ್ಕೂ ದಿಕ್ಕುಗಳ ಗೋ... ವೀರಸಮಾಧಿಗೂ ಅನೇಕ ಹೋಲಿಕೆಗಳಿ... ಅನೇಕ ಪುರಾವೆಗಳನ್ನು ಶೇಕ್ ಮಸ್ತಾನ್ ... ಹಾಕುತ್ತಿದ್ದಂತೆ ಕುಣಿಗಲ್ಲಿನಿಂದ ಬಂದು ಯು... ಹಿರಿಯ ಕೆಂಪೇಗೌಡರೇ ಎಂಬ ಬ... ಅನುಮಾನಗಳೂ ಇರಲಿಲ್ಲ. ಆದರೆ ಚಿದಂಬ... ಕಾಡಿದ್ದು ಕೆಂಪೇಗೌಡರು ಯುದ್ಧ ಮಾಡಿದ್ದು ... ಮತ್ತು ಯಾವ ಕಾರಣಕ್ಕೆ?

ಕೆಂಪೇಗೌಡರ ಜೀವಿತಾವಧಿಯಲ್ಲಿ ... ಅತೀದೊಡ್ಡ ಯುದ್ಧವೆಂದರೆ ಅದು ವಿ... ಅರಸರಿಗೂ ಬಿಜಾಪುರದ ಆದಿಲ್ ಶಾಹಿ... ನಡೆದ ರಕ್ಕಸತಂಗಡಿ ಕಾಳಗ. ವಿಜಯನಗರ... ಪತನಕ್ಕೆ ಕಾರಣವಾದ ರಕ್ಕಸತಂಗಡಿ ಕಾಳಗದ... ಭಾಗವಹಿಸಿ ವೀರಮರಣವನ್ನಪ್ಪಿದ ಕೆ... ಸಹೋದರರಾದ ಬಸವಯ್ಯ ಮತ್ತು ಕೆಂಪ... ಬಲಿದಾನವೇ ಈತನಕ ನಾವೆಲ್ಲ ಅರಿತಿದ್ದ ಪುರಾ... ಆ ಹೊತ್ತಿಗೆ ಬಸವಯ್ಯ ರಾಮಗಿರಿ ... ಕೆಂಪಸೋಮಯ್ಯ ಶಿವಗಂಗೆ ದ... ನಿಭಾಯಿಸಿಕೊಂಡಿದ್ದರು.


ಭೈರವ ಬಂಡಾಯ?

ವಿಜಯನಗರದ ಸಾಮ್ರಾಟ ಸದಾಶಿವರಾ... ಕೆಂಪೇಗೌಡರು ವಿಚಿತ್ರ ಸಂಘರ್ಷ... ಸಿಲುಕಿಕೊಂಡಿದ್ದು ತನ್ನದೇ ಭೈರವ ನಾಣ್ಯಗ... ತರುವ ಮೂಲಕ. ಚಕ್ರವರ್ತಿಯೊಬ್ಬನ

ವೀರಮರಣದ ಕಾರಣ ಗೊತ್ತಾಗದೆ ಉತ್ಸವ ಮಾಡಿ ಏನು ಪ್ರಯೋಜನ?-ಶೇಕ್ ಮಸ್ತಾನ್

ಕೆಂಪೇಗೌಡರ ವೀರಗದ್ದುಗೆಯನ್ನು ಪ್ರೇಕ್ಷಣೀಯ ಸ್ಥಳವಾಗೋ ಅಥವಾ ವಿನೂತನ ಸ್ಮಾರಕವಾಗೋ ಅಭಿವೃದ್ಧಿ ಮಾಡುವ ಕೆಲವರ ಒತ್ತಾಯ ಸ್ವಾಗತಾರ್ಹವೇ ಆದರೂ ಇದು ದುಡುಕುತನವಾಗಲಾರದು ಎನ್ನುತ್ತಾರೆ ಬೆಂಗಳೂರು ವಿವಿಯ ಕೆಂಪೇಗೌಡ ಮಾನವಿಕ ಮತ್ತು ಸಮಾಜ ವಿಜ್ಞಾನ ಕೇಂದ್ರದ ನಿರ್ದೇಶಕ ಶೇಕ್ ಮಸ್ತಾನ್.

"... ಪರಿಶೋಧನೆ ಇನ್ನೂ ಪೂರ್ಣಗೊಂಡಿಲ್ಲ, ಎಂಥಾ ಪರಿಸ್ಥಿತಿಯಲ್ಲಿ ಯಾವ ಸನ್ನಿವೇಶದಲ್ಲಿ ಕೆಂಪೇಗೌಡರು ಹುತಾತ್ಮರಾದರೆಂಬುದನ್ನು ನಾವು ಮೊದಲು ಅರಿಯಬೇಕು. ಅವರ ತ್ಯಾಗದ ಕಾರಣವೇ ಗೊತ್ತಿಲ್ಲದೆ ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ ರಚಿಸಬಹುದು. ಕಾಮಗಾರಿ, ಟೆಂಡರ್, ಖರ್ಚುವೆಚ್ಚ ಎಲ್ಲವನ್ನೂ ಮಾಡಬಹುದು. ಆದರೆ ಸತ್ಯವಿನ್ನೂ ಕಾಲಗರ್ಭದಲ್ಲೇ ಉಳಿದುಬಿಡುತ್ತದೆ. ವಿಜಯನಗರದ ಸಾಮ್ರಾಜ್ಯ ಪತನದ ನಂತರ ಸಂಭವಿಸಿದ ವಿಘಟನೆಗಳೇನು, ಆ ಕಾಲದ ಸಾಮಾಜಿಕ ಪರಿಸ್ಥಿತಿಯೇನಿತ್ತು, ಏಕೆ ಕೆಂಪೇಗೌಡರು ತಮ್ಮ ಪ್ರಾಣ ತೆರಬೇಕಾಯಿತು ಇತ್ಯಾದಿಗಳು ಬೆಳಕಿಗೆ ಬಂದರೆ ಅವರ ತ್ಯಾಗ ಬಲಿದಾನಕ್ಕೆ ಮತ್ತಷ್ಟು ಮೆರಗು ಬರುತ್ತದೆ.



ಮಾಗಡಿ ಕೆಂಪಾಪುರದಲ್ಲಿ ನಡೆದ ಯುದ್ಧದ ಪೂರ್ಣ ಚಿತ್ರಣ ಸಿಗಬೇಕೆಂದರೆ ಈ ಬಗ್ಗೆ ಮತ್ತಷ್ಟು ಅಧ್ಯಯನ ನಡೆಯಬೇಕು. ಆ ಕಾಲದಲ್ಲಿದ್ದ ತುಂಡು ಪಾಳೇಗಾರರು ಯಾರು, ಗುಡೇಮಾರನಹಳ್ಳಿ, ಸುಮತಿ, ಬಾಗೂರು, ದೊಡ್ಡೇರಿಗಳಲ್ಲಿದ್ದ ಪಾಳೇಗಾರರಿಗೂ ಕೆಂಪೇಗೌಡರಿಗೂ ಇದ್ದ ಸಂಬಂಧ, ವಿಜಯನಗರದ ಸಾಮ್ರಾಟ್ ಸದಾಶಿವರಾಯ ಮತ್ತು ಶಿರಾದ ಪಾಳೇಗಾರನ ಸಂಬಂಧ, ಶಿರಾದ ಪಾಳೇಗಾರ ಯಾರು, ಅವನೇಕೆ ಕೆಂಪೇಗೌಡರ ವಿರುದ್ಧ ಕತ್ತಿ ಮಸೆಯುತ್ತಿದ್ದ ರಕ್ಕಸತಂಗಡಿ ಕಾಳಗದ ನಂತರ ಸ್ವತಂತ್ರರಾಗುವ ಭರದಲ್ಲಿ ಕೆಂಪೇಗೌಡರನ್ನು ತಮ್ಮ ಹಿತಾಸಕ್ತಿಗೆ ತೊಡಕೆಂದು ಪರಿಗಣಿಸಿದವರ್‍ಯಾರು? ಏಕೆ ಕೆಂಪೇಗೌಡರು ಕುಣಿಗಲ್ಲಿನಿಂದ ಬರಬೇಕಾಯಿತು, ಅದಕ್ಕೆ ಕಾರಣರಾದವರ್‍ಯಾರು ಇತ್ಯಾದಿ ಅಂಶಗಳ ಬಗ್ಗೆ ಸಂಶೋಧನೆಯಾಗದೆ ಕೆಂಪೇಗೌಡರ ವ್ಯಕ್ತಿತ್ವದ ಪೂರ್ಣ ಚಿತ್ರಣ ದೊರಕುವುದಿಲ್ಲ" ಎನ್ನುತ್ತಾರೆ ಶೇಕ್ ಮಸ್ತಾನ್.

ಈ ಬಗ್ಗೆ ಇನ್ನಷ್ಟು ಪರಿಶೋಧನೆಯಾಗಬೇಕೆಂದರೆ ಪಾಲಿಕೆಯೇ ಇನ್ನಷ್ಟು ಔದಾರ್ಯ ಮೆರೆಯಬೇಕು ಅಂದರೆ ಸಂಶೋಧನೆಯ ಖರ್ಚುವೆಚ್ಚ ಭರಿಸಬೇಕು. ಪುರಾತತ್ವ ಇಲಾಖೆ ಈಗಾಗಲೇ 2 ಕೋಟಿ ಮೀಸಲಿಟ್ಟಿದೆ. ಅದು ಅಭಿವೃದ್ಧಿಗೆ. ಆದರೆ ಸಂಶೋಧನೆಗೆ ನೆರವಾಗುವವರ್‍ಯಾರು?

...ರುವಾಗ ಅವಕ್ಕೆ ವ್ಯತಿರಿಕ್ತವಾಗಿ ಸಾಮಂತನೊಬ್ಬ ...ಪ್ರತ್ಯೇಕ ನಾಣ್ಯವನ್ನು ಚಾಲ್ತಿಗೆ ತರುತ್ತಾನೆಂದರೆ ...ಯಾವೊಬ್ಬ ಸಾಮ್ರಾಟನೂ ಸಹಿಸಲಾರ. ...ಡರ ಭೈರವ ನಾಣ್ಯದ ದುಸ್ಸಾಹಸದ ವಿರುದ್ಧ ...ಟ ಸದಾಶಿವರಾಯನಿಗೆ ಚಾಡಿ ಚುಚ್ಚಿದ್ದು ಶಿರಾದ ...ಗಾರ.

...ಣದಿಂದ ರೊಚ್ಚಿಗೆದ್ದ ಸದಾಶಿವರಾಯ ಕೆಂಪೇಗೌಡರನ್ನು ...ಸೆಳೆಂದು ತನ್ನ ಸೈನ್ಯದ ತುಕಡಿಯೊಂದನ್ನು ಛೂಬಿಟ್ಟ ...ತಿಹ್ಯವಿದೆ. ಅಷ್ಟಾಗ್ಯೂ ಸದಾಶಿವರಾಯನ ಅಳಿಯ ...ವಿಜಯನಗರ ಸಾಮ್ರಾಜ್ಯದ ಕೊನೇ ದೊರೆ ...ರಾಯನಿಗೂ ಕೆಂಪೇಗೌಡರಿಗೂ ಆತ್ಮೀಯತೆಯಿದ್ದು ...ಬಂಧನದ ಸಂಕಟದಿಂದ ಕೆಂಪೇಗೌಡರು ಹೇಗೋ ...ಾಗಿರಬಹುದೆಂಬ ಲೆಕ್ಕಾಚಾರವೂ ಇದೆ. ತನ್ನ ಏಳು ...ಮಕ್ಕಳ ಪೈಕಿ ಇಬ್ಬರನ್ನು ವಿಜಯನಗರದ ಸಾಮ್ರಾಟನ ...ತ್ತೆಯಿಟ್ಟು ಕೆಂಪೇಗೌಡರು ಬಿಡುಗಡೆಯಾಗಿ ...ಬೇಕೆಂಬ ಸಾಧ್ಯತೆಯನ್ನೂ ಇತಿಹಾಸಕಾರರು ...ಳುತ್ತಿಲ್ಲ.

...ವೆಲ್ಲವೂ ರಕ್ಕಸತಂಗಡಿ ಕಾಳಗಕ್ಕೂ ಹಿಂದಿನ ...ವಳಿಗಳು. ಸದಾಶಿವರಾಯನ ನಿಧನಾನಂತರ ಅಳಿಯ ...ರಾಯನು ಪಟ್ಟಕ್ಕೆ ಬಂದ ಮೇಲೆ ಕೆಂಪೇಗೌಡರಿಗೂ ...ನಗರ ಸಾಮ್ರಾಜ್ಯಕ್ಕೂ ಇದ್ದ ಬಾಂಧವ್ಯ ಮತ್ತೆ ...ಯಾಗದೇ ಹೋಗಿದ್ದರೆ ಕೆಂಪೇಗೌಡರ ಇಬ್ಬರು ...ರೇಕೆ ರಕ್ಕಸತಂಗಡಿ ಕಾಳಗದಲ್ಲಿ ವೀರಮರಣ ...ಪ್ಪಿದ್ದರು?

...ತಿರುಗಿಬಿದ್ದ ತುಂಡು ಪಾಳೇ...

...ಮರ್ಥ ಕೆಂಪೇಗೌಡರು ಪ್ರಾಣಾರ್ಪಣೆ ಗೈದಿದ್ದಕ್ಕೂ ...ನಗರದ ಸಾಮ್ರಾಜ್ಯದ ವಿರುದ್ಧದ ಗೊಂದಲಕ್ಕೂ ...ಧವಿಲ್ಲ. ಸಾವಿಗೆ ವಿಜಯನಗರದ ದೊರೆಗಳೂ ...ಲ್ಲ. ಆದರೆ ರಕ್ಕಸತಂಗಡಿ ಕಾಳಗದ ನಂತರ ...ನಗರ ಸಾಮ್ರಾಜ್ಯ ಪತನವಾಯಿತಲ್ಲ; ಅದು ...ಕ್ಷವಾಗಿ ಕೆಂಪೇಗೌಡರ ಪ್ರಾಣಕ್ಕೆ ಕುತ್ತಾಯಿತೆ? ...ಲ್ಲಿ ವೀರಮರಣವನ್ನಪ್ಪಿದ ತಮ್ಮಂದಿರ ಪೈಕಿ ...ದಿ ದುರ್ಗವನ್ನಾಳುತ್ತಿದ್ದ ಬಸವಯ್ಯ ಮತ್ತು ಶಿವಗಂಗೆ ...ವನ್ನಾಳುತ್ತಿದ್ದ ಕೆಂಪಸೋಮಯ್ಯರ ಅಗಲಿಕೆಯಿಂದಾಗಿ ...ಗೊಂಡ ಎರಡೂ ಕೋಟೆಗಳ ಜವಾಬ್ದಾರಿ ...ಡರ ಹೆಗಲಿಗೆ ಬಿತ್ತು.

...ಗಳೂರನ್ನಷ್ಟೇ ಅಲ್ಲದೆ ತಮ್ಮಂದಿರಿಬ್ಬರ ...ಪಟ್ಟುಗಳನ್ನೂ ಕಾಪಾಡಬೇಕಾದ ಸಂದಿಗ್ಧ ...ಕ್ಕೀಡಾದ ಕೆಂಪೇಗೌಡರಿಗೆ ರಕ್ಕಸತಂಗಡಿ ...ಂಬುದು ಸರ್ವನಾಶದ ಅಪಾಯವಾಗಿ ಕಾಡಿತೆ? ...ನಗರದ ಅವಸಾನದ ತನಕ ಹಂಪಿಗೆ ನಿಷ್ಠರಾಗಿದ್ದ ...ಕ ಪಾಳೇಗಾರರು ಮತ್ತು ಸಾಮಂತರು ರಕ್ಕಸತಂಗಡಿ ...ನಂತರ ಅನಿವಾರ್ಯವಾಗಿ ತಮ್ಮ ನಿಷ್ಠೆಯನ್ನು ...ಶಾಹಿಗಳಿಗೆ ವರ್ಗಾಯಿಸಬೇಕಾಯಿತು. ಅಲ್ಲೀತನಕ ...ಗೌಡರಿಗೆ ಕಪ್ಪ ಸಲ್ಲಿಸುತ್ತಿದ್ದ ಮಾಗಡಿ-ಕುಣಿಗಲ್ ...ನ ಗುಡೆಮಾರನಹಳ್ಳಿ, ಸುಮತಿ, ಬಾಗೂರು, ...ಗಳ ಪುಡಿ ಪಾಳೇಗಾರರು ಏಕಾಏಕಿ ಸ್ವತಂತ್ರ ...ಸಿಕೊಂಡರೋ, ಕೆಂಪೇಗೌಡರ ವಿರುದ್ಧ ...ದ್ದರೋ ಅಥವಾ ಗೆದ್ದ ಆದಿಲ್‌ಶಾಹಿಗಳಿಗೆ ತಮ್ಮ ...ಷ್ಠೆ ಬದಲಿಸಿ ವಿಜಯನಗರಕ್ಕೆ ನಿಷ್ಠರಾಗಿದ್ದ ...ಗೌಡರನ್ನೇ ಮುಗಿಸಲು ಕೈಜೋಡಿಸಿಬಿಟ್ಟರೋ


...ಳಿದ ತಮ್ಮಂದಿರ ಕೋಟೆಗಳನ್ನು ಕಾಪಾಡಿಕೊಂಡೇ ...ರಿನ ಪಾಳೇಪಟ್ಟನ್ನೂ ನಿಭಾಯಿಸಬೇಕಾದ ಸಂಕಷ್ಟಕ್ಕೆ ...ಕೆಂಪೇಗೌಡರು ತಮ್ಮ ವಿರುದ್ಧ ಅಚಾನಕ್ಕಾಗಿ ...ತುಂಡು ಪಾಳೇಗಾರರನ್ನು ಸದೆಬಡಿಯಲೆಂದು ...ಲ್ಲಿಂದ ಬಂದು ವೀರಮರಣವನ್ನಪ್ಪಿರಬಹುದೆ? ...ಮೊದಲೇ ಕತ್ತಿ ಮಸೆಯುತ್ತಿದ್ದ ಶಿರಾದ ಪಾಳೇಗಾರ ...ರಿಸಿ ಕೆಂಪೇಗೌಡರನ್ನು ಮುಗಿಸಿರಬಹುದೆ? ...ನಗರದ ಪತನದ ನಂತರ ಆದಿಲ್‌ಶಾಹಿಗಳಿಗೆ ...ದ ಸ್ವತಂತ್ರಗೊಂಡ ಕೆಂಪೇಗೌಡರನ್ನು ಸದೆಬಡಿಯಲು ...ತುಕಡಿಯೊಂದು ಬೆಂಗಳೂರಿನ ಮೇಲೆ ದಂಡೆತ್ತಿ ...? ಶತ್ರು ಕೂಟದ ಸಂಖ್ಯೆ ಮತ್ತು ತಾಕತ್ತಿನ ...ದ ಕುಣಿಗಲ್ಲಿನಿಂದ ಬರುತ್ತಿದ್ದ ಕೆಂಪೇಗೌಡರಿಗೆ ...ಂಗಳೂರಿನ ತುಕಡಿಯನ್ನು ಸಂಧಿಸುವುದಕ್ಕೂ ...ಅಪಾಯ ಎದುರಾಯಿತೆ?

...ಗಳ ಪೈಕಿ ಯಾವುದು ಸತ್ಯಕ್ಕೆ ಹತ್ತಿರ? ಕೆಂಪೇಗೌಡರ ...ನ ಕುರಿತಂತೆ ಕಾಲಗರ್ಭದ ಯಾವುದೋ ...ಲ್ಲಿ ಹೂತು ಮುಗ್ಗಾದ ಸತ್ಯವನ್ನು ಅಗೆದು ...ಸುವವರ್ಯಾರು?

...ಕಾಯಲು ನಿಂತು ತನ್ನ ಪ್ರಾಣವನ್ನೇ ಅರ್ಪಿಸಿದ ...ಡರು ಕೇವಲ ಬೆಂಗಳೂರಿನ ನಿರ್ಮಾತೃವಷ್ಟೇ ...ತ್ಯಾಗಿ ತನ್ನನ್ನೇ ಬಲಿದಾನಗೈದ ಮಹಾನ್ ತ್ಯಾಗಿ ...ಂಗಣದಲ್ಲಿ ಪ್ರಾಣತೆತ್ತ ಮಹಾನ್ ವೀರ ಕೂಡ.

■ ರಾ. ಸೋಮನಾಥ್

ಮನಸೂರೆಗೊಂಡ 'ಮೈಥಿಲಿ'


ನಿರ್ದೇಶಕ ಸಾಸ್ವೆಹಳ್ಳಿ ಸತೀಶ

ಮೊನ್ನೆ ಹನುಮಂತನಗರದ ಕೆಂಗಲ್ ಹನುಮಂತಯ್ಯ ಕಲಾ ಸೌಧದಲ್ಲಿ ಪ್ರದರ್ಶನಗೊಂಡ 'ಮೈಥಿಲಿ' ಎಂಬ ನಾಟಕ ಪ್ರೇಕ್ಷಕರ ಮನಸೂರೆಗೊಂಡಿತು. ಈ ನಾಟಕ ಪ್ರದರ್ಶನಗೊಂಡಲ್ಲೆಲ್ಲಾ ರಾಮಾಯಣವನ್ನು ಗ್ರಹಿಸುವ ಹೊಸ ದೃಷ್ಟಿಗೆ ಪ್ರೇಕ್ಷಕರು ತುತ್ತಾಗುತ್ತಾರೆ. ನಾಟಕದ ನಂತರ ಎಲ್ಲರೂ ನಟಿ ಸುಪ್ರಿಯಾ ಅವರನ್ನು ಮುತ್ತಿಕೊಳ್ಳುವುದನ್ನು ನೋಡಿದರೆ ರಾಮಾಯಣದ ಸೀತೆ ಪ್ರೇಕ್ಷಕರ ಮನ ಗೆದ್ದಿರುವುದನ್ನು ಕಣ್ಣಾರೆ ನೋಡಬಹುದು.

ವಾಸ್ತವವಾಗಿ ಈ ನಾಟಕ ಸಿದ್ದಗಂಗಯ್ಯ ಕಂಬಾಳು ಹಾಗು ಬಂಜಗೆರೆ ಜಯಪ್ರಕಾಶ್ ಮತ್ತು ಇನ್ನಿತರ ವಿದ್ವಾಂಸರು ರಾಮಾಯಣವನ್ನು ವಾಸ್ತವಿಕ ದೃಷ್ಟಿಕೋನದಿಂದ ನೋಡಿರುವಂತಹ ಎಳೆಗಳನ್ನು ಆಧರಿಸಿ ಡಾ. ಸಾಸ್ವೆಹಳ್ಳಿ ಸತೀಶ್ ಬರೆದಿರುವಂತದು.

ಸೀತೆ ರಾಮನಿಂದ ಅನುಭವಿಸಿದ ವಿರಹ, ಮನಸ್ತಾಪಗಳು ಮತ್ತು ಅವನ ಹಟಗಳನ್ನು ಬಿಚ್ಚಿಡುತ್ತಾ ಹೋಗುತ್ತಾಳೆ. ಆಗ ರಾಮ ಸಾಮಾನ್ಯ ಗಂಡನಂತೆ ಕಾಣುತ್ತಾನೆ.

ಸುಧಾ ಪತ್ರಿಕೆಯಲ್ಲಿ 'ಮೈಥಿಲಿ' ಧಾರಾವಾಹಿಯಾಗಿ ಪ್ರಕಟಗೊಂಡಾಗ ರಾಮನ ವಾರಸುದಾರರಾದ ಪೇಜಾವರ ಶ್ರೀಗಳು, ಸಿದ್ದಗಂಗಯ್ಯ ಕಂಬಾಳರನ್ನು ಪತ್ತೆ ಹಚ್ಚಿ ಬೆಂಗಳೂರಿನ ಮಠಕ್ಕೆ ಕರೆಸಿಕೊಂಡರು. ಪೇಜಾವರ ಶ್ರೀಗಳಂತವರು ಕರೆದಾಗ ಯಾರೂ ನಿರಾಕರಿಸಲಾಗುವುದಿಲ್ಲ! ಆದ್ದರಿಂದ ದಶರಥನ ಆಸ್ಥಾನಕ್ಕೆ ಹೋದಂತೆ ಹೋಗಿ ನಿಂತರು. ಆಗ ಶ್ರೀಗಳು "ನೋಡಿ, ನೀವು ದೈವಾಂಶಸಂಭೂತ ಮತ್ತು ಪುರುಷೋತ್ತಮ ರಾಮನನ್ನು ಒಬ್ಬ ಸಾಮಾನ್ಯ ಮನುಷ್ಯನಂತೆ ಚಿತ್ರಿಸಿ ರಾಮಭಕ್ತರಿಗೆ ಆಘಾತ ಮಾಡಿದ್ದೀರಿ. ನಿಮ್ಮ ಈ ಧೋರಣೆಯನ್ನು ಬದಲಿಸಿಕೊಳ್ಳಬೇಕು. ರಾಮಕೃಷ್ಣ ನಮ್ಮ ಸಂಸ್ಕೃತಿಯ ದೇವರು. ನಮ್ಮ ಶ್ರದ್ಧಾ ಭಕ್ತಿಗೆ ನೀವು ತೊಂದರೆ ಮಾಡ್ತಾವ್ರುಂಟು. ಇದಕ್ಕೆ ನೀವು ಏನು ಹೇಳ್ತೀರಿ?" ಎಂದರು.

ಹಳ್ಳಿಗಾಡಿನಿಂದ ಬಂದ ಬಡರೈತನಂತೆ ಕಾಣುತ್ತಿದ್ದ ಸಿದ್ದಗಂಗಯ್ಯನವರು ಅಷ್ಟೇ ತಣ್ಣಗೆ "ನೋಡಿ ಸ್ವಾಮಿ, ರಾಮ ಕ್ಷತ್ರಿಯ. ಕೃಷ್ಣ ಗೊಲ್ಲರವನು. ಇವರಿಬ್ಬರು ನಮ್ಮವರು. ಇವರಿಗೂ ನಿಮಗೂ ಏನು ಸಂಬಂಧ?" ಎಂದರು. ಶ್ರೀಗಳು ಒಂದಿಷ್ಟು ಗಲಿಬಿಲಿಯಾದರು. ಅವರ ತಲೆಯಲ್ಲಿ ಈತ ಕ್ಷತ್ರಿಯನೆ ಅಥವಾ ಗೊಲ್ಲರವನೆ ಎಂಬ ಅನುಮಾನ ದಾಳಿಯಿಟ್ಟಿರಬೇಕು. ಆದ್ದರಿಂದ ಮೊದಲಿನ ಅಧಿಕಾರವಾಣಿಯಿಂದ ಕೆಳಗಿಳಿದು "ಇರಬಹುದು. ಆದರೆ ನಮ್ಮ ಹಿಂದೂ ಧರ್ಮ ಇವರನ್ನು ಪೂಜೆ ಮಾಡ್ತಾವ್ರುಂಟು. ದೇವರೆಂದು ಭಾವಿಸಿ ನಡೆದುಕೊಳ್ತಾವ್ರುಂಟು. ಅಂತವರಿಗೆ ನೀವು ಆಘಾತ ಮಾಡಬಾರದು. ಹೋಗಿ ಬನ್ನಿ" ಎಂದರು. ಇದು ಒಂದನೆ ಪ್ರಸಂಗ.


ಇದಕ್ಕಿಂತ ಹಿಂದಕ್ಕೆ ಹೋದರೆ ಶಿವಮೊಗ್ಗದಲ್ಲಿ ಆದ 'ಸೀತಾಯಣ'ದ ಗಲಾಟೆ ಎಲ್ಲರಿಗೂ ತಿಳಿದದ್ದೆ, ಪೋಲಂಕಿ ರಾಮಮೂರ್ತಿಯವರ 'ಸೀತಾಯಣ' ಗೋಷ್ಠಿಗೆ ನುಗ್ಗಿದ ವಾನರ ಸೇನೆ ಎಲ್ಲರ ಮೇಲೆ ಹಲ್ಲೆ ಮಾಡಿ, ಮಹಿಳೆಯರ ಸೀರೆ ಎಳೆದು ದಾಂಧಲೆ ಮಾಡಿಹೋಗಿದ್ದರು. ಅದೇ ಶಿವಮೊಗ್ಗದಲ್ಲಿ 'ಮೈಥಿಲಿ' ನಾಟಕ ನಡೆದಾಗ ಸೀತೆಯ ನಿವೇದನೆಯನ್ನ ನಿರಾಕರಿಸಲಾಗದೆ ಎದ್ದು ಹೋಗಿ ಇದು ರಾಮನ ತೇಜೋವಧೆಯ ನಾಟಕ ಎಂದು ಬರೆದುಕೊಂಡರು.

ಕಾಲ ಬದಲಾಗಿದೆ. ಪುರಾಣದ ಪಾತ್ರಗಳು ವಿಶ್ಲೇಷಣೆಗೆ ಒಳಪಡುವ ಕಾಲ ಬಂದಿದೆ. ಇದರಿಂದ ಸತ್ಯದರ್ಶನ ಆಗುತ್ತದೆಯೇ ಹೊರತು ಯಾರ ತೇಜೋವಧೆಯೂ ಅಲ್ಲ. 'ಮೈಥಿಲಿ' ಸತತವಾಗಿ ಒಂದು ಗಂಟೆ ರಾಮನಿಂದ ಅನುಭವಿಸಿದ ಅಪಮಾನದ ಪಟ್ಟಿ. ಅದರಲ್ಲಿ ನಮ್ಮ ಹೆಣ್ಣುಮಕ್ಕಳು ಒಳಗೊಳಗೇ ಅನುಭವಿಸಿ ಅತ್ತ ಪ್ರಕರಣಗಳು ಅನಾವರಣಗೊಳ್ಳುತ್ತಾ ಹೋಗುತ್ತದೆ. ಅದನ್ನು ನೋಡುವ ಮಹಿಳೆಯರಿಗೆ ರಾಮ ತಮ್ಮ ತಮ್ಮ ಗಂಡಂದಿರಿಗಿಂತ ಬೇರೆಯಲ್ಲ ಎಂಬ ಸತ್ಯದರ್ಶನವಾಗುತ್ತದೆ.

ನಾಟಕ ಆರಂಭವಾಗುವುದೇ ಲಕ್ಷ್ಮಣ ಶೂರ್ಪನಖಿಯ ಕಿವಿ, ಮೂಗು ಕುಯ್ದ ಪ್ರಸಂಗದಿಂದ. ಅದನ್ನು ನೋಡಿ ನಿದ್ದೆಯಲ್ಲೂ ಬೆಚ್ಚಿಬೀಳುವ ಸೀತೆ "ಮೂಗು ಮನುಷ್ಯನ ವ್ಯಕ್ತಿತ್ವ. ಅದರಲ್ಲೂ ಹೆಣ್ಣಿಗೆ ಮೂಗೇ ಹೋದಮೇಲೆ ಅವಳನ್ನ ಇನ್ನಾರು ವರಿಸಬೇಕು? ಈ ಕಾರ್ಯ ಇಕ್ಷ್ವಾಕು ವಂಶಕ್ಕೇ ಕಳಂಕ ತರುವಂತದ್ದು" ಎಂದು ರೋದಿಸುತ್ತಾಳೆ. ಅನಂತರ ಮೈಥಿಲಿಯ ರೋದನ ಒಂದು ಗಂಟೆ ಹರಿಯುತ್ತದೆ. ಹಾಗೆ ನೋಡಿದರೆ ಇಡೀ ರಾಮಾಯಣವೇ ರೋದನೆಯಿಂದ ಹರಿಯುವ ಕಾವ್ಯ. ಇಲ್ಲಿ ಯಾರೂ ನೆಮ್ಮದಿಯಾಗಿಲ್ಲ, ಎಲ್ಲರೂ ರೋದಿಸುತ್ತಿರುವವರೆ. 'ಪರ್ವ' ಖ್ಯಾತಿಯ ಭೈರಪ್ಪನವರನ್ನು ಯಾರೋ "ನೀವು ಯಾಕೆ ರಾಮಾಯಣ ಬರೆಯಬಾರದು?" ಎಂದು ಕೇಳಿದಾಗ ಅವರು "ರಾಮಾಯಣದ ಪಾತ್ರಗಳೆಲ್ಲಾ ಪರಿಪೂರ್ಣವಾದವು. ಹಾಗಾಗಿ ಬರೆಯಲಿಲ್ಲ" ಎಂದರು. ಅಂತಹ ಪರಿಪೂರ್ಣ ಪಾತ್ರಗಳ ಹೂರಣ 'ಮೈಥಿಲಿ' ನಾಟಕದಲ್ಲಿ ಅನಾವರಣಗೊಂಡಿದೆ.

ಮೈಥಿಲಿಯಾಗಿ ಸುಪ್ರಿಯಾಳ ಅಭಿನಯ ಮನಮುಟ್ಟುವಂತಿದೆ. ಅಕ್ಕನ ವಚನದಿಂದ ಅಂತ್ಯವಾಗುವ ನಾಟಕ ಒಂದು ಹೊಸ ಅನುಭವಕ್ಕೆ ಈಡು ಮಾಡುತ್ತದೆ. ನಾಟಕ ನೋಡಿದ ಕೆ. ಮರುಳಸಿದ್ದಪ್ಪನವರು "ನಾಟಕ ವಾಚ್ಯವಾಗಿರುವುದನ್ನು ಕಡಿಮೆ ಮಾಡಿ. ಸ್ವಲ್ಪ ಕಾವ್ಯಾತ್ಮಕವಾಗಬೇಕು. ಇಡೀ ರಾಮಾಯಣದ ಬದಲು ಯಾವುದಾದರೂ ಒಂದು ಪ್ರಸಂಗದಿಂದ ಸೀತೆಯ ಪಾತ್ರ ಅನಾವರಣಗೊಳ್ಳಬೇಕು. ಆದರೂ ಈ ಸಂದರ್ಭದಲ್ಲಿ ಇಂತಹ ನಾಟಕಗಳ ಅಗತ್ಯವಿದೆ. ಇದು ಇನ್ನು ಹಲವು ಪ್ರದರ್ಶನ ಕಾಣಬೇಕು" ಎಂದರು. ಸ್ತ್ರೀಯರ ಏಕಪಾತ್ರ ನಾಟಕಕ್ಕೆ ನಾಂದಿ ಹಾಡಿದ ಲಕ್ಷ್ಮೀ ಚಂದ್ರಶೇಖರ್ ನಾಟಕ ಮತ್ತು ಸುಪ್ರಿಯರನ್ನು ಮೆಚ್ಚಿಕೊಂಡಿದ್ದು ವಿಶೇಷವಾಗಿತ್ತು. ಇದು ನಾಟಕ ನಿರ್ದೇಶಕ ಸಾಸ್ವೆಹಳ್ಳಿ ಸತೀಶರ ಸಾಹಸವೆಂದೇ ಹೇಳಬೇಕು.

■ ಬಿ. ಚಂದ್ರೇಗೌಡ



'ನಮೋ' ತತ್ಸಮ 'ಲಭೋ' ತದ್ಭವ

ಒಂದು ಪತ್ರೆ



ಕಳೆದ ಲೋಕಸಭಾ ಚುನಾವಣೆಯ ದಿನಾಂಕ ಘೋಷಣೆಗೂ ಮುನ್ನ ಎಲ್ಲಿ ನೋಡಿದರೂ 'ನಮೋ,' 'ನಮೋ' ಭಜನೆಯೇ. ಈ ನಮೋ ಹುಚ್ಚಾಟಗಳನ್ನು ನೋಡಿದ ನಮ್ಮ ಎಚ್.ವಿಶ್ವನಾಥ್ ಅವರು ನಮೋ ಎಂದರೆ 'ನಮಗೆ ಮೋಸ' ಎಂದರ್ಥವೆಂದು ಈ 'ನಮೋ'ವನ್ನು ವಿಸ್ತಾರಗೊಳಿಸಿ ಕಣಿ ನುಡಿದದ್ದು ಈಗ ಬಹುತೇಕ ಸತ್ಯವಾಗತೊಡಗಿದೆ. ಅಂದರೆ ಓಟು ಕೊಟ್ಟು ನಾವು ಮೋಸ ಹೋದೆವು, ನಮಗೆ ಮೋಸವಾಯಿತು ಎಂದು ಜನರೇ ನಿಧಾನವಾಗಿಯಾದರೂ ಎಚ್ಚೆತ್ತುಕೊಳ್ಳುತ್ತಿದ್ದಾರೆ. ದೆಹಲಿ-ಬಿಹಾರಗಳ ಭರ್ಜರಿ ಅಂತರದ ಸೋಲಿನುತ್ತರಗಳ ಬಳಿಕ ಈಗ ಮೋದಿಯ ತವರೂರಾದ ಗುಜರಾತಿನಲ್ಲೇ ದಶಕಗಳಿಂದ ಮೂಲೆ ಸೇರಿದ್ದ ಕಾಂಗ್ರೆಸ್ ಚಿಗುರಿಕೊಳ್ಳುವ ಸ್ಥಿತಿಯನ್ನು ಈ 'ಮೋದಿ-ಶಾ' ಎಂಬ ಕರಟಕ ದಮನಕ ಜೋಡಿ ತಂದಿಟ್ಟಿದೆ. ಗುಜರಾತಿನ ಜನರೇ ಮೋದಿಯನ್ನು ತಿರಸ್ಕರಿಸುವಲ್ಲಿಗೆ ವಿಷಯ ತಲುಪ ಹೊರಟಿದೆಯೆಂದರೆ ಇದು ಆಧುನಿಕ ಹಿಟ್ಲರ್‌ನ ಪತನವೆಂದೇ ಎಲ್ಲೆಡೆ ವಿಶ್ಲೇಷಿಸಲಾಗುತ್ತಿದೆ.

ಗುಜರಾತ್ ಮಾದರಿ, ಗುಜರಾತ್ ಅಭಿವೃದ್ಧಿ.. ಎನ್ನುತ್ತಲೇ ವಿದೇಶಕ್ಕೆ ಹೋದರೆ ಗುಜರಾತಿ ಉದ್ಯಮಿಗಳ ಮುಂದೆ ಮೈಕಲ್ ಜಾಕ್ಸನ್ ತರಹದ ಪೋಸ್ ನೀಡಿ ನಾಟಕೀಯತೆಗೆ ಪ್ರಾಧಾನ್ಯತೆ ನೀಡುವ ಮೋದಿಯ ಮುಖವಾಡವನ್ನು ಗುಜರಾತಿಗಳೇ ಕಳಚುವ ಸೂಚನೆ ಗುಜರಾತಿನಲ್ಲಿ ಮೊನ್ನೆ ನಡೆದ ಸ್ಥಳೀಯ ಚುನಾವಣೆಯಲ್ಲಿ ನಿಚ್ಚಳಗೊಂಡಿದೆ. ಕಾಂಗ್ರೆಸ್ ಕಳೆದ 2010 ರಲ್ಲಿ ತಾಲೂಕ್ ಪಂಚಾಯತ್ ಚುನಾವಣೆಯಲ್ಲಿ 26 ಸ್ಥಾನ ಗಳಿಸಿದ್ದರೆ ಜಿಲ್ಲಾ ಪಂಚಾಯತ್‌ನಲ್ಲಿ ಕೇವಲ ಎರಡಕ್ಕೇ ತೃಪ್ತಿಪಟ್ಟಿತ್ತು. ಆದರೆ ಮೊನ್ನೆ ಈ ಅನುಪಾತ 134-22ಕ್ಕೇರಿ ಬದಲಾವಣೆಯ ಸೂಚನೆಯನ್ನು ನೀಡಿದೆ. ಅಂತೂ ಅವತ್ತು ನಮೋ.. ನಮೋ.. ಅನ್ನುತ್ತಿದ್ದವರ ಬಾಯಲ್ಲಿ ಈಗ ಕೇಳುತ್ತಿರುವುದು ಮಾತ್ರ ಕೇವಲ 'ಲಭೋ', 'ಲಭೋ' ಅನ್ನುವ ಸದ್ದು.

-ಅವಿನಾಶ್ ಎಮ್.ಎಸ್. ನೆಲ್ಲಿಕಾರ್

ಅನನ್ಯ ಅನಂತ್



ಈತ ಬೆಳೆದದ್ದು ಶ್ಯಾಂ ಬೆನಗಲ್ ಎಂಬ ಅಪ್ಪಟ ಕಲಾತ್ಮಕ ನಿರ್ದೇಶಕರ ಕುಲುಮೆಯಲ್ಲಿ. ಮೊದಮೊದಲು ಪಾತ್ರವಾಗಿದ್ದೂ ಇದೇ ಮಾದರಿಯ ಚಿತ್ರಗಳಿಗೆ. 'ಸಂಕಲ್ಪ' ಚಿತ್ರದ ಮೂಲಕ ಕನ್ನಡಿಗರಿಗೆ, ಕನ್ನಡ ಚಿತ್ರ ಜಗತ್ತಿಗೆ ಪರಿಚಯವಾದ ಈ ನಟ, ಆನಂತರ ಪಾದರಸದಂತೆ ಹರಿದರು. ಕಮರ್ಷಿಯಲ್ ಚಿತ್ರಗಳಲ್ಲೂ ಮಿಂಚಿದರು, ಕಲಾತ್ಮಕ ಚಿತ್ರಗಳಲ್ಲೂ ಸೈ ಎನಿಸಿಕೊಂಡರು, ಹಾಸ್ಯ ನಟರಾಗಿಯೂ ಗಲ್ಲಾ ಪೆಟ್ಟಿಗೆಯಲ್ಲಿ ಗೆದ್ದರು. ಪ್ರತಿ ಸಿನಿಮಾದಲ್ಲಿ ಅನಂತ್ ಪಾತ್ರಕ್ಕೆ ತಾವಾಗದೇ, ತಾವೇ ಪಾತ್ರವಾದರು. ಈಗ ಅನಂತ್ ಅವರಿಗೆ ಅರವತ್ತು ದಾಟಿದ್ದರೂ ಅವರು ಮೇಕ್ ಓವರ್ ಮಾಡಿಕೊಂಡು ಈಗಲೂ ಡಿಮಾಂಡ್‌ನಲ್ಲಿರುವ ನಟ.

ಆತ ಸುಂದರ ಹಿಂಡುಡುಗಿಯರ ನಡುವೆ ಕೂತರೂ ಮಿಂಚುತ್ತಾನೆ. ಅದೇ ತೀಕ್ಷ್ಣ ಕಣ್ಣು, ರಸಿಕರಿಗೆ ಇನ್ನಷ್ಟು ತುಟಿ ಬಿಚ್ಚಿ ನಗಲಿ ಆತ ಅನ್ನುವ ಬಯಕೆ. ಪ್ರತಿ ಪ್ರಶ್ನೆಗೂ ನಗುವಿನಿಂದಲೇ ಶುರು ಆಗುವ ಉತ್ತರ. ನೀಟಾಗಿ ತೀಡಿದ ಕ್ರಾಪು. ಸಂಜೆವರೆಗೂ ಮಾಸಲ್ಲ ಮುಂಜಾನೆಯೇ ತೊಟ್ಟಿದ್ದ ಅಂಗಿಯ ಗರಿಗರಿ. ಆತನಿಗೆ ಅರವತ್ತು ದಾಟಿದ ಹರೆಯ. ಆದರೂ ಅವನ ಮೇಲಿನ ಮೋಹ ಕಡಿಮೆ ಆಗಿಲ್ಲ, ಅದು ಕಡಿಮೆ ಆಗುವಂಥದ್ದೂ ಅಲ್ಲ. ಈ ಹೊತ್ತಿನ ಕಾಲದ ಅದೆಷ್ಟೋ ಹುಡುಗಿಯರು, ತನ್ನ ಅಮ್ಮನ ಕಣ್ಣಲ್ಲಿ ಅವಿತು ಕುಳಿತಿರುವ ಈ ನಟನನ್ನು ಬಲವಂತದಿಂದ ಕಸಿದಿದ್ದೂ ಇದೆ. ಏಕಕಾಲಕ್ಕೆ ಅಮ್ಮನಿಗೂ ಮಗಳಿಗೂ ಇಷ್ಟವಾದ ನಟನ ಹೆಸರೇ ಅನಂತ್ ನಾಗ್.

ಹಲವಾರು ಹಿಂದಿ ಧಾರಾವಾಹಿಗಳಲ್ಲಿ ನಟಿಸುತ್ತಿದ್ದ ಅನಂತ್ ಕನ್ನಡಕ್ಕೆ ಬಂದಿದ್ದು 'ಸಂಕಲ್ಪ' ಸಿನಿಮಾದ ಮೂಲಕ. ಅದು ಹೊಸ ಅಲೆಯ ಚಿತ್ರ. ಅಲ್ಲಿಂದ ಮೊನ್ನೆಯಷ್ಟೇ ಬಿಡುಗಡೆಯಾದ 'ದಿ ಪ್ಲಾನ್' ಚಿತ್ರದವರೆಗೂ ಅನಂತ್ ವೈವಿಧ್ಯಮಯ ಪಾತ್ರಗಳಲ್ಲಿ ಕಾಣಿಸಿಕೊಂಡವರು. ಸಾಕಷ್ಟು ಸಲ ಪಾತ್ರವೇ ತಾವಾದವರು.

ಶ್ಯಾಮ್ ಬೆನಗಲ್‌ರಂಥ ಅಪ್ಪಟ ದೇಸಿ ಕುಲುಮೆಯಲ್ಲಿ ತಯಾರಾದ ಇವರು ತಮ್ಮ ಪ್ರತಿಭೆಯನ್ನೇ ಬಂಡವಾಳವನ್ನಾಗಿಸಿದರು. ಹೀಗಾಗಿ ಅನಂತ್ ಅಂದಿನಿಂದ ಇಂದಿನತನಕ ನಿರ್ದೇಶಕರ ಪಾಲಿನ ಹಾಟ್ ಫೇವರಿಟ್.

ಭಾರತೀಯ ಸಿನಿಮಾರಂಗದಲ್ಲಿ ಬೆರಳೆಣಿಕೆಯಷ್ಟು ಅಪರೂಪದ ಕಲಾವಿದರಿದ್ದಾರೆ. ಅವರಲ್ಲಿ ಅನಂತ್ ಕೂಡ ಒಬ್ಬರು. ಇಳಿವಯಸ್ಸಿನ ಈ ಕಲಾವಿದರಲ್ಲಿ ಮೇಕ್ ಓವರ್ ಮಾಡಿಕೊಂಡ ಇಬ್ಬರು ಧ್ರುವತಾರೆಯರು ಸಿಗುತ್ತಾರೆ. ಬಾಲಿವುಡ್‌ನ ಅಮಿತಾಭ್ ಬಚ್ಚನ್ ಒಬ್ಬರಾದರೆ, ಕನ್ನಡದ ಅನಂತ್ ನಾಗ್ ಮತ್ತೊಬ್ಬರು.

ಬಹುತೇಕರಿಗೆ ಈ ವಿಷಯ ಗೊತ್ತಿಲ್ಲ. ಅನಂತ್ ನಾಗ್ ಹೀರೋ ಆಗಿ ಕಾಣಿಸಿಕೊಂಡ ಕೊನೆಯ ಸಿನಿಮಾ 'ನಾನೇನೂ ಮಾಡ್ಲಿಲ್ಲ'. ಈ ಚಿತ್ರದ ಶೂಟಿಂಗ್ ಮುಗಿಸಿದ್ದು ಕೂಡ ಕಸಿವಿಸಿಯಲ್ಲೇ. ಚಿತ್ರಕ್ಕೆ ಸುಧಾರಾಣಿ ನಾಯಕಿ. ಇವರಿಬ್ಬರ ನಡುವೆ ವಯಸ್ಸಿನ ಸಾಕಷ್ಟು ಅಂತರವಿತ್ತು. ಸ್ವತಃ ಅನಂತ್ ನಾಗ್‌ಗೂ ಅನಿಸಿತ್ತು, ಆಗ ಮನೆಗೆ ಬಂದವರು ಒಮ್ಮೆ ಹೆಂಡತಿಯ ಮುಂದೆ ಹೇಳಿಯೇಬಿಟ್ಟರು. "ಗಾಯತ್ರಿ ನನಗೆ ವಯಸ್ಸಾಯಿತು. ನಾನಿನ್ನು ನಾಯಕನಾಗಿ ನಟಿಸಲಾರೆ. ಸುಧಾರಾಣಿಯಂಥ ಚಿಕ್ಕ ವಯಸ್ಸಿನ ಹುಡುಗಿಯ ಜತೆ ನಾನು ಹೀರೋ ಆಗಿ ನಟಿಸಿದರೆ ನೋಡುಗರಿಗೆ ಏನನಿಸಬಾರದು? ಸಪೋರ್ಟಿಂಗ್ ಪಾತ್ರ ಕೊಟ್ಟರೆ ಮಾಡುತ್ತೇನೆ. ಇಲ್ಲವಾದರೆ ಮನೆಯಲ್ಲೇ ಇರುತ್ತೇನೆ" ಅಂದರು. ಈವರೆಗೂ ಹಾಗೆಯೇ ನಡೆದುಕೊಂಡು ಬಂದಿದ್ದಾರೆ.

ಹಾಗಂತ ಪ್ರೇಕ್ಷಕರು ಅವರನ್ನು ತಿರಸ್ಕರಿಸಲಿಲ್ಲ. ರಜನೀಕಾಂತ್, ಕಮಲ್ ಹಾಸನ್, ಮುಮ್ಮುಟ್ಟಿ, ಮೋಹನ್ ಲಾಲ್, ಚಿರಂಜೀವಿ ರೀತಿಯಲ್ಲೇ ಇವರನ್ನು ಅಭಿಮಾನಿಗಳು ಒಪ್ಪುತ್ತಿದ್ದರೇನೋ. ಆದರೆ ಅನಂತ್‌ಗೆ ಅದು ಸರಿ ಕಾಣಿಸಲಿಲ್ಲ, ಇದಕ್ಕೆ ಕಾರಣ ರಂಗಭೂಮಿ ಕಲಿಸಿದ ಪಾಠವೇ ಇರಬೇಕು. ನಾಟಕಗಳಲ್ಲಿ ಹೀರೋ ಅಂತ ಇರುವುದಿಲ್ಲ, ಅಲ್ಲಿನ ಕಲಾವಿದರು ಎಲ್ಲಾ ರೀತಿಯ ಪಾತ್ರಗಳನ್ನೂ ಮಾಡುತ್ತಾರೆ. ಅನಂತ್ ನಾಗ್ ಮಾಡಿದ್ದಾರೆ. ಹೀಗಾಗಿ ಸದಾ ಚಾಕ್ಲೆಟ್ ಹೀರೋ ಆಗಿರಬೇಕು ಅಂತ ಅವರಿಗೆ ಅನಿಸಿರಲಿಕ್ಕಿಲ್ಲ.



ಮಂಥನ್ ಸಿನಿಮಾದಲ್ಲಿ ಸ್ಮಿತಾ ಪಾಟೀಲ್ ಜೊ

ವೈವಿಧ್ಯಮಯ ಪಾತ್ರಗಳಲ್ಲಿ ಅನಂತ್

ಚೊಚ್ಚಲು ಚಿತ್ರದಲ್ಲೇ ಅಪರೂಪದ ಪಾತ್ರ ಗಿಟ್ಟಿಸಿಕೊಂಡ ಅನಂತ್ 'ಸಂಕಲ್ಪ' ಚಿತ್ರದ ನಂತರ ತೆರೆಕಂಡ 'ಹಂಸಗೀತೆ'ಯಲ್ಲಿ ಅನುಭವಕ್ಕೂ ಮೀರಿದ ಪಾತ್ರವನ್ನು ಪೋಷಿಸಿದರು. ತರಾಸು ಕಾದಂಬರಿಯನ್ನು ಆಧರಿಸಿ ಮೂಡಿಬಂದ ಈ ಸಿನಿಮಾದಲ್ಲಿ ಅನಂತ್ ಗಮನ ಸೆಳೆದಿದ್ದರು. 'ಬಯಲು ದಾರಿ', 'ಬರ', 'ಅವಸ್ಥೆ'ಯಲ್ಲಿ ಒಂದು ರೀತಿಯ ಪಾತ್ರ ನಿರ್ವಹಿಸಿದರೆ, 'ಧೈರ್ಯ ಲಕ್ಷ್ಮಿ' ಸಿನಿಮಾದಲ್ಲಿ ಮತ್ತೊಂದು ರೀತಿಯ ಪಾತ್ರ ಮಾಡುವ ಮೂಲಕ ಅಚ್ಚರಿ ಮೂಡಿಸಿದರು.

'ಧೈರ್ಯ ಲಕ್ಷ್ಮಿ' ಚಿತ್ರದಲ್ಲಿ ಇವರದ್ದು ಹೆಂಡತಿಗೆ ಹೆದರುವ ಗಂಡನ ಪಾತ್ರ. ಅಲ್ಲಿಯತನಕ ತುಂಬಾ ಗಂಭೀರವಾದ ಪಾತ್ರಗಳಲ್ಲಿ ನಟಿಸುತ್ತಿದ್ದ ಅನಂತ್ ಸಡನ್ನಾಗಿ ಕಾಮಿಕ್ ಪಾತ್ರದತ್ತ ಮುಖ ಮಾಡಿದರು. ಅವರಲ್ಲಿ ಕಾಮಿಕ್ ಟೈಮಿಂಗ್ ಸೂಪರ್ ಆಗಿದ್ದ ಕಾರಣ, ಮುಂದಿನ ಹಲವು ಚಿತ್ರಗಳು ಇದೇ ಮಾದರಿಯಲ್ಲೇ ಮೂಡಿಬಂದವು. ಹಲವು ಸಿನಿಮಾಗಳ ನಂತರ ತಾನು ಇಂಥದ್ದೇ ಪಾತ್ರಕ್ಕೆ ಬ್ರ್ಯಾಂಡ್ ಆಗುತ್ತೇನೆ ಅನಿಸಿತ್ತೋ ಏನೋ ಮತ್ತೆ ಅಲ್ಲಿಂದ ಜಿಗಿದರು. 'ಬೆಳದಿಂಗಳ ಬಾಲೆ'ಯಂತೆಯೇ ನಾನಾ ಪಾತ್ರಗಳಲ್ಲಿ ಇವರು ಪ್ರೇಕ್ಷಕರನ್ನು ಕಾಡಿದರು.

'ಬೆಳದಿಂಗಳ ಬಾಲೆ' ಚಿತ್ರ ಮಾಡುವಾಗ ಅನಂತ್ ಅವರಿಗೆ ನಡುವಯಸ್ಸು. ಸಿನಿಮಾದಲ್ಲಿ ಇವರದ್ದು ವಿಭಿನ್ನ ಪಾತ್ರ. "ನನ್ನ ವಯಸ್ಸಿಗೂ ಪಾತ್ರಕ್ಕೂ ಸರಿ ಹೊಂದುತ್ತಾ?" ಎಂದು ನಿರ್ದೇಶಕ ಸುನೀಲ್ ಕುಮಾರ್ ದೇಸಾಯಿಯನ್ನು ಕೇಳಿಯೇಬಿಟ್ಟರು ಅನಂತ್. ಆಗ ನಿರ್ದೇಶಕರಿಂದ ಬಂದ ಉತ್ತರ ಒಂದೇ: "ಈ ಪಾತ್ರದಲ್ಲಿ ನೀವು ನಟಿಸದೇ ಇದ್ದರೆ, ಈ ಸಿನಿಮಾವನ್ನೇ ನಾನು ಮಾಡುವುದಿಲ್ಲ." ಪಾತ್ರ ಅದೆಂಥದ್ದೇ ಆಗಿದ್ದರೂ, ಜೀವ ತುಂಬಿ ಬಿಡುವ ಕಲೆ ಅವರಲ್ಲಿತ್ತು, ಹೀಗಾಗಿ 'ನಿಷ್ಕರ್ಷ'ದಲ್ಲಿ ಪುಟ್ಟ ಪಾತ್ರ ಮಾಡಿದ್ದರೂ ಇವತ್ತಿಗೂ ಅದು ನೆನಪಿನಲ್ಲುಳಿದಿದೆ.

"ಇನ್ನು ಮುಂದೆ ನಾನು ನಾಯಕನಾಗಲಾರೆ" ಅಂದಿದ್ದ ಅನಂತ್‌ಗೆ ಮತ್ತೆ ಹೀರೋಪಟ್ಟ ಕಟ್ಟಿದ್ದು ಕವಿತಾ ಲಂಕೇಶ್. ಇವರ ನಿರ್ದೇಶನದಲ್ಲಿ ಮೂಡಿ ಬಂದ 'ಪ್ರೀತಿ ಪ್ರೇಮ ಪ್ರಣಯ' ಸಿನಿಮಾ ಅನಂತ್ ವೃತ್ತಿ ಬದುಕಿನ ಹಲವು ಹರಿವುಗಳಿಗೆ ಸಾಕ್ಷಿ ಆಯಿತು. ಈ ಸಿನಿಮಾದಲ್ಲಿ ಅವರದ್ದು ಅದೇನು ಹುಮ್ಮಸ್ಸು, ಲವಲವಿಕೆ. ಸಿಕ್ಸ್‌ಪ್ಯಾಕ್ ಹೀರೋಗಿಂತಲೂ ಗಟ್ಟಿಮುಟ್ಟು ಅನಿಸಿದರು. ತುಂಟತನ, ವಯಸ್ಸಿನ ಅಂತರದ ಪಾತ್ರವನ್ನು 'ಪ್ರೀ... ಇಲ್ಲದ ಮೇಲೆ' ಧಾರಾವಾಹಿಯಲ್ಲೂ ಮುಂದುವರೆಸಿದ...

ನಾನು ಮತ್ತು ನಾನು

ಒಂದೇ ವಾರದಲ್ಲಿ ಒಬ್ಬ ನಾಯಕನ ಎರಡು ಚಿತ್ರ... ಬಿಡುಗಡೆ ಆಗುವುದಿಲ್ಲ, ಆಗಿದ್ದೂ ಗೆದ್ದ ಉದಾಹರಣೆ ಸಿ... ದಿಲ್ಲ. ಅನಂತ್ ಹಾಗಲ್ಲ, ಒಂದೇ ಸಮಯದಲ್ಲೇ ಎ... ಧಾರಾವಾಹಿಗಳನ್ನು ನಿಭಾಯಿಸಿದ ಕೀರ್ತಿ ಇವರದ್ದು. ... ಟಿವಿ'ಯಲ್ಲಿ 'ಚಿಟ್ಟೆ ಹೆಜ್ಜೆ' ಧಾರಾವಾಹಿ ಮೂಡಿಬರುತ್ತಿ... ಅದೇ ಸಮಯದಲ್ಲೇ 'ನಿತ್ಯೋತ್ಸವ' ಕೂಡ 'ಜೀ' ಚಾನೆಲ... ಟೆಲಿಕಾಸ್ಟ್ ಆಗುತ್ತಿತ್ತು, ಆಗ ಅದೆಷ್ಟೋ ಅಭಿಮಾನಿ... ಚಾನೆಲ್‌ಗಳಿಗೆ ಫೋನ್ ಮಾಡಿ ಟೆಲಿಕಾಸ್ಟ್ ಸಮಯ... ಬದಲಾಯಿಸುವಂತೆ ಕೇಳಿಕೊಂಡಿದ್ದಿದೆ. ಅದು ಸಾಧ್ಯವಾಗದಿ... ಶಪಿಸುತ್ತಲೇ ಮರುಪ್ರಸಾರವನ್ನು ನೋಡಿದ್ದಿದೆ. ಏಕಕಾಲಕ್ಕೆ ಅ... ಅವರು ನಿಭಾಯಿಸಿದ್ದ ಆವೆರಡೂ ಪಾತ್ರಗಳನ್ನೂ ಇಷ್ಟಪಟ್ಟ... ಇದು ಅನಂತ್ ನಾಗ್ ಒಬ್ಬರಿಗೇ ಇರುವ ಶಕ್ತಿ.

ಡಾನ್ಸ್ ವೀಕ್ನೆಸ್

ಪಾತ್ರಕ್ಕೆ ಅದೆಷ್ಟೇ ಆಳವಿದ್ದರೂ ಈಜಿ ಬಿಡುವ ... ಅನಂತ್‌ಗೆ ಸಿದ್ಧಿಸಿದೆ. ಆದರೆ ಅವರಿಗೆ ಡಾನ್ಸ್ ... ಫೈಟ್ ಅಂದರೆ ಆಗದು. ಅನಂತ್ ನಾಗ್ ನಟ... ಸಿನಿಮಾದ ಹಾಡನ್ನು ಸೂಕ್ಷ್ಮವಾಗಿ ಗಮನಿಸಿ, ಅ... ಡಾನ್ಸ್ ಮಾಡಲಾರರು. ಅಪ್ಪಿತಪ್ಪಿಯೂ ಕೈ ಕ... ತಿರುಗಿಸುವುದಿಲ್ಲ, ಆದರೂ ಅವರ ಸಿನಿಮಾಗಳ ಹಾಡು... ಫೇಮಸ್. ಕುಣಿಯುವುದಕ್ಕಿಂತ ಭಾವದಲ್ಲೇ ಹಾ... ಬಂಧಿಸುತ್ತಾರೆ. ಹೀಗಾಗಿಯೇ 'ನೋಡಿ ಸ್ವಾಮಿ ನಾವಿರೋ... ಹೀಗೆ' ಸಿನಿಮಾದ 'ಭಾಗ್ಯದ ಲಕ್ಷ್ಮಿ ಬಾರಮ್ಮ' ಹ... ಭೀಮ್‌ಸೇನ್ ಜೋಶಿ ಅವರ ಕಂಠಸಿರಿಯಲ್ಲಿ ಮ... ಬಂದಿದ್ದರೂ ಅಲ್ಲಿ ಕಾಣುವುದು ಅನಂತ್ ನಾಗ್.

'ಪಂಚರಂಗಿ' ಸಿನಿಮಾದಲ್ಲೂ ಹಿನ್ನೆಲೆಯಲ್ಲಿ ಹ... ಬಂದರೆ, ಇವರು ಸುಮ್ಮನೆ ನಡೆದುಕೊಂಡು ಹೋಗು... ಅದು ಕೂಡ ಒಂದು ರೀತಿಯ ಡಾನ್ಸ್ ಅನಿಸಿ ಬಿಡು...

'ಮಿಂಚಿನ ಓಟ'ದಂತಹ ಬೆರಳೆಣಿಕೆಯ ಸಿ... ಬಿಟ್ಟರೆ, ಇವರ ಚಿತ್ರಗಳಲ್ಲಿ ಹೆಚ್ಚಿಕ್ಕಿ ಸಾಹಸಮಯ ದೃ...



ಮೊದಲ ಹಿಂದಿ ಚಿತ್ರ ಅಂಕುರ್‌ನಲ್ಲಿ ಅನಂತ್



ಲಕ್ಷ್ಮಿ ಜೊತೆ ಸುಮಾರು 25 ಸಿನಿಮಾಗಳಲ್ಲಿ ನಟಿಸಿದ ಅನಂತ್





ಕಲಾತ್ಮಕ ನಿರ್ದೇಶಕ ಶ್ಯಾಂ ಬೆನಗಲ್ ಜೊತೆ ಅನಂತ್, ಮೋಹನ್ ಅಘಾಶೆ, ಓಂಪುರಿ, ಶಭಾನಾ ಅಜ್ಮಿ, ನಾಸಿರುದ್ದೀನ್ ಶಾ ಮತ್ತು ಸ್ಮಿತಾ ಪಾಟೀಲ್



...ಜವುದಿಲ್ಲ. ಅಂತಹ ಚಿತ್ರಗಳನ್ನು ಇವರು ...ಇರಲಿಲ್ಲ. ಸಹೋದರ ಶಂಕರ್ ನಾಗ್ ಜತೆಗಿನ ...ತಮ್ಮನಿಗೆ ಹೆಚ್ಚು ಫೈಟ್ ಕೊಡಿ ಅನ್ನುತ್ತಿದ್ದರು.

...ಕಳಿಸಿದ 'ಮಿಂಚಿನ ಓಟ


...ಪೋಷಕ ಪಾತ್ರ ಮಾಡುತ್ತಲೇ ಮತ್ತೆ ...ಸುತ್ತಿದ್ದಾರೆ ಅನಂತ್. ಹಿರಿಯ ನಿರ್ದೇಶಕರಲ್ಲ, ...ರ್ದೇಶಕರೂ ಇವರಿಗಾಗಿ ಕತೆ ಬರೆಯುತ್ತಿದ್ದಾರೆ. ...ತ್ರಗಳನ್ನು ಸೃಷ್ಟಿಸುತ್ತಿದ್ದಾರೆ. ಗಡ್ಡ ವಿಜಯ್ ...'ಪ್ಲಸ್' ಚಿತ್ರದಲ್ಲಿ ಅನಂತ್ ನಾಗ್ ವಿಭಿನ್ನ ...ದಿದ್ದರು. ಅದಕ್ಕಾಗಿ ಮೇಕ್ ಓವರ್ ಕೂಡ ...ದರು. ಇಲ್ಲಿ ಅವರದ್ದು ಉದ್ಯಮಿಯ ಪಾತ್ರ. ...ಸಾಕಷ್ಟು ತಯಾರಿಯೂ ನಡೆಯಿತು.

...ಮಿಂಚಿನ ಓಟ'ವನ್ನು ನೆನಪಿಸುವ 'ದಿ ಪ್ಲಾನ್' ...ಬಿಬಂತು. ಮೊನ್ನೆಯಷ್ಟೇ ತೆರೆಕಂಡ ಈ ...ಅನಂತ್ ಹೀರೋ. ಇದೊಂದು ಜೈಲು ...ಮಾ. ಈ ವಯಸ್ಸಿನಲ್ಲೂ ಅವರು ಖಾಕಿ ...ನಿವೃತ್ತಿ ಅಂಚಿನಲ್ಲಿರುವ ಪೊಲೀಸ್ ಆಫೀಸರ್ ...ದು ಅನಿಸಲೇ ಇಲ್ಲ. ಇನ್ನಷ್ಟೇ ಬಿಡುಗಡೆ ...ವ 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ...ಇವರು ವಿಶೇಷ ಪಾತ್ರ ನಿರ್ವಹಿಸಿದ್ದಾರೆ. ...ತ್ತ ಸಿನಿಮಾದ ಪ್ರಮುಖ ಪಾತ್ರದಲ್ಲಿದ್ದರೂ, ...ರ್ವಹಿಸಿರುವ ಪಾತ್ರವೇ ಪ್ರಧಾನವಾಗಿದೆ.

...ಜ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ...ಮಮತೆಯ ಕರೆಯೋಲೆ' ಸೇರಿದಂತೆ ಸಾಕಷ್ಟು ...ಇವರು ಡಿಫರೆಂಟ್ ಪಾತ್ರದಲ್ಲಿ ...ಸುತ್ತಿದ್ದಾರೆ. ದಿನಕ್ಕೆ ಎರಡು ಸಿನಿಮಾಗಳಲ್ಲಿ ...ಬಿಜಿ ಆಗಿದ್ದಾರೆ.

...ಜ್ಜೆಗಳು ಗಟ್ಟಿಯಾಗಿದ್ದವು!

...ನೋಡಿದರೆ ಮುಂಬೈ ವಾಲಾನಂತೆ ಕಾಣುವ ...ಡದ ಅಪ್ಪಟ ಪ್ರತಿಭೆ. ಹುಟ್ಟಿದ್ದು ಕರ್ನಾಟಕದ ...ಲ್ಲಾದರೂ, ಮುಂಬೈನಲ್ಲೂ ಬೆಳೆದರು. ಮತ್ತೆ ...ನೆಲೆಯೂರಿದರು. ಅಮ್ಮ ದಕ್ಷಿಣ ಕನ್ನಡದವರು. ...ಷ ಕನ್ನಡ. ಬಾಲ್ಯವನ್ನು ಅಳಿದ್ದು ಅಪ್ಪ ಕೆಲಸ ...ಆನಂದಾಶ್ರಮದಲ್ಲಿ. ಓದಿನ ಪ್ರಗತಿಯೇ ...ಹೋಗುವಂತೆ ಮಾಡಿದ್ದು. ಶಾಲೆಯಲ್ಲಿ ಜಾಣ



...ಲ್ಲಿ ಹೊನ್ನಾವರ, ಕುಮುಟಾನೇ ಇವರ ಪಾಲಿನ ...ಮಾಯಾನಗರಿ ಮುಂಬೈಗೆ ಹೋದ ನಂತರ, ...ಸೂರಲು ಪಟ್ಟ ಕಷ್ಟ ಬಣ್ಣಿಸದಳ. ಕನ್ನಡ ...ಲ್ಲಿ ಓದಿದ್ದ ಈ ಹುಡುಗನಿಗೆ ಮುಂಬೈಯೇ ... ಜತೆಗೆ ಇಂಗ್ಲಿಷ್ ಮತ್ತೊಬ್ಬ ದಾನ್. ಹೀಗಾಗಿ ...ಕ್ಷೆಯಲ್ಲಿ ಇಂಗ್ಲಿಷ್ ಫೇಲ್. ಇದು ಅವರ ...ಸೋಲು. ಅದಕ್ಕೆ ಪ್ರತೀಕಾರ ಅನ್ನುವಂತೆ ಮುಂದೆ ...ಓದಿದ್ದು ಅದೇ ಇಂಗ್ಲಿಷ್‌ನಲ್ಲಿರುವ ಸೈನ್ಸ್. ...ಗಳೇ ಪರಿಚಯ ಆಗಿದ್ದು ಕೊಂಕಣಿ ... ಕನ್ನಡ, ಕೊಂಕಣಿ ನಾಟಕಗಳಲ್ಲಿ ...ಲ್ಲೇ, ಸತ್ಯದೇವ್ ದುಬೆ ಪರಿಚಯ ಆದರು. ... ಬಾಡಿ ಲಾಂಗ್ವೇಜ್ ಬದಲಾಯಿತು. ಮುಂದೆ ...ದಿ ಭಾಷೆಯ ರಂಗ ಪ್ರಯೋಗಗಳಲ್ಲೂ ...ದರು. ರಂಗಭೂಮಿಯಲ್ಲಿ ಫೇಮಸ್ ...ಯೂನಿಯನ್ ಬ್ಯಾಂಕ್‌ನಲ್ಲಿ ಅಸಿಸ್ಟೆಂಟ್ ...ನೇಜರ್ ಹುದ್ದೆ ಮತ್ತೆ ಬಣ್ಣದ ಸೆಳೆತದಿಂದಾಗಿ ...ಕಡೆ ವಾಲಿದರು. ಇವತ್ತಿಗೂ ನಟನೆಯಲ್ಲೇ ...ಗಿದ್ದಾರೆ, ಜನರನ್ನು ಸೆಳೆಯುತ್ತಲೇ ಇದ್ದಾರೆ

■ ಸಾವಂತಿ

ಹೀಗೊಂದಿಷ್ಟು ನೆನಪುಗಳು...

'ನನ್ನ ತಮ್ಮ ಶಂಕರ್' ಪುಸ್ತಕದಲ್ಲಿ ಅನಂತ್‌ನಾಗ್ ಅವರು ನಟನೆಗೆ ಪ್ರವೇಶಕೊಟ್ಟಿದ್ದು, ತಮ್ಮ ಶಂಕರ್‌ನಾಗ್ ರಾಜಕೀಯ ನಿಲುವು ತಾಳಿದ್ದು ಕುರಿತು ಬರೆದಿರುವ ಭಾಗಗಳನ್ನು ಇಲ್ಲಿ ನಮ್ಮ ಓದುಗರಿಗೆ ನೀಡುತ್ತಿದ್ದೇವೆ.



ಅತ್ತ ಶಿರಾಲಿಯಲ್ಲಿ, ಭಿನ್ನಾಭಿಪ್ರಾಯಗಳು ಬೆಳೆದಂತೆ, ನಮ್ಮ ತಂದೆಯವರು ಕೆಲಸಕ್ಕೆ ರಾಜೀನಾಮೆ ಇತ್ತರು. ಇಪ್ಪತ್ತೈದು ವರ್ಷಗಳ ದೀರ್ಘಕಾಲ ಹಿರಿಯ ಗುರುಗಳನ್ನೊಪ್ಪಿ ಸೇವೆ ಸಲ್ಲಿಸಿದ, ಆಧ್ಯಾತ್ಮದ ವಾತಾವರಣದಲ್ಲಿ ಜೀವನ ಕಳೆದ ತೃಪ್ತಿ ಒಂದೆಡೆಯಾದರೆ, ಕಿರಿಯ ಗುರುಗಳು ಪಟ್ಟಕ್ಕೇರಿದ ಎರಡು ವರ್ಷಗಳ ಅಲ್ಪಾವಧಿಯಲ್ಲೇ ತಮಗಾದ ಅವಮಾನದ ನೋವು ಉದ್ವೇಗ ಇನ್ನೊಂದೆಡೆ ನಡೆದ ಘಟನಾವಳಿ ಅವರನ್ನು ತುಂಬ ಘಾಸಿ ಮಾಡಿತು. ಕಣ್ಣುಗಳಿಂದ ಅರಳಿ ಮುಖವನ್ನೆಲ್ಲಾ ಆವರಿಸಿ ಶುಭ್ರದಂತಗಳ ಮೂಲಕ ಹೊರಚೆಲ್ಲುವ ಮುಕ್ತನಗು ಮಾಯವಾಯಿತು. ಜೀವನದಲ್ಲಿ ಹೀಗೇನಾದರೂ ಆಘಾತವುಂಟಾದಾಗ ಅಪ್ಪ-ಅಮ್ಮ ಕೇರಳದ ಆನಂದಾಶ್ರಮಕ್ಕೆ ಮೊರೆ ಹೋಗುವುದು ಸ್ವಾಭಾವಿಕ. ಆದರೀಗ ಅದೂ ಸಾಧ್ಯವಿರಲಿಲ್ಲ. ಮಠದ ಗುರುಗಳನ್ನು ಎದುರು ಹಾಕಿಕೊಂಡ ಅಪರಾಧಕ್ಕೆ ಆಶ್ರಮದ ಮಾತಾಜಿಯವರು ನಮ್ಮ ತಂದೆಯನ್ನು ತರಾಟೆಗೆ ತೆಗೆದುಕೊಂಡು ಅಲ್ಲಿಯ ದ್ವಾರವನ್ನು 'ಮುಚ್ಚಿದ್ದರು'!

ಪರಿಣಾಮ, ಮುಂಬೈಯ ಆ ಪುಟ್ಟ chawlನಲ್ಲೀಗ ನಮ್ಮ ನಾಲ್ವರ ಹೊಸ ಜೀವನ ಆರಂಭ! ಮರು-ಮರು-ಹೊಂದಾಣಿಕೆಗಳು! 54 ನೇ ವಯಸ್ಸಿನಲ್ಲಿ ನಮ್ಮ ತಂದೆ ಹೊಸ ಕೆಲಸಕ್ಕೆ ಅಲೆದಾಡಬೇಕೆನ್ನುವ ದುಃಸ್ಥಿತಿ!

ಇದಕ್ಕೆ ಮುನ್ನ, ಅಕ್ಕನ ಲಗ್ನಪತ್ರಿಕೆಯನ್ನು ಹಂಚಹೋದ ನನ್ನನ್ನು ಹವ್ಯಾಸಿ ನಾಟಕರಂಗದ ಜನರು spot ಮಾಡಿದ್ದರು. ಇನ್ನೋರ್ವ ನಾಟಕರಂಗದವರೇ ಅಂದಂತೆ 'ಕನಸುಗಳನ್ನು ಮಾರುವವರು'-ನಾನು ಸಂಪೂರ್ಣವಾಗಿ ಮಾರುಹೋಗಿದ್ದೆ, ಸ್ವಇಚ್ಛೆಯಿಂದ. ಎಲ್ಲ ರೀತಿಯ, ಎಲ್ಲ ಬಗೆಯ ಸೋಲು ಅಪಮಾನಗಳನ್ನು, ನೋವು ಕೀಳರಿಮೆಗಳನ್ನು, ಬೃಹದಾಕಾರವಾಗಿ ಎದುರು ನಿಂತ ಪ್ರಶ್ನಾರ್ಥಕ ಚಿಹ್ನೆಯನ್ನೂ, ಪರಿಪೂರ್ಣವಾಗಿ ಮರೆಸುವ ಅದ್ಭುತ ನಾಟಕ ಲೋಕ! ಹೊನ್ನಾವರ ಬಿಟ್ಟ ನಂತರ ಕಳೆದುಹೋದ ನನ್ನನ್ನು ಮರಳಿ ಪಡೆದಂತಾಗಿತ್ತು ನನಗೆ! ಈ ಗುಟ್ಟನ್ನು ಯಾರಿಗೂ ಹೇಳುವಂತಿರಲಿಲ್ಲ. ಹೇಳದೇ ತಿಳಿದುಕೊಂಡ ಶಂಕರ. ಹಿರಿಯ ಸಹೋದರನಿಗೆ ಸಿಗಲಾರಂಭಿಸಿದ ಹೆಸರು, ಮನ್ನಣೆ ಕಂಡು ಹಿರಿಹಿರಿ ಹಿಗ್ಗಿದ, ಹೆಮ್ಮೆ-ಕೌತುಕದಿಂದ ಬೀಗಿದ. ನನ್ನ ಆನಂದದಲ್ಲಿ ತನ್ನನ್ನೇ ಮರೆತು ತಾನೂ ಮಿಂದ. ಹೆಜ್ಜೆಹೆಜ್ಜೆಗೂ ಬೆಂಬಲಿಸಿ ಪ್ರೋತ್ಸಾಹಿಸಿದ. ನನ್ನೆಲ್ಲ ತಾಲೀಮುಗಳಿಗೆ ಬರುವ ಶಂಕರ, ಮನೆಗೆ ಹೋದ ಮೇಲೆ, ಪಾಠ ತಗೊಂಡ ಹಾಗೆ ಪ್ರತ್ಯೇಕವಾಗಿ ನನ್ನ ತಾಲೀಮು ತಗೋತಿದ್ದ. ಗತ್ತಿನಿಂದ ಇರು ಎಂದು ಸಲಹೆ ಬೇರೆ ಕೊಡುತ್ತಿದ್ದ! ನಾಟಕದ 'ಆಟ'ದ ದಿನಗಳಲ್ಲಂತೂ ನನಗಿಂತ ಅವನಿಗೆ ಹೆಚ್ಚು tension! ನನ್ನೆಲ್ಲಾ ಮಾತುಗಳು, ಯಾಕೆ ಇಡೀ ನಾಟಕದ 'ಮಾತುಗಳು' ಶಂಕರನಿಗೆ ಬಾಯಿಪಾಠ! ಒಂದು ದೃಶ್ಯ ಮುಗಿಸಿ ಬಂದರೂ side wing ನಲ್ಲಿ ನಿಂತು 'ಭಲೇ', 'ಭಲೇ' ಅಂತಿದ್ದ!

ನನಗಿಂತ ಆರು ವರ್ಷದ ಕಿರಿಯ, ನನ್ನಲ್ಲಿ ನನಗೇ ನಂಬಿಕೆ, ಆತ್ಮವಿಶ್ವಾಸ ಹುಟ್ಟಿಸಿ ಹೊಸ ವ್ಯಕ್ತಿತ್ವ ಮೂಡಿಸಿದ ಅನ್ನುವ ಸತ್ಯವನ್ನು ಬರೆದರೆ ಓದುಗರು ನಂಬಬೇಕು.


ಚಿತ್ರರಂಗಕ್ಕೆ ಬರುವ ಮುನ್ನ ಎಂಟು ವರ್ಷಗಳ ಕಾಲ ಐವತ್ತಕ್ಕೂ ಹೆಚ್ಚು ನಾಟಕಗಳಲ್ಲಿ ಪಾತ್ರಗಳನ್ನು ಮಾಡಿದ್ದೆ ಎಲ್ಲಾ ಬಗೆಯದು. Main role ಯಾವಾಗಲೂ ಸಿಗುತ್ತಿರಲಿಲ್ಲ. ಶಂಕರ ಒಂದೆರಡು ವರ್ಷಗಳಲ್ಲೇ ನಾಟಕಗಳ feel and texture, pacing, mood ಗಳ ಏರಿಳಿತ; ಅದಕ್ಕೆ ತಕ್ಕಂತೆ back-ground music; light and shade patterns; ಧ್ವನಿಗಳ projections-lowkey, mid key, high-key; ಪಾತ್ರಗಳ ಚಲನವಲನದ ತತ್ವ-ಸಿದ್ಧಾಂತ- no movements without motivation; maximum impact with minimal stage-craft; ಕೆಲ ನಾಟಕಗಳಲ್ಲಿ ಅಡಕವಾಗಿರುವ false climax; pre-climax, anti-climax and of course, climax. (ಇದನ್ನೆಲ್ಲಾ ಶಂಕರ ನನ್ನ ಹತ್ತಿರ ಚರ್ಚಿಸಿದಾಗ ಆತ ಈ ಸೂಕ್ಷ್ಮಗಳನ್ನು ಅರಿತದ್ದರ ಬಗ್ಗೆ ನನಗೆ ಆಶ್ಚರ್ಯವಾಗಿತ್ತು) ಎಲ್ಲವನ್ನೂ ಗಮನಿಸಿ, ಅಭ್ಯಸಿಸಿ, ಅರಿತು ಗ್ರಹಿಸಿಕೊಂಡು, ಸಂಗ್ರಹಿಸಿದ್ದ ಶಂಕರ! ಏಕಲವ್ಯನಂತೆ. (ಹಣಕೊಟ್ಟೂ ಕಲಿತವರಿಲ್ಲ; ಕಲಿಯೋಕ್ಕೆ ಹಣವೆಲ್ಲಿತ್ತು ಅನ್ನಿ!) ಶಂಕರನ ರಂಗಮಂಚದ ಮೇಲಿನ ಪ್ರಯೋಗಾತ್ಮಕ ಯಶಸ್ವಿ ಪ್ರಯತ್ನಗಳನ್ನು ಬೆಂದಕಾಳೂರಿನ ಜನ ನೋಡಿದ್ದಾರೆ ಅನ್ನೋದು ಸಮಾಧಾನದ ವಿಷಯ!

ಶಿಕ್ಷಣವನ್ನು ಅಲಕ್ಷಿಸಿದ (ಅಥವಾ ಶಿಕ್ಷಣದಿಂದ ಅಲಕ್ಷಿಸಲ್ಪಟ್ಟ) ನಾನು, ನಮ್ಮ ತಂದೆಯವರ ನನ್ನ ಬಗೆಗಿನ ಎಲ್ಲ ಕನಸುಗಳನ್ನು ಮಣ್ಣು ಮಾಡಿದ್ದೆ. ನೊಂದ ಅವರ ಮನಃಸ್ಥಿತಿಗೆ ಯಾವ ಸಾಂತ್ವನವನ್ನು ನೀಡಲೂ ನಾನು ಅಶಕ್ತನಾಗಿದ್ದಾಗ, ಶಂಕರ ಅವರಿಗೆ ಮುದ ನೀಡಿದ, ಸಮಾಧಾನ ತಂದ. ತನ್ನಷ್ಟಕ್ಕೆ ತಾನು ಓದಿ, ನೋಡಿ, ಕೇಳಿ ಬೆಳೆದ. ಬೆಳೆಯುತ್ತಲೇ ಹೋದ! ನನ್ನ ಶಿಕ್ಷಣದ ಮೇಲೆ ವ್ಯರ್ಥ ಸುರಿದ ಹಣದ ಶೇಕಡಾ ಹತ್ತರಷ್ಟಾದರೂ ಶಂಕರನಿಗೋಸ್ಕರ ವ್ಯಯಿಸಿದ್ದರೆ, ಶಂಕರ ಇನ್ನೇನೇನು ಸಾಧಿಸುತ್ತಿದ್ದನೋ!!

ಅಷ್ಟರಲ್ಲಿ ಬ್ಯಾಂಕೊಂದರಲ್ಲಿ ಹುದ್ದೆ ಸೃಷ್ಟಿಸಿ ಮೂರು ವರ್ಷಕ್ಕೋಸ್ಕರ contract ಮೇಲೆ ನಮ್ಮ ತಂದೆಯವರಿಗೆ ಕೆಲಸ ಕೊಡೋದರಲ್ಲಿ ನೆರವಾದರು ಒಬ್ಬ ಪುಣ್ಯಾತ್ಮರು. ಕೆಲಸ ಕೊಟ್ಟು ಬೆಂಗಳೂರಿಗೆ ಕಳಿಸಿದರು. ನಮ್ಮಮ್ಮ ಹೇಳುತ್ತಿದ್ದ ಇನ್ನೊಂದು ಬೆಕ್ಕಿನ ಬಿಡಾರ ಶುರುವಾಯಿತು ಬೆಂದಕಾಳಿನೂರಿನಲ್ಲಿ, 1968. And thereby hangs a tale-

A Passage (back home) to ಕರ್ನಾಟಕ... Bangalore.

* * *



ಶಂಕರ ನಿರ್ದೇಶಿಸಿದ 'ನೋಡಿಸ್ವಾಮಿ ನಾವಿರೋದು ಹೀಗೆ' ಚಲನಚಿತ್ರದ ಯಶಸ್ಸಿನ ಹಿಂದೆಯೇ ಮನೆ ಪ್ರಾಡಕ್ಷನ್‌ಗಳಾದ 'ಮಕ್ಕಳಿರಲವ್ವ ಮನೆತುಂಬ' 'ಆಕ್ಸಿಡೆಂಟ್' ಚಿತ್ರಗಳು. ಇದಕ್ಕೆ ಮುನ್ನ ಅನಂತಮೂರ್ತಿ ಕತೆ ಆಧಾರಿತ ಎಂ.ಎಸ್. ಸತ್ಯುರವರ ಚಿತ್ರ 'ಬರ', ಪ್ರಬುದ್ಧ 'ರಾಜಕೀಯ ಚಿತ್ರ' ಎಂದೆನಿಸಿಕೊಂಡಿದ್ದರೂ, ಅದರ ವಿತರಣೆ ಬಿಡುಗಡೆಗೆ ಯಾರೂ ಮುಂಬರಲಿಲ್ಲ.

'ನಾವೇ ರಿಲೀಸ್ ಮಾಡೋಣಣ್ಣ' ಎಂದ ಶಂಕರ, ಸಾಲ ಪಡೆದು ಚಿತ್ರವನ್ನು ಬಿಡುಗಡೆ ಮಾಡಲಾಯಿತು. ಅಂದಿನ ರಾಜ್ಯ ರಾಜಕೀಯಕ್ಕೆ ಕನ್ನಡಿ ಹಿಡಿದಂಥ ಚಿತ್ರ ಸಮಯೋಚಿತವೆಂದೆನಿಸಿಕೊಂಡಿತು. ಅದೇ ಸಮಯಕ್ಕೊಂಬಂತೆ ಗೋಕಾಕ್ ವರದಿ, ಅದರ ಕುರಿತು ಚಳವಳಿ ಕರ್ನಾಟಕ ಜನತೆಯ ಸುಪ್ತ ಪ್ರಜ್ಞಾವಂತಿಕೆಯನ್ನು ಜಾಗೃತಗೊಳಿಸಿತ್ತು, ಅದೇ ಮುಂದೆ ಜನತಾ ಸರ್ಕಾರ ಅಧಿಕಾರಕ್ಕೆ ಬರಲು ಪೂರಕವಾಯಿತು. 'ಬರ' ಚಿತ್ರದ ಯಶಸ್ಸನ್ನು, ನಮಗೆ ಅದರ ಹಿಂದಿಯಲ್ಲಿ ಅವತರಣಿಕೆಯನ್ನು ಭಾರತದಾದ್ಯಂತ ಬಿಡುಗಡೆ ಮಾಡುವ ಚಪಲಕ್ಕೆ ಹಚ್ಚಿತು. ಅನಂತರ ಅದು



ಬಂಗಾರ ಜಿಂಕೆಯಾಗಿ ನಮ್ಮಿಂದ ಬೆಲೆ ತೆತ್ತಿಸಿದ್ದು ಬೇರೆ ವಿಷಯ. ಹಿಂದಿ ಬರಸೂಖಾ (ಮೊದಲ ಹೆಸರು ಅಕಾಲ್-ಆದರೆ ಆಗ ಪಂಜಾಬ್ ಹೊತ್ತುಕೊಂಡಿತ್ತು, ಅಕಾಲಿ ದಳ V/s ಕಾಂಗ್ರೆಸ್!) ಹಿಂದಿ ಡಬ್ಬಿಂಗಿಗೆ ಶಂಕರನೂ ಬಂದ. ಕನ್ನಡ ಚಿತ್ರಗಳ ಸಂಭಾಷಣೆಯನ್ನು ಹಳೆಯ ಪದ್ಧತಿಯಲ್ಲೇ ಧ್ವನಿಗ್ರಹಣ ಮಾಡಲಾಗುತ್ತಿತ್ತು, ಮುಂಬೈನಲ್ಲಿ ಇಲೆಕ್ಟ್ರಾನಿಕ್ ಪದ್ಧತಿಯಲ್ಲಿ! ಹೊಸ ಆವಿಷ್ಕಾರ, ನನ್ನನ್ನು ವಿಶೇಷವಾಗಿ ಶಂಕರನನ್ನು ಅದು ಬಹಳ ಆಕರ್ಷಿಸಿತು. ಅಣ್ಣಾ ಇದನ್ನೊಂದನ್ನು ಬೆಂಗಳೂರಿಗೆ ತಂದೇ ತರಬೇಕೆಂದು ಆಣೆ ಮಾಡಿದ ಶಂಕರ. ಸಂಕೇತ್ ಸ್ಟುಡಿಯೋಗೆ ಅದೇ ಪ್ರೇರಣೆ!

ವಸಂತ ಮೊಕಾಶಿಯವರು 'ಆಕ್ಸಿಡೆಂಟ್' ಚಿತ್ರಕಥೆಯನ್ನು ಹೆಣೆದಿದ್ದರು. ಅದನ್ನೋದಿದ ಶಂಕರ ಒಂದೆರಡು ತಿಂಗಳುಗಳಲ್ಲೇ ಚಿತ್ರ ಮಾಡಿ ಮುಗಿಸಿದ್ದ. ಧನ ಬೆಂಬಲವೂ ಸಹಜವಾಗಿ, ಸುಲಭವಾಗಿ ಸಿಕ್ಕಿತ್ತು. ರಾಜಕೀಯ ಎಲ್ಲೆಡೆ ಎಲ್ಲರ ರಕ್ತವನ್ನು ಸೇರಿತ್ತು ಎಂಬಂತಿತ್ತು, ಪಂಜಾಬಿನಲ್ಲಿನ ಗೋಲ್ಡನ್ ಟೆಂಪಲ್ಲಿನ ಪಾವಿತ್ರ್ಯತೆಯನ್ನು 'ಭಂಗ' ಮಾಡಿದ ಅನಿವಾರ್ಯತೆ, ಅಸಹಾಯಕತೆ, ಸಿಟ್ಟುಗೊಂದಲಗಳ ವಾತಾವರಣ, ನಮ್ಮ ಚಿತ್ರದ ಕೊನೆಯಲ್ಲಿ ರಾಜಕಾರಣಿಗೆ (ನಾನೇ ವಹಿಸಿದ್ದೆ ಆ ಪಾತ್ರ) ಅವನ ಮನೆಯಂಗಳದಲ್ಲೇ ಗುಂಡಿಕ್ಕಿ ಕೊಲ್ಲುವ ದೃಶ್ಯವೊಂದಿತ್ತು. ಅವನನ್ನು ಕೊಲ್ಲಲೇಬೇಕೆಂದು ಶಂಕರ ಪಟ್ಟುಹಿಡಿದ. 'ಇದೊಂದು ಸಲ ನಾ ಹೇಳಿದ್ದೇ ಆಗಬೇಕು.'

'ಕೊಲೆ ಮಾಡೋದ್ರಿಂದ ಉತ್ತರ ಸಿಗೋಲ್ಲ, ಮೀನ್ಸ್ ಎಂಡ್ ಎಂಡ್ಸ್ ಬಗ್ಗೆ ಗಾಂಧಿಯವರೇ ಹೇಳಿಲ್ಲವೇ?'

'ಇದು ಆ ಗಾಂಧೀ ಕಾಲವಲ್ಲ; ಈ ಗಾಂಧೀ ಕಾಲ.'

'ಚೆನ್ನಾಗಿರಲ್ಲ, ವೈಲೆನ್ಸ್‌ಗೆ (violence) ಬೆಂಬಲ ಸೂಚಿಸಿದ ಹಾಗೆ ಆಗಲ್ವ? ನಮ್ಮ ಚಿತ್ರದಲ್ಲೇ?'

'ನಾನು ನಿರ್ದೇಶಕ. ನಾನು ಹೇಳಿದ್ದಾಗಬೇಕು.'

'ನಾನು ನಿರ್ಮಾಪಕ.'

'ನಾನೂ ನಿನ್ನ ಜತೆ ನಿರ್ಮಾಪಕ.'

'ನಾನು ನಟ ಜತೇಲಿ.'

'ನಾನು ನಟನೇ ಜತೇಲಿ. ಹಾಗೆ ನೋಡಿದ್ರೆ ನಾನು ನಿರ್ದೇಶಕ, ನಿರ್ಮಾಪಕ, ನಟನೂ ಹೌದು. ನೀನು ಬರೀ ನಟ-ನಿರ್ಮಾಪಕ. ನಾನು ಹೇಳಿದ್ದೇ ಲಾಸ್ಟ್ ವರ್ಡ್.'

'ಸರಿ'


ನಕ್ಕು ಬಗೆಹರಿಯಿತು. ನಟ ರಾಜಕಾರಣಿ ನನ್ನನ್ನು, ನಟ ಪತ್ರಕರ್ತ ಶಂಕರ ಗುಂಡಿಕ್ಕಿ ಕೊಂದ.

ಸೆನ್ಸಾರ್‌ನವರೂ ಅಸ್ತು ಎಂದರು. ಅದು ನಡೆದ ಮಾರನೇ ದಿನವೇ ಇಂದಿರಾ ಗಾಂಧಿಯವರ ಹತ್ಯೆ ನಡೆಯಿತು! ಹೀಗಾಗಬೇಕೆ, ಉಂಟೇ? ಸೆನ್ಸಾರ್‌ನವರು ಕರೆಸಿ 'ರಿಕ್ವೆಸ್ಟ್' ಮಾಡಿದರು. 'ಚಿತ್ರದ ಕೊನೆ ಬದಲಾಯಿಸಿ.'


'ಚಿತ್ರದ ಕೊನೆ ಬದಲಾಯಿಸಬಹುದು. ನಿಜಜೀವನದಲ್ಲಿ ಆಗೋದನ್ನು ತಡೆಯೋಕ್ಕಾಗಲ್ಲ, ತಪ್ಪಿಸೋಕ್ಕಾಗಲ್ಲ' ಶಂಕರ ವಾದಿಸಿದ. ನಂತರ ಬಹಳ persuasion ನಂತರ ಒಪ್ಪಿಕೊಂಡ. ಚಿತ್ರದ ಕೊನೆಯ ದೃಶ್ಯವನ್ನು ರೀ ಶೂಟ್ ಮಾಡಲಾಯಿತು! ಇಂದಿರಾ ಗಾಂಧಿಯವರ ಅಂತಿಮ ಯಾತ್ರೆಯನ್ನು ನಾವಿಬ್ಬರೂ ಟಿವಿಯಲ್ಲಿ ವೀಕ್ಷಿಸಿದೆವು. ಕೊನೆಯಲ್ಲಿ ಅಗ್ನಿಸ್ಪರ್ಶ ಮಾಡುವಾಗ ನಾನೆದ್ದು ನಿಂತುಕೊಂಡೆ.

'No don't don't stand up' ಶಂಕರ್ ಶೌಟ್ ಮಾಡಿದ. ನಾನು ಕೂತೆ. 'ರಾಜಕೀಯದ ಸೋಂಕಿಲ್ಲದ' ಶಂಕರ ರಾಜಕೀಯ ನಿಲುವೊಂದನ್ನು ತಳೆದಿದ್ದ. ಚಿತ್ರದ ಹೆಸರು 'ಆಕ್ಸಿಡೆಂಟ್' ಆಗಿದ್ದುದು ಒಂದು ಕಾಕತಾಳೀಯ ಅನ್ನಬೇಕು. ■





ನ್ಯಾಷನಲ್ ಹೆರಾಲ್ಡ್ ಎಂಬ ನೊಣ ತಿಂದ ಕೇಸು



ಕಳೆದ ಕೆಲ ವಾರಗಳಿಂದ ದಿನ ಪತ್ರಿಕೆಗಳಲ್ಲಿ, ಟಿವಿ ಚಾನೆಲ್‌ಗಳಲ್ಲಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಮೇಲೆ ಬಿದ್ದಿರುವ ಒಂದು ಕೇಸಿನ ಬಗ್ಗೆ ಸುದ್ದಿಯೋ ಸುದ್ದಿ. ಟಿವಿ ಚಾನೆಲ್‌ಗಳಲ್ಲಂತೂ ಪ್ಯಾನೆಲ್ ಚರ್ಚೆಗಳು ನಡೆಯುತ್ತಿವೆ. ಜನಪ್ರಿಯ ಇಂಗ್ಲಿಷ್ ಸುದ್ದಿ ವಾಹಿನಿ 'ಟೈಮ್ಸ್ ನೌ'ನಲ್ಲಿ ಅರ್ನಾಬ್ ಗೋಸ್ವಾಮಿ "ದಿಸ್ ನೇಷನ್ ವಾಂಟ್ಸ್ ಟು ನೋ ಮೋರ್" ಅಂತಾ ಅರಚಿದ್ದೇ ಅರಚಿದ್ದು.

ಮಾಧ್ಯಮಗಳ ವಿಷಯ ಹೀಗಾದರೆ ಅತ್ತ ಸಂಸತ್ ಅಧಿವೇಶನದಲ್ಲೂ ಇದೇ ಪ್ರಮುಖ ಸುದ್ದಿ. ಮೋದಿ ಸರ್ಕಾರ ದ್ವೇಷದ ರಾಜಕಾರಣ ಮಾಡುತ್ತಿದೆ, ವಿನಾಕಾರಣ ಸೋನಿಯಾ ಮತ್ತು ರಾಹುಲ್ ಅವರ ಮೇಲೆ ಕೇಸು ದಾಖಲಿಸಿ ಕಿರುಕುಳ ಕೊಡುತ್ತಿದ್ದಾರೆ ಎಂದು ಕಾಂಗ್ರೆಸ್ಸಿಗರು ಗದ್ದಲವೆಬ್ಬಿಸಿದ್ದಾರೆ. ಆಡಳಿತ ಪಕ್ಷದ ವತಿಯಿಂದ ಅರುಣ್ ಜೈಟ್ಲಿ ಮುಂತಾದವರು ಮಾತಾಡಿ 'ತಮಗೆ ಅಂಥಾ ಯಾವ ಉದ್ದೇಶವೂ ಇಲ್ಲವೆಂದೂ, ತಾವು ಸಾಚಾ ರಾಜಕಾರಣಿಗಳೆಂದೂ' ಬಡಬಡಿಸುತ್ತಿದ್ದಾರೆ. 'ಈ ದೇಶದ ಕಾನೂನಿಗಿಂತ ಯಾರೂ ದೊಡ್ಡವರಲ್ಲ; ಯಾರು ಎಷ್ಟೇ ದೊಡ್ಡವರಿರಲಿ ಕಾನೂನು ತನ್ನ ಕೆಲಸ ಮಾಡಿಯೇ ತೀರುತ್ತದೆ' ಎಂದು ಬಿಜೆಪಿಯ ಮತ್ತೊಬ್ಬ ವಕ್ತಾರರು ಸಾಕ್ಷಾತ್ ಸತ್ಯಹರಿಶ್ಚಂದ್ರನಂತೆ ಸೋಗು ಹಾಕಿದ್ದಾರೆ.

ಮತ್ತೊಂದು ಕಡೆ ಈ ಪ್ರಕರಣದ ಫಿರ್ಯಾದಿಯಾದ ಬಿಜೆಪಿ ಮುಖಂಡ ಸುಬ್ರಮಣ್ಯ ಸ್ವಾಮಿ "ಜಯಲಲಿತಾರನ್ನು ಜೈಲಿಗೆ ಕಳಿಸಿದ್ದಾಯಿತು; ಈಗ ಸೋನಿಯಾ ಗಾಂಧಿಯನ್ನು ಜೈಲಿಗೆ ಕಳಿಸುವುದೇ ನನ್ನ ಗುರಿ" ಅಂತ ವಿಶ್ವಾಮಿತ್ರನಂತೆ ಶಪಥ ಮಾಡುತ್ತಿದ್ದಾರೆ. ಹೀಗೆ ರಂಗುರಂಗಿನ ಸುದ್ದಿಗಳಿಂದಾಗಿ ಸಾರ್ವಜನಿಕರಲ್ಲಿ ಕುತೂಹಲ ಮತ್ತು ಒಂದಷ್ಟು ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಈ ಒಟ್ಟಾರೆ ಪ್ರಕರಣದ ಮೂಲ 'ನ್ಯಾಷನಲ್ ಹೆರಾಲ್ಡ್' ಎಂಬ ಹೆಸರಿನ ಪತ್ರಿಕೆಯ ಮಾಲಿಕತ್ವದ ವರ್ಗಾವಣೆಗೆ ಸಂಬಂಧಿಸಿದ್ದು. ಆದ್ದರಿಂದಲೇ ಇದು ನ್ಯಾಷನಲ್ ಹೆರಾಲ್ಡ್ ಕೇಸು ಎಂದೇ ಕುಖ್ಯಾತ.

ಏನಿದು ನ್ಯಾಷನಲ್ ಹೆರಾಲ್ಡ್ ಪ್ರಕರಣ?

2012ರ ನವೆಂಬರ್ 1ರಂದು ಬಿಜೆಪಿ ನಾಯಕ ಸುಬ್ರಮಣ್ಯ ಸ್ವಾಮಿ ಕಾಂಗ್ರೆಸ್ ನಾಯಕರ ವಿರುದ್ಧ ವಂಚನೆ ಮತ್ತು ನಂಬಿಕೆ ದ್ರೋಹದ ಪ್ರಕರಣ ದಾಖಲಿಸಿದರು. 'ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್' ಎಂಬ ಮಾಧ್ಯಮ ಸಂಸ್ಥೆಯ ಆಸ್ತಿಪಾಸ್ತಿಗಳನ್ನು ಕಾಂಗ್ರೆಸ್ ನಾಯಕರದೇ ಒಡೆತನವುಳ್ಳ 'ಯಂಗ್ ಇಂಡಿಯನ್ ಲಿಮಿಟೆಡ್' ಕಂಪನಿ ಸ್ವಾಧೀನಪಡಿಸಿಕೊಂಡಿದ್ದು, ಈ ವ್ಯವಹಾರದಲ್ಲಿ 2000 ಕೋಟಿಗಳಿಗೂ ಅಧಿಕ ಮೊತ್ತದ ಅವ್ಯವಹಾರ ನಡೆದಿದೆ ಎಂಬುದು ಸ್ವಾಮಿ ಆರೋಪದ ಸಾರಾಂಶ. ಈ ಕೇಸಿನಲ್ಲಿ ಆರೋಪಿತರಲ್ಲಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಕಾಂಗ್ರೆಸ್‌ನ ಖಜಾಂಚಿ ಮೋತಿಲಾಲ್ ವೋರಾ, ಪ್ರಧಾನ ಕಾರ್ಯದರ್ಶಿ ಆಸ್ಕರ್ ಫರ್ನಾಂಡಿಸ್ ಇವರುಗಳಲ್ಲದೆ ಜರ್ನಲಿಸ್ಟ್ ಸುಮನ್ ದುಬೆ ಮತ್ತು ತಂತ್ರಜ್ಞ ಸ್ಯಾಮ್ ಪಿತ್ರೋಡಾ ಕೂಡ ಇದ್ದಾರೆ.

ಅಸೋಸಿಯೇಟೆಡ್ ಜರ್ನಲ್ಸ್‌ಗೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಯಿಂದ 90.25 ಕೋಟಿ ಸಾಲ ನೀಡಲಾಗಿದೆ. ಅದೂ ಕೂಡ ಶೂನ್ಯ ಬಡ್ಡಿದರದಲ್ಲಿ. ಈ ಸಾಲದ ಮೊತ್ತವನ್ನು 2011ರ ಫೆಬ್ರವರಿ 26ರಂದು ಯಂಗ್ ಇಂಡಿಯನ್ ಕಂಪನಿಗೆ ವರ್ಗಾಯಿಸಲಾಗಿದೆ. ಆದಾಯ ತೆರಿಗೆ ಕಾನೂನು ಮತ್ತು ಜನಪ್ರತಿನಿಧಿ ಕಾಯಿದೆಗಳ ಪ್ರಕಾರ ಯಾವುದೇ ರಾಜಕೀಯ ಪಕ್ಷ ಯಾವುದೇ ವಾಣಿಜ್ಯ ಸಂಸ್ಥೆಗೆ ಸಾಲ ನೀಡುವುದು ಕಾನೂನುಬಾಹಿರ ಎಂಬುದು ಸುಬ್ರಮಣ್ಯಸ್ವಾಮಿಯ ಆರೋಪ.

ಒಂದು ವಿಷಯವನ್ನು ಗಮನಿಸೋಣ. ಇತ್ತೀಚೆಗಷ್ಟೆ ಹುಟ್ಟಿಕೊಂಡ ಈ ಯಂಗ್ ಇಂಡಿಯಾ ಕಂಪನಿಯಲ್ಲಿ ಯಂಗ್ ರಾಹುಲ್ ಗಾಂಧಿಗೆ 38% ಪಾಲು, ಈಗ ಓಲ್ಡ್ ಆಗಿರುವ ಸೋನಿಯಾಗೆ 38% ಪಾಲು ಹೀಗೆ ಒಟ್ಟು 76% ನಷ್ಟು ಸಿಂಹ ಪಾಲು ಅಮ್ಮ-ಮಗ ಜೋಡಿಯದು. ಉಳಿದ 24% ಪಾಲಿನಲ್ಲಿ ಉಳಿದ ಆರೋಪಿತರೆಲ್ಲರದೂ ಅಲ್ಪ ಸ್ವಲ್ಪ ಸರಿಪಾಲು.

ಈ ಕೇಸು ದಾಖಲಾದ ಮೇಲೆ ಆರೋಪಿತರು ಆತಿ ಗಣ್ಯರಾದ್ದರಿಂದ ಅವರಿಗೆ ಸಮನ್ಸ್ ಜಾರಿ ಮಾಡುವ ಮುಂಚೆ ಫಿರ್ಯಾದಿ ಸುಬ್ರಮಣ್ಯ ಸ್ವಾಮಿ ಪರ ಸಾಕ್ಷಿಗಳ ವಿಚಾರಣೆ ನಡೆಸಿ, ನಂತರ ವಾದ - ಪ್ರತಿವಾದಗಳನ್ನು ಆಲಿಸಿ, ಕಳೆದ ಆಗಸ್ಟ್ 7ರಂದು ಕೋರ್ಟಿಗೆ ಖುದ್ದು ಹಾಜರಾಗುವಂತೆ ಮೇಲಿನ ಆರೂ ಜನರಿಗೆ ವಿಚಾರಣಾ ನ್ಯಾಯಾಲಯ ಸಮನ್ಸ್ ಜಾರಿ ಮಾಡಿತ್ತು. ಆದರೆ ಇದನ್ನು ಪ್ರಶ್ನಿಸಿ ಕಾಂಗ್ರೆಸ್ಸಿಗರು ಹೈಕೋರ್ಟ್ ಮೊರೆ ಹೋದ ಪರಿಣಾಮ ಈ ಸಮನ್ಸ್‌ಗೆ ತಡೆಯಾಜ್ಞೆ ಸಿಕ್ಕಿತ್ತು. ಪ್ರಾಥಮಿಕ ವಿಚಾರಣೆಯ ನಂತರ, ಈ ಪ್ರಕರಣದಲ್ಲಿ ಮೇಲುನೋಟಕ್ಕೆ ಹಲವು ಕಾನೂನು ಉಲ್ಲಂಘನೆ ಕಂಡುಬರುತ್ತಿರುವುದರಿಂದ ವಿಚಾರಣಾ ನ್ಯಾಯಾಲಯ ಸಮನ್ಸ್ ಜಾರಿ ಮಾಡಿ ವಿಚಾರಣೆ ಕೈಗೊಳ್ಳಬಹುದು ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಅದರಂತೆ ದೆಹಲಿಯ ವಿಚಾರಣಾ ನ್ಯಾಯಾಲಯ ಡಿಸೆಂಬರ್ 19ರಂದು ನ್ಯಾಯಾಲಯದ ಮುಂದೆ ಖುದ್ದು ಹಾಜರಾಗುವಂತೆ ಈ ಆರು ಮಂದಿಗೆ ನೋಟಿಸ್ ಜಾರಿ ಮಾಡಿದೆ. ಈ ಆದೇಶವನ್ನು ಪ್ರಶ್ನಿಸಿ ಕಾಂಗ್ರೆಸ್ ಪಕ್ಷ ಸುಪ್ರೀಂಕೋರ್ಟಿಗೆ ಹೋಗುವ ಪ್ರಯತ್ನದಲ್ಲಿದೆ.

ಈ ಆರೋಪಕ್ಕೆ ಕಾಂಗ್ರೆಸ್‌ನವರ ಪ್ರತಿಕ್ರಿಯೆ ಏನು? ಕಾಂಗ್ರೆಸ್ ವಕ್ತಾರ ರಣದೀಪ್ ಸುರ್ಜೆವಾಲ ಹೇಳಿದ್ದಿಷ್ಟು: "ಬಿಜೆಪಿ ಪಕ್ಷದ ದುರಾಡಳಿತದ ವಿರುದ್ಧ ನಾವು ಹೋರಾಡುತ್ತಿದ್ದೇವೆ. ಆದ್ದರಿಂದ ನಮ್ಮ ಬಾಯಿ ಮುಚ್ಚಿಸಲು ನಮ್ಮ ನಾಯಕತ್ವವನ್ನು ಗುರಿ ಮಾಡಿ ಇಂಥಾ ಕಟ್ಟುಕತೆಯ ಪ್ರಕರಣದಲ್ಲಿ ಸಿಕ್ಕಿಸಲು ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಕಾಂಗ್ರೆಸ್‌ನ ಇತಿಹಾಸದಲ್ಲಿ ಇಂಥಾ ಎಷ್ಟೋ ಕೇಸುಗಳನ್ನು ನಾವು ಕಂಡಿದ್ದೇವೆ. ಇಂಥವಕ್ಕೆಲ್ಲಾ ನಾವು ಜಗ್ಗುವುದಿಲ್ಲ. ಬಿಜೆಪಿ ವಿರುದ್ಧದ ಹೋರಾಟ ಮುಂದುವರೆಸುತ್ತೇವೆ."

ಕಾಂಗ್ರೆಸ್ ಪಕ್ಷ ಮತ್ತಷ್ಟು ರಸವತ್ತಾದ ವಿವರಣೆಗಳನ್ನೂ ಕೊಟ್ಟಿದೆ. ಅವರ ಪ್ರಕಾರ ಯಂಗ್ ಇಂಡಿಯನ್ ಎಂಬುದು ಲಾಭದ ಉದ್ದೇಶವಿಲ್ಲದ, ಸಾರ್ವಜನಿಕ ಹಿತಾಸಕ್ತಿಗಾಗಿ ಹುಟ್ಟಿಕೊಂಡ ಕಂಪನಿಯಾಗಿರುವುದರಿಂದ, ಈ ಕಂಪನಿಗೆ ಪಕ್ಷದಿಂದ ಸಾಲ ಕೊಟ್ಟಿದ್ದು ಕಾನೂನು ಸಮ್ಮತವಾಗಿಯೇ ಇದೆಯೆಂಬುದು ಅವರ ವಿವರಣೆ.

ಶಹಬ್ಬಾಸ್! ಎರಡು ಕಂಪನಿಗಳ ನಡುವಿನ ಈ ಡೀಲಿಂಗ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ!!? ಸರಿ, ವಾದಕ್ಕೋಸ್ಕರ ನಾವು ಹಾಗೆಂದೇ ಒಪ್ಪಿಕೊಳ್ಳೋಣ. ಆದರೆ ಈ 'ದೇಶ ಸೇವೆ' ಮಾಡಲು ಹುಟ್ಟಿಕೊಂಡ ಯಂಗ್ ಇಂಡಿಯನ್ ಕಂಪನಿಯ ಶೇಕಡ 76ರಷ್ಟು ಪಾಲು ಅಮ್ಮ ಮತ್ತು ಮಗನ ಕೈಯಲ್ಲೇ ಯಾಕಿರಬೇಕು? ಸಾ[illegible] ಸೇವೆಯೇ ಉದ್ದೇಶವಾಗಿದ್ದ ಪಕ್ಷದಲ್ಲಿ ಇದನ್ನು [illegible] ಖಾಸಗಿ ಕಂಪನಿಯಾಗಿ ನೋಂದಣಿ ಮಾಡಿಸುವ[illegible] ಒಂದು ಸಾರ್ವಜನಿಕ ಟ್ರಸ್ಟ್ ಆಗಿ ನೊ[illegible] ಮಾಡಬಹುದಿತ್ತಲ್ಲವೆ? ಇತ್ಯಾದಿ ಪ್ರಶ್ನೆಗಳು ಹುಟ್ಟಿಕೊ[illegible] ಸದ್ಯಕ್ಕೆ ಕಾಂಗ್ರೆಸ್ ಪಕ್ಷ ಈ ಪ್ರಶ್ನೆಗಳಿಗೆ ಉತ್ತರಿಸ[illegible] ತೆಗೆದುಕೊಳ್ಳಲಾರದು.

ಸುಬ್ರಮಣ್ಯ ಸ್ವಾಮಿಯ ಆರೋಪದ ಪ್ರಕಾರ ದೆ[illegible] ಹೆರಾಲ್ಡ್ ಹೌಸ್ ಮತ್ತಿತರ ಕಡೆ ಬೆಲೆಬಾಳುವ ಆಸ್[illegible] ಅವುಗಳ ಮೌಲ್ಯ ಸುಮಾರು 2000 ಕೋಟ[illegible] ಅಧಿಕ. ಇಷ್ಟು ಭಾರೀ ಮೊತ್ತದ ಆಸ್ತಿಪಾಸ್[illegible] ಹೊಂದಿರುವ ಅಸೋಸಿಯೇಟೆಡ್ ಜರ್ನಲ್ಸ್ ಕಂಪ[illegible] ಕೇವಲ 50 ಲಕ್ಷಕ್ಕೆ ಯಂಗ್ ಇಂಡಿಯನ್ [illegible] ಕೊಂಡಿದೆ. ಈ ಮೂಲಕ ಅಸೋಸಿಯೇಟೆಡ್ ಜ[illegible] ಕಂಪನಿಯ ಇತರ ಪೇರುದಾರರಿಗೆ ಅನ್ಯಾಯವಾಗಿ[illegible] ಯಂಗ್ ಇಂಡಿಯನ್ ಕಂಪನಿಯಲ್ಲಿ ಸೋನಿ[illegible] ರಾಹುಲ್‌ಗಳದೇ ಸಿಂಹಪಾಲಾಗಿದ್ದು ಆಸ್ತಿ ಕಬ[illegible] ಹುನ್ನಾರ ಇದರಲ್ಲಿದೆ ಎಂಬುದು ಪ್ರಮುಖ ಆ[illegible]

ಈ ಆರೋಪದಲ್ಲಿ ಹುರುಳಿದೆಯೆಂ[illegible] ಮೇಲುನೋಟಕ್ಕೆ ಎದ್ದು ಕಾಣುತ್ತದೆ. ಆದರೆ ನಾವು ಕಂಡುಕೊಳ್ಳಬೇಕಾದ ಬಹಳ ಪ್ರಮುಖ ಪ್ರಶ್ನೆಗ[illegible] ಈ ಅಸೋಸಿಯೇಟೆಡ್ ಜರ್ನಲ್ಸ್ ಕಂಪನಿ ಯಾ[illegible] ಅದರ ಹಿನ್ನೆಲೆ ಏನು? ಎಂಬುದನ್ನು ಕೆದಕಿದರೆ ಇತಿ[illegible] ಕೆಲವು ಕುತೂಹಲಕಾರಿ ಸತ್ಯಗಳು ಹೊರಬೀ[illegible] ಆಶ್ಚರ್ಯಕರವಾದ ಸಂಗತಿಯೆಂದರೆ ಈ ನ್ಯಾಷನಲ್ [illegible] ಪತ್ರಿಕೆಯನ್ನು ಆರಂಭಿಸಿ, ಅದರ ಆರಂಭದ [illegible] ಆಗಿದ್ದವರು ಪಂಡಿತ್ ಜವಹರಲಾಲ್ ನೆಹರು [illegible] ಪತ್ರಿಕೆಯನ್ನು ನಡೆಸಲು ಅಸೋಸಿಯೇಟೆಡ್ ಜ[illegible] ಎಂಬ ಸಂಸ್ಥೆಯನ್ನು ಹುಟ್ಟುಹಾಕಿದ್ದೂ ಕೂಡ [illegible] ಹಾಗಿದ್ದರೆ ಸಮಸ್ಯೆ ಎಲ್ಲಿಂದ ಬಂತು? ಮುತ್ತಾತನ [illegible] ಮೊಮ್ಮಗ ರಾಹುಲ್ ಗಾಂಧಿ ಈ ಪಾಟ[illegible] ತೆಗೆದುಕೊಳ್ಳಬೇಕೇ? ಎಂಬ ಪ್ರಶ್ನೆಗಳು ಮೂ[illegible] ಸಹಜ. (ಈ ಎಲ್ಲಾ ವಿವರಗಳಿಗೆ ಬಾಕ್ಸ್ ನೋಡಿ[illegible]

ಕೇಂದ್ರದ ಮತ್ತೊಂದು ದಾಳ[illegible]

ವಿಚಾರಣಾ ನ್ಯಾಯಾಲಯ ಸಮನ್ಸ್ [illegible] ಮಾಡುತ್ತಿದ್ದಂತೆ, ಮತ್ತೊಂದು ಕಡೆ ಜಾರಿ ನಿರ್ದೇಶ[illegible] (ಇ.ಡಿ) ಇದ್ದಕ್ಕಿದ್ದಂತೆ ನಿದ್ದೆಯಿಂದ ಎದ್ದಂತೆ ಎದ್ದು [illegible] ಈ ಪ್ರಕರಣದ ಬಗ್ಗೆ 'ಮನಿ ಲಾಂಡರಿಂಗ್ ಆಕ್ಟ್' ಅ[illegible] ತನಿಖೆ ಕೈಗೊಳ್ಳುವ ಮಾತುಗಳು ಜಾರಿ ನಿರ್ದೇಶನ[illegible] ಕಚೇರಿಯಿಂದ ಕೇಳಿಬರುತ್ತಿವೆ. ಇದೇ ಸುಬ್ರಮಣ್ಯ[illegible] ಇದೇ ನಿರ್ದೇಶನಾಲಯಕ್ಕೆ ಒಂದು ವರ್ಷದ [illegible] ದೂರು ಸಲ್ಲಿಸಿ ಪ್ರಕರಣದ ತನಿಖೆ ನಡೆಸಬೆ[illegible] ಕೋರಿದ್ದರು. ಆಗ ಕೆಲವು ತಾಂತ್ರಿಕ ಕಾರಣ[illegible]



ನ್ಯಾಷನಲ್ ಹೆರಾಲ್ಡ್ ಅಥವಾ ಪ್ರೈಡ್!!

ಈ ಪತ್ರಿಕೆಯ ಹೆಸರು ನ್ಯಾಷನಲ್ ಹೆರಾಲ್ಡ್ ಎಂದು. ಇದನ್ನು ರಾಷ್ಟ್ರೀಯ ವಾಣಿ ಎಂದು ತರ್ಜುಮೆ ಮಾಡಬಹುದು. ಭಾರತ ಉಪಖಂಡ ಬ್ರಿಟಿಷರ ಕೈಯಲ್ಲಿ ನಲುಗುತ್ತಿದ್ದ ಕಾಲದಲ್ಲಿ ಹುಟ್ಟಿಕೊಂಡ ಪತ್ರಿಕೆ ಇದು. 1938ರಲ್ಲಿ ಜವಹರಲಾಲ್ ನೆಹರು ಇದನ್ನು ಸ್ಥಾಪಿಸಿದರು. ಈ ಪತ್ರಿಕೆಯ ಧ್ಯೇಯ ವಾಕ್ಯ ಹೇಗಿತ್ತು ನೋಡಿ; "ಫ್ರೀಡಮ್ ಈಸ್ ಇನ್ ಪೆರಿಲ್, ಡಿಫೆಂಡ್ ಇಟ್ ವಿತ್ ಆಲ್ ಯುಅರ್ ಮೈಟ್" ಅಂದರೆ "ಸ್ವಾತಂತ್ರ್ಯ ನಶಿಸಿ ಹೋಗುತ್ತಿದೆ; ನಿಮ್ಮೆಲ್ಲಾ ಶಕ್ತಿ ಸಾಮರ್ಥ್ಯ ಬಳಸಿ ಅದನ್ನು ಸಂರಕ್ಷಿಸಿ" ಎಂದು.

ಈ ಪತ್ರಿಕೆ ಇಂಗ್ಲಿಷ್‌ನಲ್ಲಿ ಪ್ರಕಟವಾಗುತ್ತಿತ್ತು. ಇದರ ಸೋದರ ಪತ್ರಿಕೆಗಳಾಗಿ ಹಿಂದಿಯಲ್ಲಿ 'ನವಜೀವನ್' ಮತ್ತು ಉರ್ದುವಿನಲ್ಲಿ 'ಕ್ವಾಮಿ ಅವಾಜ್' ಪತ್ರಿಕೆಗಳು ಕೂಡ ಇದ್ದವು. ದೆಹಲಿ ಮತ್ತು ಲಕ್ನೋ ನಗರಗಳು ಈ ಪತ್ರಿಕೆಗಳ ಪ್ರಮುಖ ಕೇಂದ್ರಗಳಾಗಿದ್ದವು. ಆರಂಭಿಕ ಕಾಲದಲ್ಲಿ ನೆಹರು ಅವರೇ ಈ ಪತ್ರಿಕೆಯ ಸಂಪಾದಕರಾಗಿದ್ದು ನಂತರದ ದಿನಗಳಲ್ಲಿ ಕೆ.ರಾಮರಾವ್ ಅವರು ಸಂಪಾದಕರಾದರು.

1942ರ ಆಗಸ್ಟ್‌ನಲ್ಲಿ ಕಾಂಗ್ರೆಸ್ ಪಕ್ಷ "ಬ್ರಿಟಿಷರೇ ಭಾರತ ಬಿಟ್ಟು ತೊಲಗಿ" ಎಂಬ ಐತಿಹಾಸಿಕ ನಿರ್ಣಯ ಕೈಗೊಂಡು, ಈ ಬಗ್ಗೆ ಪತ್ರಿಕೆಯಲ್ಲಿ ಸುದ್ದಿ ಪ್ರಕಟವಾದ ನಂತರ ಬ್ರಿಟಿಷ್ ಸರ್ಕಾರ ಈ ಪತ್ರಿಕೆಯ ಮೇಲೆ ಮುಗಿಬಿತ್ತು, ಪರಿಣಾಮವಾಗಿ 1942ರಿಂದ 1945ರವರೆಗೆ ಪತ್ರಿಕೆ ಬಂದ್ ಆಗಿತ್ತು.

1954ರಲ್ಲಿ ಬಿಕಿನಿ ಅಟೋಲ್ ಎಂಬಲ್ಲಿ ಅಮೆರಿಕ ನಡೆಸಿದ ಭಯಾನಕ ನ್ಯೂಕ್ಲಿಯರ್ ಬಾಂಬ್ ಪರೀಕ್ಷೆಯ ಪರಿಣಾಮವಾಗಿ ಉಂಟಾದ ರೇಡಿಯೇಷನ್‌ನಿಂದಾಗಿ ಅಪಾರವಾದ ಸಾವುನೋವು ಉಂಟಾಗಿತ್ತು. ಆ ಸಂದರ್ಭದಲ್ಲಿ 'ದ ಡೆತ್ ಡೀಲರ್' (ಸಾವಿನ ವ್ಯಾಪಾರಿ) ಎಂಬ ತಲೆಬರಹದ ನೆಹರೂ ಅವರ ಲೇಖನ ಅಂತರರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗಿತ್ತು. ಇದೇ ಮಾತನ್ನು ಕಳೆದ ಲೋಕಸಭಾ ಚುನಾವಣೆ ವೇಳೆಯಲ್ಲಿ ನರೇಂದ್ರ ಮೋದಿಯನ್ನುದ್ದೇಶಿಸಿ ಸೋನಿಯಾ ಗಾಂಧಿ ಹೇಳಬೇಕಾಗಿ ಬಂದದ್ದು ಇತಿ[illegible] ವ್ಯಂಗ್ಯವಷ್ಟೆ.


1950 ದಶಕದಲ್ಲಿ ಈ ಪತ್ರಿಕೆ ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿದ್ದ ಸಂದ[illegible] ನೆಹರೂ ಅವರ ಅಳಿಯ, ಇಂದಿರಾ ಗಾಂಧಿಯ ಪತಿ ಉದ್ಯಮಿ ಫಿರೋಜ್ [illegible] ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರ್ ಆದರು. ನಂತರ ಸ್ವಲ್ಪ ಮಟ್ಟಿನ ಚೇತರಿಕೆ ಕಂಡು[illegible] ನಂತರ ತುರ್ತು ಪರಿಸ್ಥಿತಿಯ ನಂತರ ಇಂದಿರಾ ಗಾಂಧಿ ಮಣ್ಣುಮುಕ್ಕಿ ಅ[illegible] ಕಳೆದುಕೊಂಡಾಗ ಮತ್ತೊಮ್ಮೆ ಕೆಲಕಾಲ ಪ್ರಕಟಣೆ ನಿಂತುಹೋಗಿತ್ತು.

ನಂತರ ರಾಜೀವ್ ಗಾಂಧಿ ಪ್ರಧಾನಿಯಾದ ನಂತರ 1986ರಲ್ಲಿ ಅದಕ್ಕೆ [illegible] ಆರ್ಥಿಕ ಚೈತನ್ಯ ಒದಗಿಸಲಾಯ್ತು. ಆದರೂ ಪರಿಸ್ಥಿತಿ ಸುಧಾರಿಸಲಿಲ್ಲ. 19[illegible] ಲಕ್ನೋ ವಿಭಾಗವನ್ನು ಮುಚ್ಚುವಂತೆ ಆದೇಶಿಸಿದ ಕೋರ್ಟು ಅದರ ಆಸ್ತಿ[illegible] ಪಾಸ್ತಿಗಳನ್ನು ಹರಾಜು ಹಾಕಿ ಸಾಲವಸೂಲಾತಿಗೆ ಆದೇಶಿಸಿತ್ತು. ಹಾಗೂ [illegible] ಕಾಲೆಳೆದುಕೊಂಡು ಬಂದ ಪತ್ರಿಕೆ ಅಂತಿಮವಾಗಿ 2008ರಲ್ಲಿ ಪ್ರಕಟಣೆ[illegible] ಸ್ಥಗಿತಗೊಳಿಸಿತ್ತು.

ಹೀಗೆ ಕಾಂಗ್ರೆಸ್ ಪಕ್ಷದ ಇತಿಹಾಸದಂತೆಯೇ ಈ ಪತ್ರಿಕೆಯ ಇತಿಹಾ[illegible] ಸ್ವಾತಂತ್ರ ಹೋರಾಟದ ಸೊಗಡಿದೆ. ಕೌಟುಂಬಿಕ ಹಿಡಿತದ ರಾಜಕೀಯವೂ[illegible] ಯಾವುದೇ ದೀರ್ಘಕಾಲೀನ ಯೋಜನೆಯಿಲ್ಲದ ಸೋಂಭೇರಿತನ, ಕೀಳುಮಟ್ಟದ [illegible] ಎಲ್ಲವೂ ಮೇಳೈಸಿದೆ.

ಪರಿಣಾಮವಾಗಿ ಕಾಂಗ್ರೆಸ್‌ನ ಅಧೋಗತಿಯೂ, ನ್ಯಾಷನಲ್ ಹೆರಾಲ್ಡ್ [illegible] ಐತಿಹಾಸಿಕ ಪತ್ರಿಕೆಯ ಅಧೋಗತಿಯೂ ಸಾಗಿಬಂದಿದೆ. ತಮ್ಮ ಮುತ್ತಾತ ಆರ[illegible] ಇಂಥದೊಂದು ಚಾರಿತ್ರಿಕ ಪತ್ರಿಕೆಯನ್ನು ತಮ್ಮ ಕುಟುಂಬದ ಕಬ್ಜಾ ಮಾಡಿಕೆ[illegible] ಹೋಗಿ ಗಾಂಧಿ ಕುಟುಂಬ ಗಾಳಕ್ಕೆ ಸಿಕ್ಕ ಮೀನಿನಂತಾಗಿದೆ.

ಛೀ! ಛೀ!! ಹೀಗಾಗಬಾರದಿತ್ತು.



...ಬಂದೊಡ್ಡಿ ಸದರಿ ಕೇಸಿನ ಫೈಲನ್ನು ಜಾರಿ ...ರ್ದೇಶನಾಲಯ ಕ್ಲೋಸ್ ಮಾಡಿತ್ತು ಎಂಬುದೂ ಕೂಡ . ಹೀಗಿರುವಾಗ ಇದ್ದಕ್ಕಿದ್ದಂತೆ ಜಾರಿ ನಿರ್ದೇಶನಾಲಯ ...ರೆಯಂದೇ ಜ್ಞಾನೋದಯವಾಗಲು ...ಣವೇನಿರಬಹುದು?

ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಹಾಗೂ ...ರ ಬೆಂಬಲಿಗರು ಸಂಸತ್ತಿನ ಒಳಗೂ ಹಾಗೂ ಹೊರಗೂ, ... ಪ್ರಕರಣ ಮೋದಿ ಸರ್ಕಾರದ ರಾಜಕೀಯ ದ್ವೇಷದ ...ು ಎಂದು ಬಾಯಿಬಡಿದುಕೊಳ್ಳುತ್ತಿದ್ದಾರೆ. ಇದರಲ್ಲಿ ...ಂಶವಿದೆಯೆಂದು ಅರ್ಥಮಾಡಿಕೊಳ್ಳಲು ರಾಜಕೀಯ ...ಡಿತ್ಯವೋ, ಕಾನೂನು ಪಾಂಡಿತ್ಯವೋ ಬೇಕಾಗುವುದಿಲ್ಲ, ... ಕಾಮನ್ ಸೆನ್ಸ್ ಅನ್ವಯಿಸಿದರೆ ಇದರ ಹಿಂದಿನ ...ಜಕೀಯ ನಿಚ್ಚಳವಾಗುತ್ತದೆ.

ಒಟ್ಟಾರೆ ಈ ಪ್ರಕರಣದ ವಿವರಗಳನ್ನು ನೋಡಿದರೆ ...ಬ್ರಮಣ್ಯಸ್ವಾಮಿ ಮತ್ತು ಕಾಂಗ್ರೆಸ್ ಪಕ್ಷಗಳು ಪರಸ್ಪರ ...ಡುತ್ತಿರುವ ಆರೋಪಗಳೆರಡೂ ಅಪ್ಪಟ ಸತ್ಯ. ಇದು ...ದು ವಿಚಿತ್ರವೆನಿಸಿದರೂ ಸತ್ಯ. ಯಂಗ್ ಇಂಡಿಯನ್ ...ನಲ್ಲಿ ಭಾರೀ ಪ್ರಮಾಣದ ಆಸ್ತಿಯನ್ನು ಗಾಂಧಿ ಕುಟುಂಬ ... ಕಬ್ಜಾಗೆ ತೆಗೆದುಕೊಂಡಿದ್ದೂ ಸತ್ಯ. ಅದೇರೀತಿ ...ಅಧಿಕಾರಾರೂಢ ಮೋದಿ ಪಕ್ಷ ವಿರೋಧ ಪಕ್ಷದ ನಾಯಕತ್ವದ ...ಲೆ ದಾಳಿ ಮಾಡಿ ರಾಜಕೀಯ ಸೇಡು ...ಸಿಕೊಳ್ಳುತ್ತಿರುವುದೂ ಸತ್ಯ. ಯಾಕೆಂದರೆ ಮೋದಿ ... ಅಧಿಕಾರಕ್ಕೆ ಬಂದ ಈ ಒಂದೂವರೆ ವರ್ಷದಲ್ಲಿ ...ಷ್ಟಾಚಾರದ ಬಗ್ಗೆಯಾಗಲಿ, ಕಪ್ಪುಹಣದ ಬಗ್ಗೆಯಾಗಲಿ, ...ಕ ಅವ್ಯವಹಾರಗಳ ಬಗ್ಗೆಯಾಗಲಿ, ಕಾಳಸಂತೆಕೋರರ ...ಯಾಗಲಿ ಒಂದೇ ಒಂದು ಗಟ್ಟಿ ಕ್ರಮವನ್ನೂ ...ಮುಕೊಂಡಿಲ್ಲ, ಅಂಥಾ ಕ್ರಮಗಳೇನಿದ್ದರೂ ಪೇಪರ್, ... ಸುದ್ದಿಗಳಿಗೆ ಮಾತ್ರ ಸೀಮಿತ.

ವಾಸ್ತವದಲ್ಲಿ, ಮೋದಿ ಸರ್ಕಾರ ಬಂದ ಮೇಲೆ ...ಸಂತೆಕೋರರು, ಕಪ್ಪುಹಣದ ಖದೀಮರಿಗೆ ಆನೆ ಬಲ ...ಬಂತಾಗಿದೆ. ಅಗತ್ಯವಸ್ತುಗಳನ್ನು ಯದ್ವಾ ತದ್ವಾ ಏರಿಸಿ ...ರನ್ನು ಲೂಟಿ ಹೊಡೆಯುತ್ತಿರುವುದು ಇದರ ...ಣಾಮವೇ.

ಇತ್ತ ಸುಬ್ರಮಣ್ಯಸ್ವಾಮಿ ಸೋನಿಯಾ ಗಾಂಧಿಯನ್ನು ...ಗೆ ಕಳಿಸಿಯೇ ತೀರುತ್ತೇನೆ ಎಂದು ಹೇಳಿಕೊಂಡು ...ಡುತ್ತಿದ್ದ ಸಂದರ್ಭದಲ್ಲೇ, ಜಯಲಲಿತಾಗೆ ಜಾಮೀನು ...ತ್ತು, ಈ ಜಯಲಲಿತಾ ಕೇಸನ್ನು ನಡೆಸಿದ್ದೂ ಕೂಡ ... ಸುಬ್ರಮಣ್ಯಸ್ವಾಮಿಯೇ. ತಮ್ಮ ಗೆಳತಿಗೆ ಜಾಮೀನು ...ದ ಸಂಭ್ರಮದಲ್ಲಿ ಮಾನ್ಯ ಪ್ರಧಾನಿ ಮೋದಿಯವರು ...ಾದಿಂದಲೇ ಶುಭಾಶಯ ಹೇಳಿದ್ದರು ಎಂಬುದೊಂದು ...ಾಸ. ಈ ವಿಷಯದಲ್ಲಿ ಸುಬ್ರಮಣ್ಯಸ್ವಾಮಿಯದು ... ಮೌನ. ಈ ಜಯಲಲಿತಾ ಜಾಮೀನು ಮತ್ತು ...ದಿಯ ಶುಭಾಶಯಗಳ ಬಗ್ಗೆ ನಾನಾರೀತಿಯ ...ಕೀಯ ಗುಲ್ಲುಗಳು ಚಲಾವಣೆಯಲ್ಲಿವೆ. ಆ ವಿವರಗಳು ... ಅಪ್ರಸ್ತುತ.

ಇದು ಬಿಜೆಪಿ ಭ್ರಷ್ಟಾಚಾರ ವಿರೋಧದ ಒಳಹೂರಣ ...ನ್ನು ಕಾಂಗ್ರೆಸ್‌ನ ಸಂಗತಿಗೆ ಬರೋಣ. ಕೆಲ ವಾರಗಳ ...ಷ್ಟೆ ಬಿಹಾರ ಚುನಾವಣೆಯಲ್ಲಿ ತಮ್ಮ ಮೈತ್ರಿಕೂಟದ ...ವು ಹಾಗೂ ನರೇಂದ್ರ ಮೋದಿಯ ತವರಾದ ...ರಾತ್‌ನಲ್ಲಿ ಇತ್ತೀಚೆಗೆ ನಡೆದ ಸ್ಥಳೀಯ ಸಂಸ್ಥೆಗಳ ...ನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಚೇತರಿಸಿಕೊಂಡ ಶುಭ ...ಗಳ ಹಿನ್ನೆಲೆಯಲ್ಲಿ ಬೀಗುತ್ತಿದ್ದ ಕಾಂಗ್ರೆಸ್‌ಗೆ ನ್ಯಾಷನಲ್ ...ಲ್ಡ್ ಪ್ರಕರಣ ಸಿಡಿಲಿನಂತೆ ಬಡಿದು, ಅವರ ಉತ್ಸಾಹ ...ವಾಗಿದೆ.

...ಹಾಗಿದ್ದರೂ ಈ ಕೇಸಿನಿಂದ ಕಾಂಗ್ರೆಸ್ ಪಕ್ಷಕ್ಕೆ ಒಂದಷ್ಟು ...ಪಯೋಗವೇ ಆಗಿದೆ ಎನ್ನಬಹುದೇನೋ? ಯಾಕೆಂದರೆ, ...ಗೆಲುವುಗಳ ಸಂಭ್ರಮದಲ್ಲಿ ಕಾಂಗ್ರೆಸ್‌ನ ಜಡ್ಡುಗಟ್ಟಿದ ...ರು ಇನ್ನು ತಮಗಾರು ಸಾಟಿಯೆಂಬಂತೆ ಎದೆಯುಬ್ಬಿಸಿ ...ಡುವುದು ಮಾಮೂಲಿ. ಹೀಗಿರುವಾಗ ಆಗೊಂದು ...ಂದು ಅವಮಾನಕಾರಿ ಪೆಟ್ಟು ಬೀಳುತ್ತಿದ್ದರೆ, ...ವಾದರೂ ತಲೆತಗ್ಗಿಸಿ, ಒಂದಿಷ್ಟಾದರೂ ಕೆಲಸ ...ಡುವುದು ಅವರಿಗೆ ಅನಿವಾರ್ಯವಾಗಲಿದೆ. ದೇಶದ ...ಷ್ಟಿಯಿಂದ ಇದೊಂಥರಾ ಒಳ್ಳೇದೇ ಅನ್ನಿ. ಇದು ...ತೆ ಈ ಕೇಸಿನ ಉಪ ಉತ್ಪನ್ನ ಎನ್ನಬಹುದು. ಈ ... ಕಾಂಗ್ರೆಸ್ ಪಕ್ಷದ ಇಂದಿನ ದುಸ್ಥಿತಿಗೆ ಕನ್ನಡಿ ...ಡಿಕೆಯೋ, ಮೋದಿ ನೇತೃತ್ವದ ಬಿಜೆಪಿಯ ದುಷ್ಟ ...ಗೆ ಒಂದು ಉತ್ತಮ ಉದಾಹರಣೆ ಕೂಡ ಆಗಿದೆ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಸಹಿಷ್ಣುತೆಗಾಗಿ ಧರ್ಮವನ್ನು ಆಚರಿಸಿ, ವಿಜ್ಞಾನವನ್ನು ವಿನಿಯೋಗಿಸಿ ವಿಶ್ವಮಾನವರಾಗಿ

ಧರ್ಮವೆಂಬುದು ಮೂಢನಂಬಿಕೆಯ ಮೇಲೆ ನಿಂತ ಆಚಾರವಾದರೆ, ವಿಜ್ಞಾನವೆಂಬುದು ಜೀವನಕ್ಕೆ ಸಿಗುವ ವೈಚಾರಿಕ ಉಪಯೋಗ. ಅಮೆರಿಕಾದ ಬಾಹ್ಯಾಕಾಶ ವಿಜ್ಞಾನ ಕೇಂದ್ರವು (NASA) ಯಾವುದೇ ಪೂಜೆ ಪುನಸ್ಕಾರಗಳಿಲ್ಲದೆ ಉತ್ತಮ ಸಂಶೋಧನೆಯಲ್ಲಿ ತೊಡಗಿ, ಪ್ರತಿಯೊಂದು ಹಂತದಲ್ಲೂ ಮೈಲುಗಲ್ಲುಗಳನ್ನು ಸಾಧಿಸಿದ್ದಾರೆ. ಆದರೆ ನಮ್ಮ ಭಾರತೀಯ ಬಾಹ್ಯಾಕಾಶ ವಿಜ್ಞಾನ ಸಂಸ್ಥೆಯು ಪ್ರಗತಿ ನಡೆಸಿದರೂ ಸಹ ಆಧುನಿಕ ಯುಗದಲ್ಲಿಯು ಪ್ರತೀಸಲ ತನ್ನ ಉಪಗ್ರಹಗಳ ಉಡ್ಡಯನದ ಮುನ್ನ ತಿರುಪತಿಯ ವೆಂಕಟೇಶ್ವರನಿಗೆ ಪೂಜೆ ಸಲ್ಲಿಸಿ, ತದನಂತರ ಉಡಾವಣೆ ಮಾಡುವರು. ಇಂತಹ ಮೌಢ್ಯ ಮನೋಭಾವವಿರುವವರು ನಿಜವಾದ ವಿಜ್ಞಾನವನ್ನು ಸಾರಲು ಸಾಧ್ಯವೇ? ಭಾರತ ರತ್ನ ಪುರಸ್ಕೃತ ವಿಜ್ಞಾನಿ ಸಿ.ಎನ್.ಆರ್.ರಾವ್ ಅಂತಹ ಮೇಧಾವಿಗಳು ಇವರ ಮೂಢನಂಬಿಕೆಗಳ ವಿರುದ್ಧ ಎಷ್ಟೇ ತಿಳಿವಳಿಕೆ ನೀಡಿದರೂ ಇವರ ಬದಲಾವಣೆ ಅಸಾಧ್ಯ ಕಾರಣ ಇವರು ವೈದಿಕ ಧರ್ಮದ ಅನುಯಾಯಿಗಳು.

ಆಧುನಿಕ ವಿಜ್ಞಾನದ ಉದಯ ತೊಟ್ಟಿಲಲ್ಲಿ ಇರುವಾಗಲೆ ಕೆಲವು ಮಹಾನ್ ವಿಜ್ಞಾನಿಗಳ ಆವಿಷ್ಕಾರಗಳು ಧರ್ಮಗ್ರಂಥಗಳ ಪ್ರತಿಪಾದನೆಗಳ ಬಗ್ಗೆ ಪ್ರಶ್ನೆಗಳನ್ನು ಮಾಡಿದವು. ಇದರಿಂದ ವಿಜ್ಞಾನಿಗಳು ಚಕ್ರವರ್ತಿಗಳ, ಪ್ರವಾದಿಗಳ ಹಾಗೂ ಅವರ ಅನುಯಾಯಿಗಳಿಂದ ಶಿಕ್ಷೆಗೆ ಒಳಗಾದರು. ಏನೇ ಆದರು ತರ್ಕವಿಲ್ಲದ ಅವೈಜ್ಞಾನಿಕ ವಾದಕ್ಕೆ ಅಂತ್ಯ ಹಾಡಿ, ಆಧುನಿಕತೆಯ ವೈಜ್ಞಾನಿಕ ನಾಗರಿಕತೆಗೆ ಸ್ವಾಗತ ಮಾಡಿದರು. ಅದರ ಪರಿಣಾಮವೇ ಇಂದಿನ ನಮ್ಮ ವೈಜ್ಞಾನಿಕ ಪ್ರಗತಿ ಮತ್ತು ವೈಚಾರಿಕ ಜೀವನ.

ಆಧುನಿಕತೆಯ ಪ್ರಾರಂಭದಲ್ಲಿ, ಆರಿಸ್ಟಾಟಲ್ ತನ್ನ ಆವಿಷ್ಕಾರಗಳ ಮೂಲಕ, ಜೀವಿಗಳ ಉಗಮ, ವಿಕಸನದ ಬಗ್ಗೆ ಪ್ರತಿಪಾದನೆಯನ್ನು ಮಂಡಿಸಿ, ಭೂಮಿಯ ಮೇಲಿನ ಸಕಲ ಜೀವರಾಶಿಗಳ ಉಗಮವು, ಸಾಗರದಲ್ಲಿ ನೆಲೆಸಿರುವ ಜಲಚರಗಳ ವಿಕಸನದಿಂದ ಪ್ರಾರಂಭವಾಗಿದೆ ಎಂಬುದನ್ನು ತಿಳಿಸಿದರು. ಮಂಗನಿಂದ ಮಾನವ ಎಂಬ ಸಿದ್ಧಾಂತಗಳಿಗೆ ಪುಷ್ಟಿ ಸಿಕ್ಕಿ, ಈ ಸಿದ್ಧಾಂತಗಳನ್ನು ವೈಜ್ಞಾನಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಒಪ್ಪಿಕೊಂಡರೂ ಸಹ ಇವತ್ತು ಧರ್ಮ ಪ್ರತಿಪಾದಿಸಿದ ದೇವರೆ ಸೃಷ್ಟಿಕರ್ತ ಎಂಬ ಭಾವನೆ ನಮ್ಮಲ್ಲಿ ಬೇರೂರಿದೆ. ಇದೇ ನಮ್ಮ ಮಕ್ಕಳಿಗೂ ಮನೆಯ ಪಾಠವಾಗಿದೆ, ಇನ್ನು ಶಾಲೆಯ ಪಾಠ ಎಷ್ಟು ತಲೆ ಹೊಕ್ಕುವುದು? ಹೊಸ ಚಿಂತನೆಗಳು ಎಲ್ಲಿ ಮೂಡುವುದು?



ಅದೇರೀತಿ ಸೌರಮಂಡಲದಲ್ಲಿ ಭೂಮಿಯೆ ಕೇಂದ್ರಬಿಂದು ಎಂಬ ಬೈಬಲ್‌ನ ಸಿದ್ಧಾಂತವನ್ನು ಪ್ರಶ್ನಿಸಿದ ಕೊಪರ್ನಿಕಸ್ ಮತ್ತು ಗೆಲಿಲಿಯೊ ಸೂರ್ಯನೆ ಸೌರಮಂಡಲದ ಕೇಂದ್ರ ಎಂಬುದನ್ನು ಪ್ರತಿಪಾದಿಸಿದರು. ಇದರ ಪರಿಣಾಮ ಧರ್ಮಗುರುಗಳ ಶಿಕ್ಷೆಗೆ ಗುರಿಯಾಗಿ ಜೈಲು ಸೇರಿದರು. ತಮ್ಮ ಪ್ರತಿಪಾದನೆ ತಪ್ಪು ಎಂದು ಒಪ್ಪಿಕೊಳ್ಳಲು ಒತ್ತಾಯಕ್ಕೊಳಗಾಗಿ ಮುಂದೆ ಪ್ರಾಣವನ್ನು ತೆತ್ತರು. ಆದರೆ ಕಾಲವು ಸತ್ಯವನ್ನು ತುಂಬಾ ದಿನ ಬಚ್ಚಿಡಲು ಸಾಧ್ಯವಿಲ್ಲವೆಂಬಂತೆ ವಿಜ್ಞಾನಿಗಳ ಮಾತು ವಾಸ್ತವದಲ್ಲಿ ಇಂದು ನಿಜವಾಯಿತೆ ಹೊರತು ಧರ್ಮಗ್ರಂಥಗಳ ಅವೈಜ್ಞಾನಿಕ ನಿಲುವಲ್ಲ.

ಸಾಕ್ರೆಟಿಸ್, ಪ್ಲೇಟೊ, ಕಾರ್ಲ್‌ಮಾರ್ಕ್ಸ್ ಮತ್ತು ಬುದ್ಧ ಮುಂತಾದ ತತ್ವಜ್ಞಾನಿಗಳು ತಮ್ಮ ಕಾಲಾವಧಿಯಲ್ಲಿ ವೈದಿಕ ಧರ್ಮದ ನ್ಯೂನತೆಗಳನ್ನು ಅರಿತು ತಮ್ಮ ತರ್ಕಶಾಸ್ತ್ರದ ಮೂಲಕ ಪ್ರಜಾಪ್ರಭುತ್ವ ಅರಿವನ್ನು ಜನರಲ್ಲಿ ಮೂಡಿಸಲು ಪ್ರಯತ್ನಿಸಿದರು. ಧರ್ಮ ಪ್ರತಿಪಾದಕರು ಮತ್ತು ಅದರ ಒಡಕುಗಳ ಬಗ್ಗೆ ಜನರಿಗೆ ತಿಳಿವಳಿಕೆ ನೀಡಿ ಎಚ್ಚರಿಸಿ ತಮ್ಮ ವಾದಗಳನ್ನು ಮಂಡಿಸಿದರು. ಆ ಕಾಲದ ಬಲ ಪಂಥಿಯರು ಈ ನಿಲುವುಗಳನ್ನು ಒಪ್ಪದೆ ತಮ್ಮ ರಾಜ, ಪ್ರಜೆ ಎಂಬ ಕುರುಡು ನೀತಿಗಳನ್ನು ಕಾಯ್ದುಕೊಳ್ಳಲು, ಎಲ್ಲಿ ತಮ್ಮ ಸಿಂಹಾಸನಗಳಿಗೆ ಕುತ್ತು ಬರುವುದೊ ಎಂಬ ಭಯದಿಂದ ಎಡಪಂಥೀಯ ತತ್ವಜ್ಞಾನಿಗಳನ್ನು ಶಿಕ್ಷಿಸಿ ಅವಮಾನಿಸಿದರು.

18ನೇ ಶತಮಾನದಲ್ಲಿ ವಿಜ್ಞಾನದಲ್ಲಿ ನಡೆದ ಆವಿಷ್ಕಾರಗಳು ಭೂಮಿಯ ಮೇಲೆ ಜೀವಸಂಕುಲದ ಉಗಮದ ಬಗ್ಗೆ ಪ್ರಶ್ನೆ ಮಾಡಿದರು ಮತ್ತು ಆ ನಿಟ್ಟಿನಲ್ಲಿ ತುಂಬಾ ವಿಚಾರವಾದಿಗಳು, ವಿಜ್ಞಾನಿಗಳು ತಮ್ಮ ಸಿದ್ಧಾಂತಗಳನ್ನು ಮಂಡಿಸಿದರು. ಈ ಪ್ರತಿಪಾದನೆಗಳು ಕೇವಲ ಧರ್ಮಗ್ರಂಥಗಳ ಹಾಗೆ ಬಾಯಿಮಾತಲ್ಲಿ ಹೇಳಿ ಒಪ್ಪಿಸುವ ಕಲ್ಪನೆಯ ವಿಷಯಗಳಾಗಿರಲಿಲ್ಲ, ವಿಜ್ಞಾನಿಗಳ ಪ್ರತಿಪಾದನೆ ತಮ್ಮ ವೈಯಕ್ತಿಕ ಸಂಶೋಧನೆಗಳ ಆಧಾರದ ಮೇಲೆ ಆಧಾರವಾಗಿದ್ದವು. ಭೂಮಿಯ ಮೇಲೆ ನೆಲೆಸಿರುವ ಸಕಲ ಜೀವರಾಶಿಗಳ ಉಗಮವು, 450 ಕೋಟಿ ವರ್ಷಗಳಿಂದ ಭೂಮಿಯ ಮೇಲೆ ನೆಲೆಸಿರುವ ಸೂಕ್ಷ್ಮಜೀವಿಗಳಿಂದ ಎಂಬ ವಾದ. ಈ ಸೂಕ್ಷ್ಮಜೀವಿಗಳು ರೂಪ ತಾಳಿದ್ದು ಪ್ರಪ್ರಥಮವಾಗಿ ಸಾಗರದಲ್ಲಿ ರೂಪಗೊಂಡ ಏಕಜೀವಕೋಶಗಳಿಂದ, ಇದಕ್ಕೂ ಮೊದಲು ಏಕಜೀವಕೋಶಗಳು ಸೃಷ್ಟಿ ಆದದ್ದು ಹೇಗೆ ಎಂಬ ಪ್ರಶ್ನೆಗೆ, ಉತ್ತರ ಆದಿಮ ಕಾಲದಲ್ಲಿ ಭೂಮಿಯ ಮೇಲೆ ನೆಲೆಸಿದಂತಹ ವಾತಾವರಣದ ಅತಿ ಹೆಚ್ಚು ತಾಪಮಾನ, ನೀರು, ವಿವಿಧ ರೀತಿಯ ಅನಿಲಗಳು ಜೊತೆಗೂಡಿ ಆದ ರಸಾಯನಿಕ ಕ್ರಿಯೆಗಳ ಫಲವೇ ಈ ಏಕಜೀವಕೋಶಗಳು. ಇದನ್ನು ನಾವು ಇಂದು **BIG BANG THEORY** ಎಂದು ಕರೆಯುತ್ತೇವೆ.

ಈ ನಿಟ್ಟಿನಲ್ಲಿ ವಿಜ್ಞಾನಿಗಳ ಹಲವು ಪ್ರಯೋಗಗಳು ನಡೆದಿವೆ. ಇತ್ತೀಚಿಗೆ ಸ್ಕಾಟ್‌ಲ್ಯಾಂಡ್‌ನಲ್ಲಿ 27 ಕಿ.ಮೀ ಉದ್ದದ ಸುರಂಗವನ್ನು ಕೊರೆದು ನಡೆಸಿದ **BIG BANG THEORY** ಪ್ರಯೋಗವು ಜೀವಕೋಶಗಳ ಉತ್ಪತ್ತಿಗೆ ಬೇಕಾದ ಕೆಲವು ಜೀವಾಣುಗಳು ಉತ್ಪತ್ತಿಯಾದದ್ದು ಕಂಡಿತು, ಆ ಮೂಲಕ ಸಿದ್ಧಾಂತಕ್ಕೆ ಪುಷ್ಟಿ ನೀಡಿದ್ದು ಸಾಬೀತಾಗಿದೆ. ಇಲ್ಲಿ ಪ್ರಶ್ನೆ ದೇವರು ಮತ್ತು ಅವರ ಸೃಷ್ಟಿಯ ಕಾರ್ಯಗಳು ಸೃಷ್ಟಿಗೆ ಹೇಗೆ ಕಾರಣವಾದವು ಮತ್ತು ಯಾವ ಧರ್ಮದ ದೇವರು ಸೃಷ್ಟಿಯ ಹೊಣೆಯನ್ನು ವಹಿಸಿದ್ದರು ಎಂಬುದು?

ನಮ್ಮ ವಿಜ್ಞಾನಿಗಳ ಪ್ರಕಾರ ಶೂನ್ಯದಿಂದ ಇಡೀ ಬ್ರಹ್ಮಾಂಡದ ಉಗಮವಾಗಿದ್ದು ಸುಮಾರು 1370 ಕೋಟಿ ವರ್ಷಗಳ ಹಿಂದೆ. ತದನಂತರ ಭುವಿಯ ಅವತಾರವಾಯಿತು ಮತ್ತು ಇದರ ಮೇಲೆ ನೆಲೆಸಿದ ಸೂಕ್ಷ್ಮಜೀವಿಗಳ ಉಗಮವು ಸರಿಸುಮಾರು 450 ಕೋಟಿ ವರ್ಷಗಳ ಹಿಂದೆಯಿಂದಲು ನೆಲೆಸಿದ್ದವು ಎಂಬುದು ವಿಜ್ಞಾನದ ನಿಲುವು. ಸೂಕ್ಷ್ಮಜೀವಿಗಳೆ ಎಲ್ಲಾ ಪ್ರಾಣಿಗಳ, ಸಸಿಗಳ ವಿಕಸನಕ್ಕೆ ಮೂಲ ಎಂಬುದು ಪ್ರಯೋಗಗಳಿಂದ ಸಾಬೀತಾಗಿದೆ. ಆದರೆ ನಮ್ಮ ಧರ್ಮಗ್ರಂಥಗಳು ರಚನೆಯಾಗಿದ್ದು ಸುಮಾರು 5000 ವರ್ಷಗಳ ಹಿಂದೆ ಎಂಬುದು ಹಿಂದೂ ಧರ್ಮದ ಪ್ರತಿಪಾದನೆ. ಕ್ರೈಸ್ತರ ಪ್ರಕಾರ ಜುಡಾಯಿಸಂ ಮುಂತಾದ ಧರ್ಮಗಳು ಮೊದಲು ನೆಲೆಸಿದ್ದವು. ಅವರು ಗುರುತಿಸಿಕೊಂಡದ್ದು ಕೇವಲ ಕ್ರಿ.ಪೂ 1ನೇ ಶತಮಾನದಲ್ಲಿ, ಅದು ಕ್ರಿಸ್ತನ ಆಗಮನದ ನಂತರ. ಅದೇ ರೀತಿ ಇಸ್ಲಾಂ ಮತವು ಸಹ ಗುರ್ತಿಸಿಕೊಂಡಿದ್ದು ಕ್ರಿ.ಶ 740 ರಲ್ಲೆ, ಅದು ಮೊಹಮ್ಮದ ಪೈಗಂಬರ್‌ರ ಜ್ಞಾನೋದಯದ ನಂತರ. ಇಲ್ಲಿ ಧರ್ಮದ ಕಲ್ಪನೆಗಳು ಉದಯಿಸಿದ್ದು ಕೇವಲ ಕ್ರಿ.ಪೂ 2000-3000 ವರ್ಷಗಳ ಹಿಂದೆ. ಅದೇ ಕಾಲಘಟ್ಟದಲ್ಲಿ ದೇವರುಗಳು ಅವತರಿಸಿ ಧರ್ಮ ಸಂಸ್ಥಾಪನೆ ಮಾಡಿದರು ಮತ್ತು ಈ ಅವತಾರ ಪುರುಷರ ಜನ್ಮ ಅನ್ಯಾಯವನ್ನು ಸರಿಪಡಿಸಲೇ ಆಗಿತ್ತು ಎಂಬುದು ಹಲವರ ನಿಲುವು. ಆದರೆ ಕ್ರಿ.ಶ 1 ಶತಮಾನದಿಂದ ಭೂಮಿಯ ಮೇಲೆ ಅನ್ಯಾಯ, ಹಿಂಸೆ ನಡೆಯುತ್ತಿಲ್ಲವೆ? ಯಾಕೆ ದೇವರ ಅವತಾರಗಳು ಭುವಿಯ ಮೇಲೆ ಕಾಣದಾಗಿವೆ?

ಮೊದಲಿಗೆ ತುಂಬಾ ಪ್ರಾಚೀನ ಎಂದು ಹೇಳಿಕೊಳ್ಳುವ ಕ್ರಿಶ್ಚಿಯನ್ ಧರ್ಮದ ಧರ್ಮಗ್ರಂಥದ ಅನುಸಾರ ದೇವರು ಇರುವಿಕೆಯನ್ನು ಪ್ರತಿಪಾದಿಸಿ ಸೃಷ್ಟಿಯ ಬಗ್ಗೆ ವಿವರಿಸುವ ಪ್ರಕಾರ ದೇವರು ಒಂದು ವಾರದ ಗಳಿಗೆಯಲ್ಲಿ ಅಂದರೆ ಮೊದಲು ಭೂಮಿ, ಆಕಾಶ, ನೀರು, ಹಗಲುರಾತ್ರಿಗಳನ್ನು ಸೃಷ್ಟಿ ಮಾಡಿ ತದನಂತರ ಮಾನವನನ್ನು ಮಣ್ಣಿನಿಂದ ರೂಪಿಸಿ ಪ್ರಾಣ ನೀಡಿ ಸೃಷ್ಟಿಸಿದ. ನಂತರ ಪ್ರಾಣಿಪಕ್ಷಿಗಳು ಜೀವ ಪಡೆದವು. ಹೀಗೆ ಇಡೀ ವಿಶ್ವವನ್ನು ದೇವರೆ ಸೃಷ್ಟಿ ಮಾಡಿ ಪರಿಪಾಲನೆಯ ಜವಾಬ್ದಾರಿಯನ್ನು ಹೊಂದಿದ್ದಾನೆ. ಈ ರೀತಿ ಮಂಥನೆಗಳು ಮುಂದುವರಿಯುತ್ತ ಹೇಳಿದ್ದು ಭೂಮಿಯ ಸುತ್ತ ಉಳಿದ ಗ್ರಹಗಳು ಪರಿಭ್ರಮಣೆ ಮಾಡುತ್ತಿವೆ. ಹಾಗಾಗಿ ಸೌರಮಂಡಲದಲ್ಲಿ ಭೂಮಿಯೆ ಕೇಂದ್ರ ಬಿಂದು ಎಂದು ಪ್ರತಿಪಾದಿಸಿದ್ದವು. ಇದನ್ನೆ ಪ್ರಶ್ನಿಸಿದ ಎಲ್ಲಾ ಜನಾಂಗವು ಸಂಬದ್ಧವು ಇದನ್ನು ವಿರೋಧಿಸಿದ ಗೆಲಿಲಿಯೊ ಜೈಲು ಪಾಲಾದ.

ಮುಸ್ಲಿಂ ಧರ್ಮೀಯರೂ ಅಷ್ಟೆ ದೇವರ ಪ್ರಭಾವವಿಲ್ಲದೆ ಯಾವುದೇ ಮಾನವ ಜನ್ಮಿಸಲಾರ. ಸೃಷ್ಟಿಯು ದೇವರ ಕೃಪೆಯಿಂದ ಆಗಿದೆ. ದೇವರೇ ಸಕಲಜೀವಿಗಳ ಮತ್ತು ಭೂಮಿಯ ಅಸ್ತಿತ್ವಕ್ಕೆ ಕಾರಣಕರ್ತ. ಸ್ವರ್ಗ, ನರಕಗಳ ಅಸ್ತಿತ್ವದ ಪ್ರತಿಪಾದನೆ ಸಹ ಮಾಡಿ ತೋರಿದರು.

ಅದೇರೀತಿ ಹಿಂದೂ ಧರ್ಮದ ಪ್ರಕಾರ ಸಕಲ ಜೀವಿಗಳಲ್ಲೂ, ವಸ್ತುಗಳಲ್ಲೂ, ದೇವರು ನೆಲೆಸಿದ್ದಾನೆ. ಇಲ್ಲಿ ನಡೆಯುವ ಎಲ್ಲಾ ಕರ್ಮಗಳಿಗೂ ದೇವರೇ ಕಾರಣಕರ್ತ. ವಿಪರ್ಯಾಸವೆಂದರೆ ಹಿಂದೂ ಧರ್ಮಕ್ಕೆ ಧರ್ಮ ಸಂಸ್ಥಾಪಕರೂ ಇಲ್ಲ ಮತ್ತು ಅದು ಧರ್ಮವೇ ಅಲ್ಲದಿರುವುದು. ಅದು ಕೇವಲ ಒಂದು ಸಂಸ್ಕೃತಿಯಾಗಿದೆ. ಕಾರಣ ಇಲ್ಲಿ ಪ್ರಾಚೀನ ಕಾಲದಲ್ಲಿ ನೆಲೆಸಿದ್ದ ಸಿಂಧೂ ನದಿಯ ತೀರದಲ್ಲಿನ ನಾಗರಿಕತೆಯು ಕಾಲಾಂತರದಲ್ಲಿ ಹಿಂದೂ ನಾಗರಿಕತೆಯಾಗಿ ಮಾರ್ಪಾಡಗಿದೆ. ಅದು ತದನಂತರ ಧರ್ಮವಾಗಿ ರೂಪುಗೊಂಡಿದೆ. ಇಲ್ಲಿ ಇದಕ್ಕೂ ಮುಂಚೆ ತಿಳಿದುಕೊಳ್ಳಬೇಕಾದ ಇನ್ನೊಂದು ವಿಷಯವೆಂದರೆ ಭಾರತದಲ್ಲಿ ಇಲ್ಲಿಯವರೆಗೂ ಸಿಕ್ಕಿರುವ ಸಾಕ್ಷಿ ಮತ್ತು ಆಧಾರಗಳ ಅನ್ವಯ ಹರಪ್ಪ ಮತ್ತು ಮಹೆಂಜೊದಾರೊ ನಾಗರಿಕತೆಗಳು ಹೇಳುವಂತೆ ಅಲ್ಲಿ ಬಿಂಬಿತವಾಗಿರುವುದು ಜೈನರ ತೀರ್ಥಂಕರರ ಚಿತ್ರಗಳು. ಅವರು ಆಚರಿಸುತ್ತಿದ್ದದ್ದು ಜೈನಧರ್ಮ ಎಂಬುದು ಸಾಬೀತಾಗಿದೆ. ಭಾರತದಲ್ಲಿ ರೂಪುಗೊಂಡ ಮೊದಲ ಮೂಲಧರ್ಮ ಜೈನಧರ್ಮ ಎಂಬುದು ಒಂದು ವಾದವಾಗಿದೆ. ಪುರಾವೆಗಳ ಪ್ರಕಾರ ಹಿಂದೂ ಧರ್ಮದ ವೇದಗಳು, ಧರ್ಮಗ್ರಂಥಗಳು ಉದಯಿಸಿದ್ದು ಕೇವಲ ಕ್ರಿ.ಪೂ 1500 ವರ್ಷಗಳ ಹಿಂದೆ. ರಾಮಾಯಣ ಮತ್ತು ಮಹಾಭಾರತ ಕೃತಿಗಳು ಕೇವಲ ಋಷಿಗಳಿಂದ ರೂಪಗೊಂಡ ಕೃತಿಗಳು ಎಂಬುದು ಒಂದು ವಾದ. ಆದರೂ ನಮ್ಮ ಹಿಂದೂವಾದಿಗಳಾದ ಸಾವರ್ಕರ್, ಬಾಲಗಂಗಾಧರ್ ತಿಲಕ್‌ರ ಪ್ರಕಾರ ಧರ್ಮಗ್ರಂಥಗಳು ಉದಯಿಸಿದ್ದು ಕ್ರಿ.ಪೂ 5000 ವರ್ಷಗಳ ಹಿಂದೆ. ಆದರೆ ಎಲ್ಲಿಯ ಭೂಮಿಯ ಉಗಮದ ಕಾಲ? ಎಲ್ಲಿ ಧರ್ಮಗಳ ಉಗಮದ ಕಾಲ? ತರ್ಕಬದ್ಧವಾಗಿ ಯೋಚಿಸಬೇಕಾಗಿದೆ. ವಿಜ್ಞಾನವೊ? ಕಲ್ಪನೆಯೇ ಗ್ರಂಥಗಳ ಆಧಾರವೊ? ನಿಮಗೆ ಬಿಟ್ಟದ್ದು.

ಭರತ ಭೂಮಿಯಲ್ಲಿ ಜನಸಿದ ಬುದ್ಧ ಧರ್ಮ ಮತ್ತು ಜೈನ ಧರ್ಮ ತಮ್ಮ ಅಹಿಂಸಾ ತತ್ವಗಳ ಮೂಲಕ ದೇವರ ಅಸ್ತಿತ್ವವನ್ನು ಪ್ರಶ್ನಿಸದೆ ಸಕಲ ಕಾರ್ಯಗಳಿಗೂ ಪ್ರಕೃತಿಯಲ್ಲಿ ಉತ್ತರವಿದೆ. ಮಾನವನ ಸಕಲ ಕರ್ಮಗಳಿಗೂ, ಏಳಿಗೆಗೂ ಅವನ ಮನಸ್ಸೇ ಕಾರಣ. ಆದುದರಿಂದ ಮನಸ್ಸಿನ ಮೇಲೆ ಹಿಡಿತ ಸಾಧಿಸಲು ತಿಳಿಸಿದರು. ಹಾಗೇ ಧರ್ಮದ ಆಯ್ಕೆ ಮತ್ತು ಆಚರಣೆ ಮನುಷ್ಯನ ವಿವೇಕಕ್ಕೆ ಬಿಟ್ಟರು. ಅದೇ ರೀತಿ ಎಲ್ಲಾ ಆಗುಹೋಗುಗಳಿಗು ನಿಸರ್ಗದಲ್ಲಿ ವೈಜ್ಞಾನಿಕ ಕಾರಣಗಳು ಇದೆ ಎಂಬ ನಿಲುವನ್ನು ಹೊಂದಿದ್ದ ಸಮಾನತೆಯನ್ನು ಸಾರಿದ, ಮಾನವನಿಗೆ ಮೊದಲ ಆದ್ಯತೆ, ಧರ್ಮಕ್ಕಲ್ಲ ಎಂಬ ಭಾವನೆ ಹೊಂದಿದ ಏಕೈಕ ಧರ್ಮ ಬೌದ್ಧ ಧರ್ಮ.

ಒಬ್ಬ ಪ್ರಜ್ಞಾವಂತ ವ್ಯಕ್ತಿ ಎಷ್ಟೇ ಬೆಳೆದರೂ ತನ್ನ ಸಾಮಾಜಿಕ ಜೀವನಕ್ಕಾಗಿ ಒಂದು ಧರ್ಮದ ಅನಿವಾರ್ಯತೆ ಇದೆ ಹಾಗೂ ಆಚರಣೆಗೆ ತನ್ನ ಸ್ವಂತ ಸಂಸ್ಕೃತಿಯ ಅವಶ್ಯಕತೆ ಇದೆ. ಇದೇ ಎಲ್ಲಾ ದೇಶಗಳ ಇದುವರೆಗಿನ ಇತಿಹಾಸ. ಆದರೆ ಮಾನವನ ಸಕಲ ಕಾರ್ಯಗಳಿಗೂ ದೈವದ ಮೇಲೆ ಜವಾಬ್ದಾರಿ ಹಾಕಿ ನಾವು ಮಾಡುವ ಎಲ್ಲಾ ಸರಿತಪ್ಪುಗಳ ಕೆಲಸಗಳಿಗೆ ದೇವರನ್ನು, ಧರ್ಮವನ್ನು ನಿಂದಿಸಿ ನಡೆದರೆ ವಿನಾಶವು ಖಂಡಿತ. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿಯುತ್ತ, ಅದೇ ಸಮಯದಲ್ಲಿ ಮನುಷ್ಯ ತನ್ನ ಜೀವಿತಾವಧಿಯಲ್ಲಿ ಸದಾ ಬುದ್ಧಮಯವಾಗಿ ಯಾವ ದಾರಿಯು ತನ್ನ ಮತ್ತು ಸಕಲ ಜೀವಿಗಳಿಗೂ ಒಳ್ಳೆಯದನ್ನ ಮಾಡುತ್ತದೊ ಅದೇ ಮಾರ್ಗವಾಗಿ ಜೀವಿಸಬೇಕು. ಸಹಕಾರದಿಂದ ನಡೆದು, ವೈಜ್ಞಾನಿಕ ವಿಚಾರಗಳನ್ನು ಅರಿತು, ಅವೈದಿಕ ಪ್ರಜ್ಞೆಯಿಂದ ಬಾಳಿ ಬದುಕಬೇಕು. ಧರ್ಮ, ಜಾತಿ, ದೇವರು ಎಂಬ ಗೋಡೆಗಳನ್ನು ಮುರಿದು ರವೀಂದ್ರನಾಥ್ ಠಾಗೂರ್ ಮತ್ತು ಕುವೆಂಪು ಅವರ ನುಡಿಯಂತೆ ಧರ್ಮ ಸಹಿಷ್ಣುತೆಯಿಂದ ಬಾಳುತ್ತ ವಿಶ್ವಮಾನವರಾಗಬೇಕು.

■ ರಮೇಶ ಪಿ.

ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ನೋಡ್ರೀ, ಸಹಿಷ್ಣುತೆ ಅಂದ್ರೆ ಇದು...




"ಛಿ ಅನಿಷ್ಟ, ಮುಟ್ಟಿಸ್ಕೊಳ್ಬೇಡ ದೂರ ನಿಂತ್ಕೊ" ಎನ್ನುವಷ್ಟು ಅಸಹಿಷ್ಣುತೆಯನ್ನು ಸಂಪ್ರದಾಯವನ್ನಾಗಿಸಿ, ಸಂಸ್ಕೃತಿಯನ್ನಾಗಿಸಿ, ಅದಕ್ಕೆ ಸಾಮಾಜಿಕ ಮಾನ್ಯತೆ ನೀಡಿ, ಅದನ್ನು ಈ ದೇಶದ ಸಾಮಾಜಿಕವಾದ ಬಹುದೊಡ್ಡ ಭಾಗವಾಗಿಸಿ, ಸಾವಿರಾರು ವರ್ಷದಿಂದ ಪೋಷಿಸಿಕೊಳ್ಳುತ್ತಾ ಬಂದ ಈ ಮೇರಾ ಭಾರತ್ ಮಹಾನ್ ಎಂದು ನಾವು ಗರ್ವ ಪಡುವ ಭಾರತಮಾತೆಯ ಎದೆಯಲ್ಲಿಯೇ 'ಅಸಹಿಷ್ಣುತೆ' ಇದೆ ಸ್ವಾಮಿ! ಅಸಹಿಷ್ಣುತೆಯ ವಿರುದ್ಧ ಧ್ವನಿ ಎತ್ತಿದವರೆ ಹೇಳಿ, ಈಗ ಏನ್ ಮಾಡ್ತೀರಾ ಆ ಭಾರತಮಾತೆಯನ್ನ? ಹಾ.....ಹೇಳಿ.

ಭಾರತದಲ್ಲಿ ಅಸಹಿಷ್ಣುತೆ ಇಲ್ಲಾ ಅನ್ನೋ ಮಹಾನುಭಾವರೆ ಕೇಳಿ, ಈ ದೇಶದ ಪ್ರತಿಯೊಬ್ಬ ಪ್ರಜೆಯಲ್ಲೂ ಅಸಹಿಷ್ಣುತೆ ಎಂಬುದು ಬೇರೆ ಬೇರೆ ರೂಪದಲ್ಲಿದ್ದೆ ಇದೆ. ಅದರ ಅತೀದೊಡ್ಡ ರೂಪ 'ಜಾತಿ' ಎಂಬ ಪದ. ಮೂಲ ಬುಡಕಟ್ಟುಗಳ ಜನರ ಸಂಸ್ಕೃತಿ ಕಸುಬುಗಳ ಆಧಾರದ ಮೇಲೆ ಆ ಜಾತಿ, ಈ ಜಾತಿ ಅಂತ ಹೆಸರಿಟ್ಟು, ಅದಕ್ಕೆ ನಮ್ಮ ಮನಸಲ್ಲಿ ಇಂತಿಷ್ಟೇ ಸಹಿಷ್ಣುತೆ, ಇಂತಿಷ್ಟು ಅಸಹಿಷ್ಣುತೆ, ಇಂತಿಷ್ಟೆ ಗೌರವ, ಇಂತಿಷ್ಟೆ ಸ್ವೀಕಾರ, ಇಂತಿಷ್ಟೇ ತಿರಸ್ಕಾರ ಅಂತ ಮೀಸಲುಗೊಳಿಸಿ ಮುದ್ರೆ ಹಾಕಿದ್ದೇವೆ. ಆವಾಗಿನಿಂದಿಡಿದು ಈವಾಗಿನ ತನಕ ಯಾವ ಯಾವ ಜಾತಿಗಳನ್ನು ಎಷ್ಟೆಷ್ಟು ಸಹಿಸಿಕೊಳ್ಳಬೇಕು? ಯಾವ ಯಾವ ಜಾತಿಗಳನ್ನು ಎಷ್ಟೆಷ್ಟು ಸಹಿಸಿಕೊಳ್ಳಬಾರದು? ಎಂಬ ಮನಸ್ಥಿತಿ ಜಾಗೃತೆಯಲ್ಲಿರುತ್ತೆ, ಅದು ಕೆಲವರಿಗೆ ಹೆಚ್ಚು ಕೆಲವರಿಗೆ ಕಡಿಮೆ, ಇನ್ನೂ ಕೆಲವರಿಗೆ ತೀರಾ ಕಡಿಮೆ ಇರುತ್ತದೆ. ಕಡಿಮೆ ಆಗಲು ಇರುವ ಕಾರಣದಲ್ಲಿ 'ಕಾನೂನು' ಎಂಬುದು ಮೊದಲ ಸ್ಥಾನ ಪಡೆಯುತ್ತದೆ. ನಂತರ ಶಿಕ್ಷಣ ಇತ್ಯಾದಿ, ಸಂವಿಧಾನ ಅಥವಾ ಕಾನೂನಿಂದ ನಮ್ಮ ದೇಶದ ಜನರ ಅಸಹಿಷ್ಣುತೆ ಮತ್ತು ಸಹಿಷ್ಣುತೆ ಎರಡೂ ಚೂರು ಪಾರು ಕಡಿಮೆಯಾಗಿವೆ ಅಥವಾ ಸ್ವಯಂ ನಿಯಂತ್ರಣಕ್ಕೊಳಪಟ್ಟಿದೆ. ಸ್ವಯಂ ನಿರ್ಧಾರಕ್ಕೆ ಬಿಟ್ಟಿದೆ. ಬೂದಿ ಮುಚ್ಚಿದ ಕೆಂಡದಂತೆ ಜೀವಂತವೂ ಇದೆ. ಕೆಲವೇ ಕೆಲಜನರಲ್ಲಿ ಈ 'ಜಾತಿ' ಎಂಬ ಅಸಹಿಷ್ಣುತೆ ನಾಶವಾಗಿದೆ (ನಾಶವಾಗಿದೆ ಎಂದು ನಂಬಿದ್ದೇನೆ). ಇನ್ನೂ ಬಹುತೇಕ ಭಾರತೀಯರು ರಕ್ತದಲ್ಲಿಯೇ ದಲಿತರ ಮೇಲೆ ಅಸಹಿಷ್ಣುತೆಯನ್ನು ಸಾವಿರಾರು ವರ್ಷದಿಂದ ಹೊತ್ತುಕೊಂಡೇ ಬಂದಿದ್ದಾರೆ. ಅದೇತರ ದಲಿತರು ಕೂಡ 'ಸಹಿಷ್ಣುತೆಯನ್ನು' ಅದೇ ಸಾವಿರಾರು ವರ್ಷದಿಂದ ಕಾಪಾಡಿಕೊಂಡು ಸಹಿಸಿಕೊಂಡೆ ಬಂದಿದ್ದಾರೆ.

ಈ ದೇಶದಲ್ಲಿ ಸಾವಿರಾರು ವರ್ಷದಿಂದ ತಮ್ಮ ಮೇಲಾಗುತ್ತಾ ಬಂದ ಶೋಷಣೆ ಹಲ್ಲೆ ಅತ್ಯಾಚಾರ (ಮಾನಸಿಕ ಭಾವನಾತ್ಮಕ ಅತ್ಯಾಚಾರ) ಮಾನಭಂಗ, ಸಾಮೂಹಿಕ ಬಹಿಷ್ಕಾರಗಳನ್ನ ಅಲ್ಲಿಂದ ಇಂದಿನವರೆಗೂ ಸಹಿಸಿಕೊಳ್ಳುತ್ತಾ ಈ ಸಾಮಾಜಿಕ ವ್ಯವಸ್ಥೆಯಲ್ಲಿ ಉಸಿರುಗಟ್ಟುವ ವಾತಾವರಣದಲ್ಲಿ ಬದುಕುತ್ತಾ ಇಂದಿಗೂ ನಾವು ಈ ದೇಶದ ಮೂಲನಿವಾಸಿಗಳೆಂದು, ಭಾರತೀಯರೆಂದು ಹೆಮ್ಮೆಯಿಂದ ಹೇಳುತ್ತಾ ಸಂವಿಧಾನದ ಆಶಯಗಳನ್ನ ಗೌರವಿಸ್ತಾ ಅದರ ಜೊತೆ ಭಾವನಾತ್ಮಕ ನಂಟು ಇಟ್ಕೊಂಡು ಪ್ರೀತಿಸುತ್ತಿರುವ ಭಾರತೀಯ ದಲಿತರೆ ನಿಮ್ಮ ಸಹನೆಗೆ ಸಹಿಷ್ಣುತೆಗೆ ನನ್ನ ಗೌರವ.

ಇಂತಹ ದೇಶದಲ್ಲಿ ಹುಟ್ಟಿ ಅಸ್ಪೃಶ್ಯತೆಗೆ ಖುದ್ದು ಬಲಿಯಾಗಿ ನೊಂದು, ಬೆಂದು, ಕುಂದಿ, ಓದಿ, ಬೆಳೆದು, ಬೇರೆ ದೇಶಗಳು 'ನಿಮಗೆ ಉನ್ನತ ಹುದ್ದೆಗಳನ್ನ ಅಧಿಕಾರಗಳನ್ನ ಕೊಡ್ತಿವಿ, ಇಲ್ಲೆ ನೆಲೆಸಿರಿ' ಅಂದಾಗ್ಲೂ ಭಾರತಕ್ಕೆ ಬಂದು ಕೋಟ್ಯಾಂತರ ಭಾರತೀಯರ ಹಕ್ಕು ರಕ್ಷಿಸಿ ಆತ್ಮ ಜೊತೆ ರಾಷ್ಟ್ರಾಭಿಮಾನ ತುಂಬಿ, "We are Indians first lastly" ಅಂತ ಹೇಳಿ, ನಿಮ್ಮ ಶವಸಂಸ್ಕಾರಕ್ಕೆ ಕೇವಲ 300 ರೂ ಆಸ್ತಿ ಗಳಿಸಿ ಬಿಟ್ಹೋದ ಡಾ.ಬಿ.ಆರ್.ಅಂಬೇಡ್ಕರವರೆ ತುಂಬಾ ಕಾಡುತ್ತಿ ಈಗೂ ನಿಮಗೆ, ನಿಮ್ಮ ತಾಳ್ಮೆಗೆ ನನ್ನ ನಮನ.



"ಅಂಬೇಡ್ಕರರು ಇಲ್ಲಿ ಎಷ್ಟೇ ಶೋಷಣೆಗೊಳಗಾದ್ರೂ ದೇಶ ಹೋಗಲಿಲ್ಲ" ಅಂತ ಉಪದೇಶ ಮಾಡೋಕೆ ಬಂದ ರಾಜನಾಥಸಿಂಗ "ಜಾತಿ ವ್ಯಸನಿ, ಜಾತಿದಾಸರ ವಂಚನೆ ಶೋಷಣೆ ಅಸ್ಪೃಶ್ಯತೆ ಸಹಿಸಿಕೊ ದೇಶ ಬಿಡಬೇಕೆ? ಅಥವಾ ಅಂತಹ ಅಮಾನವೀಯ, ಮೃಗೀಯ ತೋರುತ್ತಾ ಇತಿಹಾಸದುದ್ದಕ್ಕೂ ಸರ್ವಾಧಿಕಾರತ್ವ ಮೆರೆದ ಸಿದ್ಧಾಂ ದೇಶಬಿಡಬೇಕೆ? ಇನ್ನೂ ಅದೇ ಸಿದ್ಧಾಂತಗಳನ್ನೆ ದೇವರಂತೆ ಪೂಜಿಸ ಮಾನವ ವಿರೋಧಿ ಸಿದ್ಧಾಂತಗಳ ಫಲವಾಗಿ ಬಂದ ಅಧಿಕಾರ ಆಸ್ತಿ ಬೂಟುಗಳನ್ನ ಅನುಭವಿಸುತ್ತಾ ಬದುಕುತ್ತಿರುವ ಜನಗಳು ನಾಚಿಕೆ ಪ ದೇಶಬಿಡಬೇಕೆ? ಸ್ವಲ್ಪ ಸಮಯವಿದ್ರೆ ತಿಳಿಸುವಿರಾ?

ಭಾರತದಲ್ಲಿ ಸಹಿಷ್ಣುತೆ, ತಾಳ್ಮೆ ದಲಿತರ ಕೇರಿಯಲ್ಲಿದೆ. ರಕ್ತದಲ್ಲಿದೆ. ನ ಕ್ರೈಮ್ ರೆಕಾರ್ಡ್ ಬ್ಯೂರೊ(NCRB)ದಲ್ಲಿ ದಲಿತರ ಮೇಲಾದ, ಆಗ ಅಪರಾಧಗಳ ಪಟ್ಟಿ ತೆಗೆದುನೋಡಿ ಆಗ ಗೊತ್ತಾಗುತ್ತೆ ಶೋಷಿತರ ಶೋಷಕರ ಅಸಹಿಷ್ಣುತೆ.

ಈ ದೇಶದಲ್ಲಿನ ವಿಷಮಸ್ಥಿತಿ ಬಗ್ಗೆ ಮಾತಾಡಿದವರನ್ನ (ಅಮೀರ್ ಮುಂತಾದವರು) ವಿರೋಧಿಸುವವರು, ಮೊದಲು ಈ ವಿಷಮ 'ಅಸಹಿಷ್ ಶತಶತಮಾನಗಳಿಂದ ಸಹಿಸಿಕೊಂಡು ಬಂದ ಜನರನ್ನ ಗೌರವಿಸಿ, ಹ ರಾಷ್ಟ್ರಾಭಿಮಾನ ನಿಜಕ್ಕೂ ನಿಮ್ಮಲ್ಲಿದ್ರೆ ಸಂವಿಧಾನಕ್ಕೆ ಗೌರವಕೊಡಿ. ಕಾನೂನನ್ನೆ ಗೌರವಿಸದ ಜನಕ್ಕೆ ರಾಷ್ಟ್ರಾಭಿಮಾನದ ಬಗ್ಗೆ ಉಪದೇಶ ಯಾವುದೇ ನೈತಿಕತೆ ಇರುವುದಿಲ್ಲ, ಬೇಕಿದ್ದರೆ ಪರದೇಶದಲ್ಲಿ ಹೋಗಿ "ನಾನು ಪ್ರಧಾನಿ ಆಗುವ ಮುಂಚೆ ಭಾರತದ ಜನ ಭಾರತದಲ್ಲಿ ಹ ನಾಚಿಕೆಪಡ್ತಾ ಇದ್ರು" ಎಂದು ಹೇಳಿದವರನ್ನ ಮಹಾನ್ ದೇಶಭಕ್ತ ಕರ್ಕೊಳಿ, ತಲೆ ಮೇಲೆ ಹೊತ್ಕಳಿ, ಜೈಕಾರ ಹಾಕ್ಕೊಳಿ.

■ ಎನ್ ಪ್ರಶಾಂತ್ ದಾನಪ್ಪ, ರಾಯಚ

ನೋಡ್ರೀ ಈ ಸಹಿಷ್ಣುತೆ, ಅಸಹಿಷ್ಣುತೆ ಮತ್ತು ರಾಷ್ಟ್ರಾಭಿಮಾನ ಎಂಬ ಮೂರು ಪದಗಳಲ್ಲಿ ಮುಳುಗಿಹೋಗಿರುವ ಪ್ರಿಯ ಭಾರತೀಯರೆ ಕೇಳಿ, ದಲಿತರ ರಕ್ತದಲ್ಲಿದೆ ತಾಳ್ಮೆ, ಸಹಿಸಿಕೊಳ್ಳುವಿಕೆ ರಾಷ್ಟ್ರಾಭಿಮಾನ. ಆದ್ರೆ ಇದುವರೆಗೂ ನಿಮಗೆ ಅವರಲ್ಲಿ ಕಂಡಿದ್ದು ಮಾತ್ರ ಅವರ ಜಾತಿ, ಕುಲಕಸುಬು, ಆಹಾರ. ಅವರ ಸಹಿಷ್ಣುತೆ ನೋಡಬೇಕಾ? ಈಗೊ ಈಗಲೇ ಹೊರಡಿ ದಲಿತರ ಕೇರಿಗಳಿಗೆ. ಸಿಗುತ್ತೆ ನಿಮಗಲ್ಲಿ ಸಹಿಷ್ಣುತೆ, ನೋಡ್ಕಳಿ, ಸಾಧ್ಯ ಆದ್ರೆ ಕಲೀರಿ. ಅದೇತರ ಬೇಗ ಪಟ್ ಅಂತ ಕ್ಷಣಮಾತ್ರದಲ್ಲಿ ಅಸಹಿಷ್ಣುತೆ ಹೇಗಿರುತ್ತದೆ ಅಂತ ನೋಡಬೇಕಾ? ಹಾಗಿದ್ರೆ ದಲಿತರನ್ನ ನೆನೆಸ್ಕೊಳಿ, ಹೋಗ್ಲಿ ಅಂಬೇಡ್ಕರರನ್ನ ನೆನೆಸ್ಕೊಳಿ...ಹಾ.....! ಈಗ ಬಂತು ನೋಡಿ ಮನಸಲ್ಲಿ ಕೋಪ, ಹೊಟ್ಟೆಕಿಚ್ಚು ಅಸಹನೆ. ಇದೇ ಇದಕ್ಕೇ ಅಂತಾರೆ ರಿ 'ಅಸಹಿಷ್ಣುತೆ' ಅಂತ.

ಈಗ ಅಸಹಿಷ್ಣುತೆ ಇದೆ ದೇಶದಲ್ಲಿ, ಈಗ ಅದು ಜಾಸ್ತಿಯಾಗಿದೆ ಎನ್ನುವ ಜನಗಳೇ ಕೇಳಿ. ಇದು ಈಗಿನಿಂದ ಬಂದಿಲ್ಲ, ಆಕಾಶದಿಂದ ಉದುರಿಲ್ಲ, ಇದು ಭಾರತೀಯರ ರಕ್ತದಲ್ಲಿಯೇ ಇತ್ತು, ಇದೆ. ಆದ್ರೆ ಈಗ ಆ ಅಸಹಿಷ್ಣುತೆಯ ಹರಿಕಾರರ, ಅದರ ಆರಾಧಕರ ಕೈಯಲ್ಲಿ ರಾಜಕೀಯ ಅಧಿಕಾರ ಸಿಕ್ಕಿದ ಮೇಲೆ ಅದರ ಆರ್ಭಟ ರಕ್ತದಿಂದ, ಮನಸಿಂದ ಹೊರಬಿದ್ದು ಅಧಿಕೃತವಾಗಿ ಆ ಅಸಹಿಷ್ಣುತೆಯನ್ನ ಬಟಾಬಯಲಾಗಿ ಕಾರ್ಯದ ಮೂಲಕ ತೋರಿಸಿಕೊಳ್ತಾ ಇದ್ದಾರೆ ಅಷ್ಟೇ.

ವಾಸ್ತವ ಮತ್ತು ಸ್ಥಳ ಪುರಾಣಗಳು

"ಮಂಗಳೂರಿನ ಉಪನಗರ ಬಿಕರ್ನಕಟ್ಟೆಗೆ ಆ ಹೆಸರು ಬರಲು ಕಾರಣ ಟಿಪ್ಪು ಸುಲ್ತಾನ್. ಆತ ಅಲ್ಲಿ ಕ್ರೈಸ್ತರ ವಿರುದ್ಧ ನ್ಯಾಯಾಲಯ ನಡೆಸುತ್ತಿದ್ದು ಬೇಹುಗಾರಿಕೆ ಆರೋಪವಿದ್ದ ಕ್ರೈಸ್ತರಿಗೆ ಅಲ್ಲಿ ಭೀಕರ ಶಿಕ್ಷೆ ಕೊಡುತ್ತಿದ್ದುದರಿಂದ ಆ ಪ್ರದೇಶಕ್ಕೆ ಭೀಕರ-ನ್ಯಾಯ-ಕಟ್ಟೆ ಎಂಬ ಸಂಸ್ಕೃತ ಹೆಸರನ್ನು ಕ್ರೈಸ್ತರು ಕೊಟ್ಟರು" ಎಂದು ಆರ್‌ಎಸ್‌ಎಸ್‌ನ ವದಂತಿ ಫ್ಯಾಕ್ಟರಿ ಸುಳ್ಳು ಕಥೆಯೊಂದು ಹುಟ್ಟು ಹಾಕಿ ಪ್ರಚಾರ ಮಾಡುತ್ತಿದೆ.

ವಾಸ್ತವವಾಗಿ ಬಿಕರ್ನಕಟ್ಟೆಗೆ ಆ ಹೆಸರು ಬರಲು ಕಾರಣ ಬಿಕರಣ್ಣ ಪೂಜಾರಿ ಎಂಬ ವ್ಯಕ್ತಿ. ಆತ ಅಲ್ಲಿ ಒಂದು ಕಟ್ಟೆಯಲ್ಲಿ ಕುಳಿತು ಬಾಯಾರಿ ಬಂದವರಿಗೆ ಉಚಿತವಾಗಿ ನೀರು ಬೆಲ್ಲ ಕೊಡುತ್ತಿದ್ದನಂತೆ. ಆ ಕಾಲದಲ್ಲಿ ಸುತ್ತಲಿನ ಹಳ್ಳಿಯಿಂದ ನಗರಕ್ಕೆ ಬರುತ್ತಿದ್ದ ಎಲ್ಲರೂ ಕಾಲುನಡಿಗೆಯಲ್ಲಿಯೇ ಬರುತ್ತಿದ್ದದ್ದು. ಹಂಪನಕಟ್ಟೆಗೂ ಆ ಹೆಸರು ಬರಲು ಹಂಪಣ್ಣ ಎಂಬವನು ಅಲ್ಲಿಯ ಕಟ್ಟೆಯಲ್ಲಿ ಕುಳಿತು ದಾರಿಹೋಕರಿಗೆ ನೀರು ಕೊಡುತ್ತಿದ್ದದ್ದು. ಆನಂತರ ಅದು ಹಂಪಣ್ಣನ ಕಟ್ಟೆಯಾಗಿ ಆಮೇಲೆ ಹಂಪನ್-ಕಟ್ಟೆ ಆಯಿತು ಎಂದು ಬ್ರಿಟಿಷರ ಕಾಲದ ಮಂಗಳೂರಿನ ಗೆಜೆಟ್ಟಿನಲ್ಲಿ ಉಲ್ಲೇಖವಿದೆ.

ಟಿಪ್ಪುವಿನ ವಿಷಯದಲ್ಲಿ ಮುಸ್ಲಿಂ ಮತ್ತು ಕ್ರೈಸ್ತರ ನಡುವೆ ಭಿನ್ನಾಭಿಪ್ರಾಯ ಹೆಚ್ಚಿಸಲು ಮತ್ಯಾರೋ ಮಾರ್ನಮಿಕಟ್ಟೆಗೆ ಆ ಹೆಸರು ಬರಲು ಅಲ್ಲಿ ಟಿಪ್ಪು ಕ್ರೈಸ್ತರ ಮಾರಣಹೋಮ ನಡೆಸುತ್ತಿದ್ದದ್ದು ಎಂದೂ, ಅದಕ್ಕೆ ಮಾರಣ-ಹೋಮ-ಕಟ್ಟೆ ಎಂಬ ಸಂಸ್ಕೃತ ಹೆಸರು ಬಂದು ನಂತರ ಜನರ ಬಾಯಲ್ಲಿ ಅದು ಮಾರ್ನಮಿಕಟ್ಟೆ ಆಯಿತು ಎಂದೂ ಸುಳ್ಳು ಕಥೆ ಹಬ್ಬಿಸುತ್ತಿದ್ದಾರೆ. ಮಾರ್ನಮಿಕಟ್ಟೆಯ ಮೂಲ ಹೆಸರು ಮಹಾ-ನವಮಿ-ಕಟ್ಟೆ ಅಂದರೆ ಮಹಾನವಮಿ ಹಬ್ಬದ ಸಮಯ ಅಲ್ಲಿ ದೇವರನ್ನು ಕೂಡಿಸಲಾಗುತ್ತಿತ್ತು.

ನಿಜವಾಗಿ ಟಿಪ್ಪು ಮಂಗಳೂರಿನಲ್ಲಿ ಭೇಟಿ ಕೊಟ್ಟ ಮೂರೇ-ಮೂರು ಸ್ಥಳವೆಂದರೆ ಬಾವುಟಗುಡ್ಡ, ಸುಲ್ತಾನ್ ಬತ್ತೇರಿ ಮತ್ತು ಬಂದರಿನಲ್ಲಿ ಜೈನ ಬಸದಿಯ ಮಾದರಿಯಲ್ಲಿ ಕಟ್ಟಲಾಗಿರುವ ಮಸೀದಿ ಮಾತ್ರ. ಈ ಮಸೀದಿ ಇಂದಿಗೂ ಹಾಗೇ ಇದೆ. ಟಿಪ್ಪು ಹುಟ್ಟುವುದಕ್ಕೆ ಎಷ್ಟೋ ಮುಂಚೆಯೇ ಬಂದರಿನ ಜೈನ ವ್ಯಾಪಾರಿಗಳು ಸ್ವಇಚ್ಛೆಯಿಂದ ಇಸ್ಲಾಂ ಧರ್ಮ ಸ್ವೀಕರಿಸಿದಾಗ (ಅಗಾಕರ್/ಇಲ್ಲವರ್ ಮುಸ್ಲಿಮರು) ಈ ಜೈನ ಬಸದಿಯ ವಾಸ್ತುವಿನಲ್ಲಿ ಮಸೀದಿ ಕಟ್ಟಲಾಯಿತಂತೆ. ಈ ಮೂರು ಸ್ಥಳ ಬಿಟ್ಟು ಟಿಪ್ಪು ಬೇರೆ ಯಾವುದೇ ಸ್ಥಳಕ್ಕೆ ಭೇಟಿಯಿತ್ತಿರಲಿಲ್ಲ.



ರಾಕ್ಷಸರ ಮತ್ತು ವಿಚಿತ್ರ ದೇವರ ಕಾಳಗದ ಕಾಲ್ಪನಿಕ ಸ್ಥಳಪುರಾಣ ಕಟ್ಟುವುದರಲ್ಲಿ ವೈದಿಕರಿಗೆ ಮೂರು ಸಾವಿರ ವರ್ಷದ ಅನುಭವವಿರುವಾಗ ಟಿಪ್ಪು ಮತ್ತು ಬ್ರಿಟಿಷರ ಬಗ್ಗೆ ಕಾಲ್ಪನಿಕ ಸ್ಥಳಪುರಾಣ ಕಟ್ಟುವುದು ಇವರಿಗೆ ಕಷ್ಟವಾಗಿರಲಿಕ್ಕಿಲ್ಲ.

1782-83 ರಲ್ಲಿ ಟಿಪ್ಪು ಮಂಗಳೂರಿಗೆ ದಾಳಿ ಮಾಡಿದಾಗ ಮಂಗಳೂರಿನ ಜನಸಂಖ್ಯೆ ಒಟ್ಟು ಐವತ್ತು ಸಾವಿರವೂ ಇರಲಿಲ್ಲ. ಅದರಲ್ಲಿ ಕ್ರೈಸ್ತರು ಹತ್ತು ಸಾವಿರಕ್ಕಿಂತ ಹೆಚ್ಚಿರಲಿಲ್ಲ, ಇದರಲ್ಲೂ ಅರ್ಧದಷ್ಟು ಜನ ಬಾಸೆಲ್ ಮಿಷನ್ ಪ್ರೊಟೆಸ್ಟಂಟ್ ಕ್ರೈಸ್ತರಾಗಿದ್ದರು. ಹಾಗಿರುವಾಗ ಟಿಪ್ಪು ಎಂಬತ್ತು ಸಾವಿರ ಕ್ಯಾಥೊಲಿಕ್ ಕ್ರೈಸ್ತರನ್ನು ಬಂಧಿಸಿ ಶ್ರೀರಂಗಪಟ್ಟಣಕ್ಕೆ ಎಳೆದೊಯ್ಯಲು ಹೇಗೆ ಸಾಧ್ಯ?

ಬಹಳಷ್ಟು ಜನರಿಗೆ ಗೊತ್ತಿಲ್ಲದ ಮಂಗಳೂರಿಗೆ ಸಂಬಂಧಿಸಿದ ಇನ್ನೊಂದು ಅತಿಮುಖ್ಯ ವಿಷಯವೆಂದರೆ. 1939 ರಲ್ಲಿ ಎರಡನೇ ವಿಶ್ವಯುದ್ಧ ಶುರುವಾದಾಗ ಬ್ರಿಟಿಷರು ಮಂಗಳೂರಿನ ಎಲ್ಲಾ ಬಾಸೆಲ್ ಮಿಷನ್ನಿನವರನ್ನು ಬಂಧಿಸಿ ಮದ್ರಾಸಿಗೆ ಕೊಂಡೊಯ್ದು ನಂತರ ಅವರನ್ನು ಜರ್ಮನಿಗೆ ಗಡಿಪಾರು ಮಾಡಿ ಅವರ ಆಸ್ತಿಪಾಸ್ತಿಯನ್ನೆಲ್ಲ ಮುಟ್ಟುಗೋಲು ಹಾಕಿಕೊಂಡರು. ಯಾಕೆಂದರೆ ಬಾಸೆಲ್ ಮಿಷನ್ನಿನವರು ಮೂಲತಃ ಜರ್ಮನಿಯವರಾಗಿದ್ದು ಅವರು ತಮ್ಮ ಜರ್ಮನಿಗಾಗಿ ಭಾರತದಲ್ಲಿ ಬೇಹುಗಾರಿಗೆ ಮಾಡುತ್ತಾರೆ ಎಂಬ ಸಂಶಯ ಬ್ರಿಟಿಷರಿಗಿತ್ತು. ಬ್ರಿಟಿಷರು ಮತ್ತು ಜರ್ಮನಿಯವರಿಬ್ಬರೂ ಪ್ರೊಟೆಸ್ಟಂಟ್ ಕ್ರೈಸ್ತರೇ ಆಗಿದ್ದರೂ ಬ್ರಿಟಿಷರು ಯುದ್ಧ ಸಮಯದಲ್ಲಿ ರಕ್ಷಣಾತ್ಮಕ ದೃಷ್ಟಿಯಿಂದ ಇಂತಹ ಕಠೋರ ಕ್ರಮ ಕೈಗೊಳ್ಳಲೇಬೇಕಾಯಿತು. ಇದರ ಅರ್ಥ ಯುದ್ಧದ ಸಮಯದಲ್ಲಿ ಯಾರೂ ಎದುರು ಪಕ್ಷದವರ ಧರ್ಮ ಜಾತಿ ಭಾಷೆ ನೋಡುತ್ತಿರಲಿಲ್ಲ, ಇದೇ ಪ್ರಕಾರ ಟಿಪ್ಪು ಸಹ ಬೇಹುಗಾರಿಕೆ ಆರೋಪದಡಿ ಮಂಗಳೂರಿನ ಕೆಲವು ಕ್ರೈಸ್ತರನ್ನು ಬಂಧಿಸಿದ್ದು ನಿಜ. ಆದರೆ ಅದು ಧರ್ಮದ ಕಾರಣಕ್ಕಾಗಿ ಅಲ್ಲ.

ನಿಜವಾಗಿ 230 ವರ್ಷಗಳ ಹಿಂದೆ ಇಡೀ ತುಳುನಾಡಲ್ಲಿಯೇ ಒಟ್ಟು ಐವತ್ತು ಸಾವಿರ ಕ್ಯಾಥೊಲಿಕ್ ಕ್ರೈಸ್ತರೂ ಇರದಿದ್ದಾಗ ಕೇವಲ ಮಂಗಳೂರು ನಗರವೊಂದರಿಂದಲೇ ಟಿಪ್ಪು ಎಂಬತ್ತು ಸಾವಿರ ಕ್ರೈಸ್ತರನ್ನು ಬಂಧಿಸಿ ಕೊಂಡೊಯ್ಯಲು ಹೇಗೆ ಸಾಧ್ಯ? ಎಲ್ಲವೂ ಇತಿಹಾಸ ತಿರುಚಿ ಬರೆದ ಬ್ರಿಟಿಷರ ಕೈಚಳಕ

ಇವತ್ತು ಮಂಗಳೂರು ನಗರ ಹಾಗೂ ಸು ಕೆಥೋಲಿಕ್ ಕ್ರೈಸರು ದೊಡ್ಡ ದೊಡ್ಡ ಆಸ್ತಿ ಹೊ ಇದೆಲ್ಲಾ ಮೂಲತಃ ಬ್ರಿಟಿಷರು ಬಾಸೆಲ್ ಮಿಶ 1939 ರಲ್ಲಿ ವಶಪಡಿಸಿಕೊಂಡು ಕ್ರೈಸ್ತರಿಗೆ ಭೂಮಿಯೇ ಆಗಿದೆ. ಜತೆಗೆ 1799 ರಲ್ಲಿ ಟಿಪ್ಪು ಸ ಬ್ರಿಟಿಷರು ಮಂಗಳೂರಿನಲ್ಲಿ ಮುಸ್ಲಿಮರು ಮತ್ತು ಬಂಟರು ಹಾಗು ಜೈನರು ಹೊಂದಿದ್ದ ದೊಡ್ಡ ಆ ಬಲಾತ್ಕಾರದಿಂದ ವಶಪಡಿಸಿಕೊಂಡು ತಮ ತೋರಿಸಿದ ಕೆಥೋಲಿಕ್ ಕ್ರೈಸ್ತರಿಗೆ ಧಾರೆ ಎ ಹೀಗೆ ಮಂಗಳೂರಿನ ಕ್ಯಾಥೊಲಿಕರು ಆಸ್ತಿವಂ ಹಾಗೂ ಆಸ್ತಿ ಭೂಮಿ ಕಳೆದುಕೊಂಡ ಮು ಜೈನರು ಮತ್ತು ಹಿಂದೂಗಳು ಮಂಗಳೂರು ಜಿಲ್ಲೆಯ ಒಳನಾಡಿಗೆ ವಲಸೆ ಹೋದರು.

ಬೆಂಗಳೂರಿನ ನಿರ್ಮಾತೃ ಹಿರಿಯ ಕೆಂ ಕೊನೆಯ ವಾರಸುದಾರ ಕೆಂಪವೀರಗೌಡರ ಹೇಗಾಯಿತು ಗೊತ್ತೇ? ಮೈಸೂರು ಒಡೆಯರರ ದಳವಾಯಿ ದೇವರಾಜ 1728 ರಲ್ಲಿ ಮಾಗಡಿಯ ದಾಳಿ ಮಾಡಿ ಕೋಟೆಯನ್ನು ವಶಪಡಿಸಿಕೊಂಡು ಹಿಂದೂ ಸೈನಿಕರನ್ನು ಕೊಂದು ಕೆಂಪವೀರ (ಕೊನೆಯ ಕೆಂಪೇಗೌಡರನ್ನು) ಜೀವಂತ ಸೆರೆ ಒಂದು ನಾಯಿ ಬೋನಿನಲ್ಲಿ ಬಂಧಿಸಿ ಮಾಗ ಶ್ರೀರಂಗಪಟ್ಟಣದ ಕಾರಾಗೃಹದವರೆಗೆ ಮೈಲಿಯಷ್ಟು ದೂರ ಸಾರ್ವಜನಿಕ ಪ್ರದರ್ಶನ ಅವರನ್ನು ಅವಮಾನಿಸುತ್ತಾ ಕೊಂಡು ಹೋದನು ಕಾರಾಗೃಹದಲ್ಲಿಯೇ ಚಿತ್ರಹಿಂಸೆ ಅನುಭವಿಸಿ ಕೆಂಪೇಗೌಡರು ತೀರಿಕೊಂಡರು. ಹೀಗೆ ಒಬ್ಬ ರಾಜನ ಹಿಂದೂ ಸೇನಾಪತಿ ಇನ್ನೊಬ್ಬ ಹಿಂದೂ ಸಾವಿರಾರು ಹಿಂದೂ ಸೈನಿಕರನ್ನು ಕೊಂದು ಆ ರಾಜನನ್ನು ನಾಯಿ ಬೋನಿನಲ್ಲಿಟ್ಟು ಸಾಗಿಸಿ ಹೀನ ಚಿತ್ರ ಹಿಂಸೆಕೊಟ್ಟು ಕೊಂದದನ್ನು ಈಗಿನ ಹಿಂದು ಗಳು ಏನೆಂದು ವ್ಯಾಖ್ಯಾನಿಸುತ್ತಾರೆ?

■ ರಾಮಕೃಷ್ಣ ಎ. ಶೆಲ್ಲೆ. ಮಂಗ

ಅಸಹಿಷ್ಣುತೆ ತೊಲಗಲಿ ಸಹಿಷ್ಣುತೆ ಮೊಳಗಲಿ

ದೇಶದಲ್ಲಿ ಸಹಿಷ್ಣುತೆ-ಅಸಹಿಷ್ಣುತೆ ಬಗ್ಗೆ ಭಾರೀ ಚರ್ಚೆ ನಡೆಯುತ್ತಿದೆ. : ರಾಜಕೀಯ ಪಕ್ಷ ಸಹಿಷ್ಣುತೆಯ ವಕ್ತಾರರೆಂದು ಮಾತನಾಡುತ್ತಿದ್ದರೆ ...ದು "ನಮಗೂ ಅಸಹಿಷ್ಣುತೆಗೂ ಸಂಬಂಧವೇ ಇಲ್ಲ, ಈ ಹಿಂದೆಯೂ ...ಷ್ಣುತೆ ಇರಲಿಲ್ಲವೆ?" ಎಂದು ಗತಕಾಲದ ಕಡೆ ಬೊಟ್ಟು ಮಾಡುತ್ತಿದೆ. ಒಂದಂತೂ ನಿಜ. ಈ ದೇಶದಲ್ಲಿ ಯಾವುದೇ ಆಡಳಿತ ಪಕ್ಷವೂ ...ತೆಯ ಸಾಕಾರಕ್ಕಾಗಿ ಶತಾಗತಾಯ ಪ್ರಯತ್ನಪಟ್ಟಿಲ್ಲ. ಒಂದರಲ್ಲಿ ಉಸಿರು ...ಡಿಯುವ ವಾತಾವರಣವಿದ್ದರೆ ಮತ್ತೊಂದರಲ್ಲಿ ಉಸಿರಾಡುವ ...ವರಣವಷ್ಟೆ. ಆದರೆ ಈ ದೇಶದಲ್ಲಿ ಧರ್ಮಗಳನ್ನು ಗುತ್ತಿಗೆಗೆ ...ಕೊಂಡಿರುವವರು ಮನುಷ್ಯತ್ವ ಮರೆತು ಬಾಂಬುಗಳ ಮೂಲಕ, ಕತ್ತಿ ...ಗಳ ಮೂಲಕ ಕಾಲಕಾಲಕ್ಕೆ ಅಸಹಿಷ್ಣುತೆ ಸೃಷ್ಟಿಸುತ್ತಿರುವುದು ಅಕ್ಷರಶಃ ...ಬಾಂಬು ಮತ್ತು ಕತ್ತಿ ಇವೆರಡೂ ನಮ್ಮ ದೇಶಕ್ಕೆ ಮಗ್ಗುಲ ಮುಳ್ಳಿದ್ದಂತೆ. ...ಗಳ ನಡುವೆ ಭಯದಿಂದಲೇ ಜೀವನ ಸಾಗಿಸುತ್ತಿರುವ ಭಾರತೀಯರ ... ಏನು ಹೇಳುತ್ತಿರಬಹುದು?


...ವರ್ಷದ ಚಿಮ್ಮಾ ದೇವಸ್ಥಾನ ಪ್ರವೇಶಿಸಿ ಬಿಡುತ್ತಾನೆ ಎಂಬ ಕಾರಣಕ್ಕಾಗಿ ...ಣ್ಣೆ ಸುರಿದು ಬೆಂಕಿ ಹಚ್ಚಿದಾಗ, ಗಾಢ ನಿದ್ದೆಯಲ್ಲಿದ್ದ ಎಳೆ ಮಕ್ಕಳಿಗೆ ...ರಣಕ್ಕೆ ಬೆಂಕಿ ಹಚ್ಚಿ ಕೊಂದಾಗ, ಕೂಲಿ ಕೆಲಸಕ್ಕೆ ತೆರಳಿದವರ ಶಿರ ... ಹಾಕಿದಾಗ ಸತ್ತವರಿಗೆ ಮತ್ತವರ ಕುಟುಂಬಗಳಿಗೆ ಈ ದೇಶ ನಮ್ಮದು ...ಬಹುದೆ?

...ನೆಯಲ್ಲಿ ಮಾಂಸವಿಟ್ಟಿದ್ದಕ್ಕೆ ಇಖ್ಲಾಕನನ್ನು ಕಲ್ಲುಗಳಿಂದ ಜಜ್ಜಿ ...ಸುವಾಗ, ಕರುವೊಂದನ್ನು ಕೈಲಿಡಿದು ನಡೆಯುತ್ತಿದ್ದ ಕಾರಣಕ್ಕಾಗಿ ...ಸಾದ ಮುಖ್ಯ ಗುರುವೊಬ್ಬನನ್ನು ಹೊಡೆದು ಕೊಲ್ಲುವಾಗ, ...ಯೊಬ್ಬಳ ಹೊಟ್ಟೆ ಇರಿದು ಮಗುವನ್ನು ಹೊರತೆಗೆದು ಕತ್ತಿಗೆ ಸಿಕ್ಕಿಸಿ ...ಸಿ ನಕ್ಕಾಗ ಸತ್ತವರಿಗೆ ಮತ್ತವರ ಕುಟುಂಬಕ್ಕೆ ಈ ದೇಶ ನಮ್ಮದು ...ಬಹುದೆ?

...ಪಲ್ಲೆನ್ನೆಯ ಹಸುಳೆಯನ್ನು ವಿಕೃತ ಮನಸ್ಸೊಂದು ಅತ್ಯಾಚಾರವೆಸಗಿ ...ದಾಗ, 60 ವರ್ಷದ ಅಜ್ಜಿಯನ್ನೂ ಅತ್ಯಾಚಾರಗೈದಾಗ, ಸಾವಿರ ...ಗಳನ್ನು ಹೊತ್ತ ಹರೆಯದ ಯುವತಿಯ ಗ್ಯಾಂಗ್ ರೇಪ್ ಮಾಡಿ ...ರಿಪೀಸುಗಳಿಂದ ಇರಿದು ಕೊಂದಾಗ ಸತ್ತ ಜೀವಗಳಿಗೆ ಮತ್ತವರ ...ಬಕ್ಕೆ ಈ ದೇಶ ನಮ್ಮದೆನಿಸಿರಬಹುದೆ?

...ಳೆ ಇಲ್ಲದೆ ಅಥವಾ ಮಳೆ ಹೆಚ್ಚಾಗಿ ಅಥವಾ ಬೆಳೆದ ಬೆಳೆಗೆ ಸರಿಯಾದ ...ಗದೆ ಸಾಲಕ್ಕೆ ಹೆದರಿ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುವ ಹೆಂಡತಿ ...ನ್ನೂ ಮರೆತು ನೇಣಿಗೇರುವ ರೈತನಿಗೆ ಮತ್ತವನ ಕುಟುಂಬಕ್ಕೆ ಈ ...ನಮ್ಮದು ಎನಿಸಿರಬಹುದೆ?

...ದಕ್ಕೆ ಉತ್ತರ ನನ್ನ ಬಳಿ ಇಲ್ಲ, ಏಕೆಂದರೆ ನನಗೆ ಅಥವಾ ನನ್ನ ...ಬಕ್ಕೆ ಈ ರೀತಿಯ ಯಾವುದೇ ಅನುಭವವಾಗಿಲ್ಲ, ಆದರೆ ಭಯವಿದೆ. ...ತಿಯ ಘಟನೆಗಳು ನನಗೂ ಸಂಭವಿಸಬಹುದೆಂಬ ಭಯವಿದೆ. ಈ ...ಆಮೀರ್ ಖಾನನ ಹೆಂಡತಿಗೆ ಆಗಿರಬಹುದು. ಅದಕ್ಕಾಗಿಯೇ ಈ ...ಬಿಡಬೇಕಾಗಬಹುದೇ? ಎಂಬ ಪ್ರಶ್ನೆ ಭಯದ ರೂಪದಲ್ಲಿ ಆ ಹೆಣ್ಣು



ಮಗಳಲ್ಲಿ ಮೂಡಿರಬಹುದು. ಈ ಹೊತ್ತಿನಲ್ಲಿ ಅವರಿಗೆ ನಾವು ನೀಡಬೇಕಾಗಿರುವುದು ಧೈರ್ಯ ಮತ್ತು ಸಾಂತ್ವನವನ್ನೇ ಹೊರತು ಪಾಕಿಸ್ತಾನಕ್ಕೆ ಟಿಕೆಟ್ಟನ್ನಲ್ಲ. ಹಿಂದೆ 'ವಿಶ್ವರೂಪಂ' ಚಲನಚಿತ್ರದ ವಿವಾದದಲ್ಲಿ ಕಮಲ್ ಹಾಸನ್ ಅವರು ಸಹ ದೇಶ ಬಿಡುವ ಮಾತಾಡಿದ್ದರು. ಆಗದು ಅಷ್ಟು ಸುದ್ದಿ ಮಾಡಲಿಲ್ಲ ಮತ್ತು ಅವರಿಗ್ಯಾರೂ ಬೇರೆ ದೇಶದ ಟಿಕೆಟ್ ನೀಡುವುದಾಗಿ ಹೇಳಿರಲಿಲ್ಲ. ಸೋನಿಯಾ ಗಾಂಧಿಯವರು ಬಳ್ಳಾರಿ ಕ್ಷೇತ್ರದಿಂದ ಗೆದ್ದರೆ ತಾನು ದೇಶ ಬಿಡುತ್ತೇನೆ ಎಂದು ಉಡುಪಿ ಅದಮಾರು ಮಠದ ಶ್ರೀ ವಿಭುದೇಶತೀರ್ಥ ಸ್ವಾಮೀಜಿ ಹೇಳಿದ್ದರು. ಆಗದು ಸುದ್ದಿಯಾಗಲಿಲ್ಲ, ಯಾರೂ ಟಿಕೆಟ್ ಕಳಿಸಲಿಲ್ಲ. ಆದರೆ ಅನಂತಮೂರ್ತಿಯವರು 'ಮೋದಿಯವರು ಪ್ರಧಾನಿಯಾದ ದೇಶದಲ್ಲಿ ನಾನಿರುವುದಿಲ್ಲ' ಎಂದಾಗ ಅದು ವಿವಾದವಾಯಿತು ಮತ್ತು ಕೆಲವರು ಅವರ ಮನಸ್ಸನ್ನೂ ನೋಯಿಸಿ ಅವರ ಸಾವು ಬಯಸಿದ್ದರು. ಒಂದೇ ರೀತಿಯ ಘಟನೆಗಳಿಗೆ ಎರಡೆರಡು ರೀತಿಯ ಮಾನದಂಡಗಳನ್ನು ಕೆಲವರು ನೀಡುತ್ತಿದ್ದಾರೆ. ಇದೆಲ್ಲವನ್ನು ಹೊರತುಪಡಿಸಿಯೂ ಸಹೃದಯದ ಸಹಿಷ್ಣು ಭಾರತೀಯರಿದ್ದಾರೆ. ಮಗನನ್ನು ಕಳೆದುಕೊಂಡ ನೋವಿನ ನಡುವೆಯೂ 'ಉಗ್ರರನ್ನು ಹೊಡೆದುರುಳಿಸಲು ಸೇನೆಗೆ ನನ್ನ ಮಕ್ಕಳನ್ನು ಸೇರಿಸುತ್ತೇನೆ' ಎನ್ನುವ ದಿಟ್ಟ ಅಮ್ಮಂದಿರಿದ್ದಾರೆ. ಕಿರಣ್ ರಾವ್ ಅವರಿಗೆ ಧೈರ್ಯ ನೀಡುವ ಕೋಟಿ ಮನಸ್ಸುಗಳು ಭಾರತದಲ್ಲಿವೆ. ಏಕೆಂದರೆ ನಾವೆಲ್ಲರೂ ಭಾರತೀಯರೇ. ಅದಕ್ಕಿಂತ ಹೆಚ್ಚಾಗಿ ನಾವೆಲ್ಲರೂ ಮನುಷ್ಯರೇ.

ನನ್ನ ನೋವು ನನಗರಿವಾಗುವುದು ಜ್ಞಾನ. ಪರರಿಗೂ ನನ್ನಂತೆಯೇ ನೋವಿರುತ್ತದೆ ಎಂದರಿವುದು ವಿಜ್ಞಾನ. ಪರರ ನೋವೂ ನನ್ನ ನೋವೇ ಎಂದರಿವುದು ಅಧ್ಯಾತ್ಮ. ಈ ಅಧ್ಯಾತ್ಮವನ್ನೇ ಬುದ್ಧ ಈ ನಾಡಿನಲ್ಲಿ ಬಿತ್ತಿದ್ದು, ಬಸವಣ್ಣ ಉಳಿಯಬೇಕೆಂದು ಬಯಸಿದ್ದು, ನಿಜವಾದ ದೇಶ ಭಕ್ತ ಬಯಸುವುದು.

ಭಾರತದಲ್ಲಿ ಇತ್ತೀಚೆಗೆ ಕಂಡುಬರುತ್ತಿರುವ ಅಸಹಿಷ್ಣುತೆ ಬಗ್ಗೆ ಭಾರತೀಯರು ಮೌನವಾಗಿಲ್ಲ. ಸಮಯ ಸಿಕ್ಕಾಗಲೆಲ್ಲ ಪ್ರತಿಭಟಿಸಿದ್ದಾರೆ. ಸಾಹಿತಿಗಳಂತೂ ತಮ್ಮ ಪ್ರಶಸ್ತಿಗಳನ್ನೇ ಹಿಂದಿರುಗಿಸಿದ್ದಾರೆ. ಹೀಗಿರುವಾಗ ಕೆಲವು ಪಕ್ಷಪಾತಿಗಳು ಸಿಟ್ಟಿಗೆದ್ದಿದ್ದಾರೆ. ಈ ಹಿಂದೆ ಅಸಹಿಷ್ಣುತೆ ಇರಲಿಲ್ಲವೇ? ಆಗ ಏಕೆ ಪ್ರಶಸ್ತಿ ವಾಪಾಸು ಮಾಡಲಿಲ್ಲ? ಎಂದು ಪ್ರಶ್ನಿಸುತ್ತಿದ್ದಾರೆ. ಇದು ರಾಜಕೀಯದ ಮಾತು. ಹಿಂದಿನ ಸರ್ಕಾರದಲ್ಲೂ ಹೀಗೇ ಆಗಿತ್ತು ಎಂದಮೇಲೆ ಇಂದಿನ ಸರ್ಕಾರ ಅದನ್ನು ನಿಯಂತ್ರಿಸಬೇಕೆಂಬ ಜವಾಬ್ದಾರಿ ಹೊಂದಿರಬೇಕು. ಅದು ಬಿಟ್ಟು ಇಂದಿನ ಸರ್ಕಾರ ತನ್ನ ಜವಾಬ್ದಾರಿಯನ್ನು ಮರೆತು ಮತ್ತೊಬ್ಬರೆಡೆ ಬೊಟ್ಟು ಮಾಡುತ್ತಾ ಕುಳಿತರೇನು ಪ್ರಯೋಜನ?

ಈ ಹಿಂದೆ ಮಾಂಸವನ್ನು ಮನೆಯಲ್ಲಿಟ್ಟ ಕಾರಣಕ್ಕಾಗಿ ಭಾರತೀಯರೇ ಮತ್ತೊಬ್ಬ ಭಾರತೀಯನನ್ನು ಕೊಂದ ಉದಾಹರಣೆಗಳಿವೆಯೇ? ಅದನ್ನು ಸರ್ಕಾರದ ಮಂತ್ರಿಗಳೇ ಸಮರ್ಥಿಸಿಕೊಂಡ ಉದಾಹರಣೆಗಳಿವೆಯೇ? ದೇವಸ್ಥಾನ ಪ್ರವೇಶಿಸುತ್ತಾನೆ ಎಂಬ ಕಾರಣಕ್ಕಾಗಿ ಒಬ್ಬ ಭಾರತೀಯನನ್ನು ಮತ್ತೊಬ್ಬ ಭಾರತೀಯ ಭಾರತೀಯರೆದುರು ದೇವಸ್ಥಾನದ ಮುಂದೆಯೇ ಸುಟ್ಟ ಉದಾಹರಣೆಗಳಿವೆಯೇ? ಈ ಘಟನೆಗಳು ಅಸಹಿಷ್ಣುತೆಯನ್ನು ಸೂಚಿಸುತ್ತಿವೆಯೇ ಹೊರತು ಸಹಿಷ್ಣುತೆಯನ್ನಲ್ಲ. ಅಸಹಿಷ್ಣುತೆ ಯಾವ ಕಾಲಘಟ್ಟದಲ್ಲಿಯೇ ಆಗಲಿ ಅದು ಸಮರ್ಥನೀಯವಲ್ಲ.

ಇಷ್ಟಕ್ಕೂ ಮೀರಿ ಸಾಮಾಜಿಕ ಜಾಲತಾಣದಲ್ಲಿ ಮುಗ್ಧ ಮನಸ್ಸುಗಳಲ್ಲಿ ಕೋಮು ದ್ವೇಷವನ್ನು ಸೃಷ್ಟಿಸುವ ಕೆಲಸವಾಗುತ್ತಿದೆ. ದುರ್ಬಲ ಮನಸ್ಸುಗಳು ಸತ್ಯಾಸತ್ಯತೆ ಅರಿಯದೆ ಉದ್ವೇಗಗೊಳ್ಳುತ್ತಿವೆ. ಅಂತಹವರಿಗೆ ರೂಸೋ-ವಾಲ್ಟೇರ್ ವಾಗ್ವಾದ ದಾರಿದೀಪವಾಗುತ್ತದೆ. ಒಮ್ಮೆ ರೂಸೋ ವಿಚಾರ ಲಹರಿಯು ವಾಲ್ಟೇರನನ್ನು ಕೋಪಕ್ಕೀಡುಮಾಡುತ್ತದೆ. ಅದಕ್ಕಾಗಿ ಅವನು ರೂಸೋನನ್ನು ಉದ್ದೇಶಿಸಿ. 'ನಿನ್ನ ವಿಚಾರಗಳು ನನಗೆ ನಾಯಿ ಬೊಗಳಿದಂತೆ ಎನಿಸುತ್ತಿದೆ. ಆದರೂ ನಿನ್ನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನಾನು ನನ್ನ ಪ್ರಾಣ ಕೊಟ್ಟಾದರೂ ರಕ್ಷಿಸುತ್ತೇನೆ' ಎನ್ನುತ್ತಾನೆ. ಈ ರೀತಿಯ ಸಹಿಷ್ಣುತೆಯನ್ನು ಭಾರತೀಯರು ಬುದ್ಧನ ಕಾಲದಿಂದಲೂ ಒಳ ಬಿಟ್ಟುಕೊಂಡಿದ್ದೇವೆ. ಈಗಲೂ ಆ ಹಾದಿಯತ್ತಲೇ ಹೋಗೋಣವೆಂದು ಆಶಿಸೋಣ. ಈಗ ತಾನೇ ಚೊಚ್ಚಲ ಸಂವಿಧಾನ ದಿನಾಚರಣೆಯನ್ನು ದೇಶಾದ್ಯಂತ ಆಚರಿಸಿದ್ದೇವೆ. ಅದರ ಆಶಯದಂತೆ ಸ್ವಾತಂತ್ರ್ಯ ಸಮಾನತೆ ಮತ್ತು ಸಹೋದರತೆಯನ್ನು ಭಾರತದಲ್ಲಿ ಪುನರ್ ಸ್ಥಾಪಿಸಲು ಭಾರತೀಯರೆಲ್ಲರಿಗೂ ಮತ, ಜಾತಿ, ಲಿಂಗ ಭೇದಗಳಿಲ್ಲದೆ ಗೌರವಿಸೋಣ. ಕೋಮುವಾದಿ ಶಕ್ತಿಗಳನ್ನು ಬಹಿಷ್ಕರಿಸೋಣ. ಕಿರಣ್ ರಾವ್ ಅವರನ್ನು ಒಳಗೊಂಡಂತೆ ಕೋಮುವಾದಕ್ಕೆ ಬಲಿಯಾದ ಮತ್ತು ಭಯಗೊಂಡ ಕುಟುಂಬಗಳಿಗೆ 'ನಿಮ್ಮೊಂದಿಗೆ ನಾವೆಲ್ಲಾ ಇದ್ದೇವೆ, ಧೈರ್ಯವಾಗಿರಿ' ಎಂಬ ಭರವಸೆ ನೀಡೋಣ.


■ ವಿಕಾಸ ಆರ್ ಮೌರ್ಯ

ಲಂಕೇಶ್ ಪರಿಚಯಿಸಿದ 'ಒಡಲ ಕಿಚ್ಚು' ಉಡುಪಿಯಲ್ಲಿ



...ಸಮಾಜವಾದಿ ಹಿನ್ನೆಲೆಯ ಸಿದ್ದರಾಮಯ್ಯನಂತವರ ಆಡಳಿತದಲ್ಲಿರುವಾಗಲೇ ಕಲ್ಬುರ್ಗಿಯವರಂತ ...ನ್ನು ಕೊಂದು ಗಿಟ್ಟಿಸಿಕೊಂಡ ವಿಕೃತ ಸನಾತನವಾದಿ ...ದೇ ಸಂದರ್ಭದಲ್ಲಿ ಮತ್ತೊಂದು ಅತಿರೇಕವನ್ನು ...ಎಸಗಿತ್ತು, ಅದು ದಾವಣಗೆರೆ ಜಿಲ್ಲೆಯ ಯುವಕವಿ ...ಪ್ರಸಾದರ ಮೇಲಿನ ಮಾರಣಾಂತಿಕ ಹಲ್ಲೆ. ...ರ್ 11, 2015ರ ಗೌರಿ ಲಂಕೇಶ್ ಪತ್ರಿಕೆಯಲ್ಲಿ ...ಈ ಕುರಿತ ಸಂಪಾದಕೀಯದಲ್ಲಿ ದಲಿತ ...ದ ಯುವ ಕವಿ ಹುಚ್ಚಂಗಿ ಪ್ರಸಾದರ ಹೋರಾಟದ ...ಹಾಗು ಅವರ ಅಲ್ಪ ಕೆಲ ಕವಿತೆಗಳನ್ನು ಓದುಗರಿಗೆ ...ತ್ತು ಇದನ್ನು ಓದಿ ಪ್ರಸಾದರ ಕುರಿತು ಹೆಮ್ಮೆ ... ಮೂಡಿ ಇಟ್ಟಿಲಕ್ಕಿಸಿ. ...ಹಿಂಸದ ಕೃಷ್ಣಾಪರಿಕ್ಷೋಳಗಾದ ನನ್ನ ಮಿತ್ರ ... ಪತ್ರಿಕೆಯವರು (ಅವರು ಪಿ.ಲಂಕೇಶ್ ಹಾಗು ಗೌರಿ ಲಂಕೇಶ್ ಪತ್ರಿಕೆಯ ಮಹಾ ಅಭಿಮಾನಿ) ಅವತ್ತಿಂದಲೇ ಹುಚ್ಚಂಗಿಯವರನ್ನ ಜಿಲ್ಲೆಗೆ ಕರೆಸಬೇಕೆಂಬ ಆಸೆ ವ್ಯಕ್ತಪಡಿಸಿದ್ದರು. ಅದಕ್ಕೆ ಸರಿಯಾಗಿ ಡಿ. 6 ರ ಅಂಬೇಡ್ಕರ್ ಪರಿನಿರ್ವಾಣದ ದಿನವೂ ಹತ್ತಿರ ಬಂದ ಕಾರಣ ಹುಚ್ಚಂಗಿಯವರನ್ನ ಸಂಪರ್ಕಿಸಲು "ಗೌರಿ ಮೇಡಮ್ ಅವರಿಂದ ಅವರ ಫೋನ್ ನಂಬರ್ ಕೇಳಿ ತಿಳಿಸ್ತೀರಾ?" ಅಂತೊಮ್ಮೆ ನನ್ನ ಕೇಳಿದ್ದರಾದರೂ ಕಳೆದ ತಿಂಗಳು ಪೂರ್ತಿ ಆಸ್ಪತ್ರೆವಾಸಿಯಾಗಿದ್ದ ನಾನು ಅದನ್ನಲ್ಲೇ ಮರೆತುಬಿಟ್ಟಿದ್ದೆ. ಇನ್ನೊಮ್ಮೆ ಪುನಃ ಅದನ್ನವರು ನೆನಪಿಸಿದಾಗ ತಕ್ಷಣವೇ ಮೇಡಮ್‌ಗೆ ಫೋನ್ ಮಾಡಿದೆನಾದರೂ ಅವರು ಡ್ರೈವಿಂಗ್‌ನಲ್ಲಿದ್ದ ಕಾರಣ ಮಾತನಾಡಲಾಗದೇ ನಂತರ ಅವರೇ ಫೋನಾಯಿಸಿ ಹುಚ್ಚಂಗಿಯವರ ನಂಬರ್ ಕೊಟ್ಟರು.

ಹೇಗೂ ಇದು ವಾಟ್ಸಪ್ ಯುಗವಲ್ಲವೇ? ಬರ್ತಿ ಸಹೋದರರಿಗೆ ಮುಖತಃ ಪರಿಚಯವಿರದ ಹುಚ್ಚಂಗಿಯವರ ಫೋಟೊ ಹಾಗು ಇನ್ನಿತರ ಮಾಹಿತಿಗಳೆಲ್ಲ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ರವಾನೆ ಗೊಂಡವು. ಸುರೇಶ್, ಸುಧಾಕರ್, ಶ್ಯಾಮ್ ರಾಜ್, ವರದರಾಜ್, ಸುಬ್ರಹ್ಮಣ್ಯರ ಬರ್ತಿ ಬಳಗಕ್ಕೆ ಹುಚ್ಚಂಗಿಯವರು ಈ ಮೂಲಕ ಇನ್ನಷ್ಟು ಹತ್ತಿರವಾಗಿ, ಡಿಸೆಂಬರ್ 5ರ ಹಿಂದಿನ ದಿನವೇ ಮನೆಗೆ ಬರುವಂತೆ ಹುಚ್ಚಂಗಿಯವರನ್ನ ಒಪ್ಪಿಸಲಾಯಿತಾದರೂ ಕಾರಣಾಂತರ ದಿಂದ ಡಿ. 6 ರ ಬೆಳಗ್ಗೆ ಹುಚ್ಚಂಗಿಯವರು ಬರ್ತಿ ಸಹೋದರರ ಮನೆಗೆ ಬಂದು ಅಲ್ಲೇ ಸ್ನಾನ, ಸಣ್ಣ ನಿದ್ದೆ ಹಾಗು ತಿಂಡಿಯನ್ನು ಪೂರೈಸಿಕೊಂಡು ಬಳಿಕ ಆದಿ ಉಡುಪಿಯ ಅಂಬೇಡ್ಕರ್ ಭವನಕ್ಕೆ ಕಾರ್ಯಕ್ರಮಕ್ಕಾಗಿ ಒಟ್ಟಿಗೆ ತೆರಳಿದರು.



ದಶಕಗಳ ಹಿಂದಿನ ಮಲಯಾಳಮ್ ಸಿನಿಮಾರಂಗ ವೆಂದರೆ ಎರಡು 'ಅತಿ'ಗಳ ಸಂಗಮವಾಗಿತ್ತು. ಅತೀ ಒಳ್ಳೆಯ ಸಿನಿಮಾಗಳು ಹಾಗು ಆ ಸಮಯದ ಅತೀ ಕೊಳಕು ಸಿನಿಮಾಗಳು ಅಲ್ಲಿಂದಲೇ ಬರುತ್ತಿದ್ದವು. ಅದನ್ನೇ ಹೋಲುವಂತೆ ಈಗಿನ ಕರಾವಳಿ ಜಿಲ್ಲೆಯೂ ಕೂಡ ಎರಡು 'ಅತಿ' (Extreme) ಗಳ ಸಂಗಮದ ನಾಡು. ಒಂದು ಇಲ್ಲಿನವರಿಗೆ ತುಂಬಾ ಸುಶಿಕ್ಷಿತರು ಹಾಗು ನಯ ವಿನಯ ಉಳ್ಳವರೆಂಬ ಲೇಬಲ್ ಇದ್ದರೆ ಅದೇರೀತಿ ಎಲ್ಲವನ್ನೂ ಹಾಳು ಕೋಮುದ್ವೇಷದ ಕಣ್ಣಲ್ಲೇ ನೋಡಿ ಎಂತಹ ಉತ್ಪಾತಕ್ಕೂ ರೆಡಿಯಿರುವ (ಬಾಬರಿ ಮಸೀದಿ ಧ್ವಂಸದಲ್ಲಿ ಗುಂಬಜ್ ಹತ್ತಿ ಅಗೆದವರಲ್ಲಿ ಇಲ್ಲಿನವರೂ ಅನೇಕರಿದ್ದರು) ಮತ್ತದಕ್ಕೆ ಎಲ್ಲಾ ರೀತಿಯಲ್ಲೂ ಪ್ರಚೋದಿಸುವ ಧರ್ಮಾಂಧರು ತುಂಬಿರುವಂತಹ ನಾಡೆಂಬ ಲೇಬಲನ್ನೂ ಇದು ಹೊಂದಿದೆ. ಹೀಗಾಗಿ ಇಂತಹ ನೆಲದಲ್ಲಿ ಸ್ವತಃ ನೋವು ದುಗುಡಗಳ ಅನುಭವವಿರುವ ಇಂತಹ ದುರುಳರಿಂದ ಹಲ್ಲೆಗೂ ಒಳಗಾಗಿರುವ ಬಿಸಿರಕ್ತದ ಯುವ ಬರಹಗಾರನನ್ನು ಕರೆಸಿ ಅವರಿಂದ ಭಾಷಣ ಕುಟ್ಟಿಸಿ ಹರಕೆ ತೀರಿಸುವುದೇನೂ ಕಷ್ಟವೇನಲ್ಲ. ಹಾಗಾಗಿ ಈ ಆಹ್ವಾನ ಕೇವಲ ಭಾಷಣ ಅಥವ ಪರಿಚಯಕ್ಕಷ್ಟೇ ಸೀಮಿತವಾ ಗುಳಿಯಬಾರದೆಂಬ ಲೆಕ್ಕಾಚಾರ ವನ್ನು 'ಬರ್ತಿ ಬಳಗ' ಮೊದಲೇ ಹಾಕಿ ಕೊಂಡಿತ್ತು. ಅಪಾಯ ಕಾಲದಲ್ಲಿದ್ದು ಕೊಂಡು ಅಪಾಯ ಪರಿಸರದಲ್ಲಿ ಹೋರಾಡುತ್ತಿರುವ ಈ ಯುವಕನಿಗೆ ಪರೋಕ್ಷವಾಗಿ ನೈತಿಕ ಬೆಂಬಲ ನೀಡುವುದರ ಜೊತೆಗೆ ನಮ್ಮವರಲ್ಲೇ ಒಬ್ಬನನ್ನಾಗಿಸಿ ಕೊಂಡು ಒಟ್ಟಾರೆದುಷ್ಟಶಕ್ತಿಗಳ ವಿರುದ್ಧದ ಹೋರಾಟದಲ್ಲಿ ಕೈಜೋಡಿಸುವುದೇ ಈ ಆಹ್ವಾನದ ಮೂಲ ಉದ್ದೇಶವಾಗಿತ್ತು.

ಉಡುಪಿಯ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯು ಡಿ 6 ರ ಅಂಬೇಡ್ಕರ್ ಪರಿನಿರ್ವಾಣದ ದಿನದಂದು ಆದಿ ಉಡುಪಿಯ ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ 'ನೆಲದ ನೋವಿಗೆ ಮಿಡಿದ ಡಾ ಅಂಬೇಡ್ಕರ್-ಒಂದು ನೆನಪು' ಕಾರ್ಯಕ್ರಮಕ್ಕಾಗಿ ಅನೇಕ ಗಣ್ಯರು ಆಗಮಿಸಿ ಭವನವು ಜನರಿಂದ ತುಂಬಿಹೋಗಿತ್ತು. ಪ್ರಮುಖ ಭಾಷಣಕಾರರಾಗಿ ಮಾತನ್ನಾಡಿದ ನೂರ್ ಶ್ರೀಧರ್ ಮತ್ತು ಹುಚ್ಚಂಗಿಯವರು ದಲಿತರ ಸಾಮಾಜಿಕ ಜಾಗೃತಿಯ ಬಗ್ಗೆ ಹೆಚ್ಚು ಒತ್ತು ಕೊಟ್ಟು ಮಾತನ್ನಾಡಿದರಲ್ಲದೇ ಕೊನೆಯಲ್ಲಿ ಹುಚ್ಚಂಗಿ ಪ್ರಸಾದ್ ಅವರು ತನ್ನ ಜೀವನಾನು ಭವದ ಕೆಲ ಕವಿತೆಗಳನ್ನೂ ವಾಚಿಸಿ ಕುಳಿತಿದ್ದವರಿಗೆ ಒಂದು ರೀತಿಯ ಭಾವನಾತ್ಮಕ "ಥ್ರಿಲ್"ಅನ್ನು ನೀಡಿದರು.

ನೆರೆದಿರುವ ಎಲ್ಲರ ಮನಸನ್ನ ಗೆದ್ದ ಹುಚ್ಚಂಗಿ ಪ್ರಸಾದರನ್ನು ಉಡುಪಿಗೆ ಕರೆಸಲು ಕಾರಣರಾದ ಗೌರಿ ಲಂಕೇಶ್ ಅವರಿಗೆ ಎಲ್ಲರ ಪರವಾಗಿ ಕೃತಜ್ಞತೆಗಳನ್ನು ಹೇಳಲೇಬೇಕಾಗಿದೆ.

■ ಆರ್‌ಪಿ. ಉಡುಪಿ

ಹೇಂಟೆಗಳು ಕೂಗಬಾರದು!



ಪೌರೋಹಿತ್ಯದ ಉತ್ಪನ್ನವಾದ ಮತಮೌಲಿಕವಾದ ಸಾಮಾನ್ಯವಾಗಿ ಎಲ್ಲಾ ಕಲೆಗಳಿಗೂ ವಿರುದ್ಧವಾದುದೇ ಆಗಿದೆ. ಅದಕ್ಕೆ ಕಲೆಗಳಲ್ಲಿ ಒಳಸೇರಿರುವ ಸ್ವಾತಂತ್ರ್ಯ ದಾಹವನ್ನು ಸಹಿಸಲು ಸಾಧ್ಯವಾಗುವುದಿಲ್ಲ, ಅವುಗಳಲ್ಲಿ ಅಡಗಿರುವ ಪರಂಪರೆಯ ನಿಷೇಧವನ್ನು ಒಪ್ಪಿಕೊಳ್ಳಲು, ಅವುಗಳಿಂದ ದೊರೆಯುವ ಆನಂದವನ್ನು ಆಸ್ವಾದಿಸಲು ಸಾಧ್ಯವಾಗುವುದಿಲ್ಲ, ರಾಜನ, ಪುರೋಹಿತನ, ಪುರುಷನ ಮಾತ್ರವಲ್ಲ ಯಾರ ಅಧಿಕಾರವನ್ನಾದರೂ ವಿರೋಧಿಸುವ ಏನೋ ಒಂದಂಶ ಪ್ರತಿ ಕಲೆಯಲ್ಲೂ ಒಳಗೊಂಡಿರುತ್ತದೆ.

ಇಂಡಿಯಾದಲ್ಲಿ ಮಹಿಳೆಯರ ಮೇಲೆ ಹಲವು ವಿಧದ ಅಕ್ರಮ, ದೌರ್ಜನ್ಯಗಳು ನಡೆಯುತ್ತಿರುವಂತೆಯೇ ಒಂದೆರಡು ವರ್ಷಗಳ ಹಿಂದೆ ಕಾಶ್ಮೀರದ ಶ್ರೀನಗರದಿಂದ, "ಅವರು ಪದ್ಯ ಹಾಡಬಾರದು" ಎಂದು ಇಸ್ಲಾಂ ಧರ್ಮದ ಹೆಸರಿನಲ್ಲಿ ತಡೆಯೊಡ್ಡಲಾಗಿದೆ! ಹಾಡುವುದು ಅನಿಸ್ಲಾಮಿಕವೆಂದು ಗಂಡಸರೊಡನೆ ಹೇಳದವರು ಮಹಿಳೆಯರೊಡನೆ ಹೇಳುತ್ತಿದ್ದರು! ಹೆಣ್ಣು ಮೌನವಾಗಿ, ಶಾಂತವಾಗಿ ಮನೆಯೊಳಗಿದ್ದರೆ ಸಾಕು! ಆಕೆಯ ಶಬ್ದ ಹೊರಗೆ ಕೇಳಿಸಬಾರದು! ಹೇಂಟೆಗಳು (ಹೆಣ್ಣು ಕೋಳಿಗಳು) ಕೂಗಬಾರದು! ಕೂಗಲು ಹುಂಜಗಳಿವೆ!

ಶ್ರೀನಗರದಿಂದ ಬಂದ ಸುದ್ದಿ ಇದಾಗಿತ್ತು.

ಮುಸ್ಲಿಂ ಹೆಣ್ಣು ಮಕ್ಕಳು ಮಾತ್ರವಿರುವ ಕಾಶ್ಮೀರದ ಚಿಕ್ಕ ಸಂಗೀತ ಸಂಘಟನೆಯ ಸದಸ್ಯರು ಸಂಗೀತ ಹಾಡುವುದನ್ನು ನಿಲ್ಲಿಸಿದ್ದಾರೆ. ಪುರುಷರು ಮಾತ್ರವಿರುವ ವೇದಿಕೆಗೆ ಹೆಣ್ಣು ಮಕ್ಕಳೂ ಆಗಮಿಸಿದ್ದರ ವಿರುದ್ಧ ಇಂಟರ್‌ನೆಟ್‌ನಲ್ಲಿ ಭಯೋತ್ಪಾದನೆಯುಂಟಾಗಿತ್ತಂತೆ. ಯಥಾಸ್ಥಿತಿವಾದಿಗಳು ಅವರನ್ನು ಆಕ್ಷೇಪಿಸಿದರೆಂದು ಹೇಳಲಾಗಿತ್ತು. ಧಾರ್ಮಿಕ ವಿದ್ವಾಂಸ ಬಷೀರುದ್ದೀನ್ ಅಹಮದ್ ಎಂಬವರು, 'ಹೆಣ್ಣು ಮಕ್ಕಳು ಸಂಗೀತ ಹಾಡುವುದು ಅನಿಸ್ಲಾಮಿತವಾಗಿದೆ' ಎಂದು ಫತ್ವಾ ಹೊರಡಿಸಿದ್ದಾರೆ.

ಇದರಿಂದಾಗಿ ಹತ್ತನೇ ತರಗತಿಯ ವಿದ್ಯಾರ್ಥಿನಿಯ ರಾಗಿದ್ದ ಹಾಡುಗಾರ್ತಿ ನೋಮಾ ನಸೀರ್, ವಾದ್ಯ ನುಡಿಸುವ ಫರಾಹ್ ದೀಬಾ, ಗಿಟಾರ್ ನುಡಿಸುವ ಅನೀಸಾ ಖಾಲಿದ್ ಎಂಬ ಮೂವರು ಹೆಣ್ಣು ಮಕ್ಕಳು ವೇದಿಕೆಯಿಂದ ಹಿಂದೆ ಸರಿದರು. 2012ರಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಈ ಸಂಘಟನೆ 'ಪ್ರಕಾಶ್' (ಬೆಳಕು) ಹಲವು ಸ್ಪರ್ಧೆಗಳಲ್ಲಿ ಬಹುಮಾನ ಪಡೆದುಕೊಂಡಿದೆ. ಕಾಶ್ಮೀರದ ಅನೇಕ ಜನರು ಈ ಫತ್ವಾದ ವಿರುದ್ಧ ಹೋರಾಡಿದ್ದಾರೆ. ಆಗ ರಾಜ್ಯದ ಮುಖ್ಯಮಂತ್ರಿ ಯಾಗಿದ್ದ ಉಮರ್ ಅಬ್ದುಲ್ಲಾ ಕೂಡಾ ಈ ಹೋರಾಟದಲ್ಲಿ ಭಾಗವಹಿಸಿದ್ದರೆನ್ನಲಾಗಿದೆ.

ಏನನ್ನು ವಿರೋಧಿಸಿದರೂ ಮುಸ್ಲಿಮರು ಸಂಗೀತವನ್ನು ವಿರೋಧಿಸಲಾರರು. ಆ ಧಾರ್ಮಿಕ ಪರಂಪರೆಯ ಆವಿಷ್ಕಾರಗಳಲ್ಲಿ ಹಲವೆಡೆಗಳಲ್ಲಿಯೂ ಪ್ರಾರ್ಥನೆಯ ವೇಳೆ ತಿಳಿಸಲು ಆಜಾನ್ (ಬಾಂಗ್) ಕರೆ ಕೊಡುವಾಗಲೂ ಕೂಡಾ ರಾಗವಾಗಿ ಹೇಳಲಾಗುತ್ತದೆ; ಖುರ್‌ಆನ್ ಓದುವಾಗಲೂ ರಾಗವಾಗಿ ಓದುವುದೂ ಇದೆ. ಖುರ್‌ಆನಿನ ಭಾಷೆಯ ಒಂದು ವಿಶೇಷವೆಂದರೆ ಅದರ ಸಂಗೀತ ಸ್ಪರ್ಶವಾಗಿದೆ.

ಹೆಣ್ಣು ಮಕ್ಕಳ ರಾಗಾಲಾಪನೆಗೆ ಪ್ರವಾದಿ ಮುಹಮ್ಮದರಿಂದ ದೊರೆತ ಪರಿಗಣನೆ ಹೀಗಿದೆ. ಪ್ರವಾದಿಗಳ ಜನ್ಮಸ್ಥಳವಾದ ಮೆಕ್ಕಾದಲ್ಲಿ ಅವರಿಗೆ ಬದುಕು ಅಸಹನೀಯ ವಾದ ಸಂದರ್ಭದಲ್ಲಿ ಅವರು ಪಲಾಯನ ಮಾಡಿ (ಹಿಜಿರಾ ಕ್ರಿ.ಶ. 622) ಮದೀನಾ ತಲುಪಿದರು. ಆಗ ಅಲ್ಲಿನ ಊರ ಹೆಣ್ಣು ಮಕ್ಕಳು ಚರ್ಮದ ವಾದ್ಯಗಳನ್ನು ನುಡಿಸುತ್ತಾ ಮನೋಹರವಾದ ಸಂಗೀತ ಆಲಾಪನೆ ಮಾಡುತ್ತಾ ಅವರನ್ನು ಸ್ವಾಗತಿಸಿದರು. 'ನೋಡಿ, ನಮ್ಮ ಮೇಲ್ಭಾಗದಲ್ಲಿ ಪೂರ್ಣ ಚಂದ್ರನು ಉದಯಿಸಿದ್ದಾನೆ' ಎಂದು ಅವರು ಮಾಧುರ್ಯ ಪೂರ್ಣವಾಗಿ ಹಾಡಿದರು. ಅದರಿಂದ ಪ್ರವಾದಿಗಳು ಸಂತುಷ್ಟರಾಗಿ ಹಾಡಿಗೆ ಒಪ್ಪಿಗೆ ನೀಡಿದರು. ಪ್ರವಾದಿಗಳ ಆ ಆಗಮನದ ನೆನಪಿಗಾಗಿ ಇಂದಿಗೂ ಪ್ರವಾದಿಗಳ ಹುಟ್ಟುಹಬ್ಬದ ದಿನ (ರಬ್ಬಿಯುಲ್ ಅವ್ವಲ್ 12ನೇ ದಿನ) ಮುಸ್ಲಿಮರು ನೆಬಿ ಕೀರ್ತನೆಯನ್ನು ಹಾಡುತ್ತಾರೆ.

ತಮ್ಮ ರೂಪಲಾವಣ್ಯದಿಂದ ಮನುಷ್ಯ ಚರಿತ್ರೆಯಲ್ಲಿ ಸ್ಥಾನ ಪಡೆದ (ಮರಣ -735) ಅಪೂರ್ವ ಮಹಿಳೆಯರಲ್ಲಿ ಓರ್ವರಾದ ಸುಕೈನ ಅವರು ಸಂಗೀತಕ್ಕೆ ನೀಡಿದ ನಂಬಲಾಸಾಧ್ಯವಾದ ಪ್ರೋತ್ಸಾಹದ ಕಾರಣಕ್ಕಾಗಿಯೂ ಅವರನ್ನು ಹಾಡಿ ಹೊಗಳಲಾಗುತ್ತದೆ. ಈ ಅಪ್ರತಿಮ ಸುಂದರಿಯಾದ, ಹೆಸರುವಾಸಿಯಾದ ಮಹಿಳೆ ಪ್ರವಾದಿಯ ಮಗಳು ಬೀಬಿ ಫಾತಿಮ್ಮ ಅವರ ಮಗ ಇಮಾಂ ಹುಸೈನ್ ಅವರ ಮಗಳಾಗಿದ್ದಾರೆ. ಪ್ರವಾದಿಯವರ ಮೊಮ್ಮಗನ ಮಗಳು!

ಮುಸ್ಲಿಂ ಸಮುದಾಯದ ಚರಿತ್ರೆಯಲ್ಲಿ ಕೆಲವು ಸಂದರ್ಭಗಳಲ್ಲಿ ನಾವು ಕಾಣುತ್ತಿರುವ ಸಂಗೀತ ವಿರೋಧ, ರಾಜರುಗಳು ಮತ್ತು ಪುರೋಹಿತರುಗಳು ತಮ್ಮೊಳಗಿದ್ದ ಅಪವಿತ್ರ ಮೈತ್ರಿಯಲ್ಲಿ ಹುಟ್ಟಿದ ಸಂತತಿಯಾಗಿದೆ. ಸಂತೋಷ, ಆವಿಷ್ಕಾರ, ಸ್ವಾತಂತ್ರ್ಯ ಮೊದಲಾದುವುಗಳನ್ನು ತುಳಿದಿಡುವುದು ಈ ಎರಡು ಗುಂಪುಗಳಿಗೂ ಆಗತ್ಯ ತಾನೇ?

ಮೊಗಲ್ ಚಕ್ರವರ್ತಿ ಔರಂಗಜೇಬನ ಸಂಗೀತ ವಿರೋಧ ಇತಿಹಾಸ ಪ್ರಸಿದ್ಧವಾಗಿದೆ. ಅದರ ಕುರಿತು ಒಂದು ಕಥೆ ಇದೆ.

ಒಂದು ಶುಕ್ರವಾರ ಮಧ್ಯಾಹ್ನ ಚಕ್ರವರ್ತಿ ನಮಾಜ್‌ಗೆ ಹೋ[...] ಮಸೀದಿಯ ಸಮೀಪ ಜನರು ಸೇರಿದ್ದನ್ನು ಕಂಡು, "ಅಲ್ಲಿ ಯ[...] ಸೇರಿದ್ದಾರೆ?" ಎಂದು ತಮ್ಮೊಡನಿದ್ದವರೊಡನೆ ಕೇಳಿದನು. ಕೊಂಚ ಸ[...] ಓರ್ವ ಸ್ನೇಹಿತ,

"ಬಾದಶಹರೇ, ಅವರು ತಮ್ಮ ಆಡಳಿತದಲ್ಲಿ ಮೃತಪಟ್ಟ ಸಂ[...] ಗೋರಿಯಲ್ಲಿ ದಫನ್ ಮಾಡುತ್ತಾರೆ" ಎಂದನು.

ಔರಂಗಜೇಬನು ನಕ್ಕನು. ಬಳಿಕ,

"ಬಹಳ ಒಳ್ಳೆಯದಾಯಿತು. ಅದನ್ನು 24 ಅಡಿ ಆಳದಲ್ಲಿ [...] ಮಾಡಲು ನಾನು ಆಜ್ಞೆ ನೀಡಿದ್ದೇನೆಂದು ಹೇಳಿರಿ" ಎಂದನು.

ಮತ ಮೌಲಿಕವಾದ, ಅದರ ಸೃಷ್ಟಿಯಾದ ಮತರಾಷ್ಟ್ರವಾದದ [...] ನಿಜವಾಗಿ ಧರ್ಮವಲ್ಲ; ರಾಜಕಾರಣವಾಗಿದೆ. ಭಕ್ತಿಯಲ್ಲ, ಅಧಿಕಾ[...] ಅದು ಕುಟುಂಬದಲ್ಲಿಯೂ, ಸಮಾಜದಲ್ಲಿಯೂ, ದೇಶದಲ್ಲಿಯೂ [...] ಪಡೆಯಲು ಪುರೋಹಿತರು ಮಾಡಿದ ಕುತಂತ್ರವಾಗಿದೆ. ಅದಕ್ಕೆ [...] ಹೆಸರಿನಲ್ಲಿಯೇ ಧರ್ಮ ವಿರುದ್ಧವಾಗಿ ಮುಂದುವರಿಯಲು ಸಾಧ್ಯ[...]

ಧಾರ್ಮಿಕ ಗ್ರಂಥವಾದ ಖುರ್‌ಆನ್, ಪ್ರವಾದಿ ವಚನಗಳಾದ [...] ಮುಂತಾದವುಗಳಿಗೆ ವಿರುದ್ಧವಾಗಿ ಅಫಘಾನಿಸ್ತಾನದಲ್ಲಿ ಸ್ತ್ರೀಯರಿಗೆ [...] ಉದ್ಯೋಗ, ಸಾಮಾಜಿಕ ಬದುಕುಗಳೆಲ್ಲವನ್ನೂ 'ಹರಾಂ' [...] ನಿಷೇಧಿಸಲಾಯಿತು. ಮೇಲೆ ಹೇಳಿದ ವಿಷಯಗಳಿಗೆ ಇದು ತಾ[...] ನೀಡಿದ ಸಾಕ್ಷಿಯಾಗಿದೆ.

ನಮ್ಮ ದೇಶದ ಇತ್ತೀಚಿನ ಒಂದು ಉದಾಹರಣೆ ನೋಡಿ. ಆಧುನಿಕತೆಯ ವೇದಿಕೆಯಾದ ನಗರಗಳಲ್ಲಿ ಮಹಿಳಾ ದೌರ್ಜನ್ಯ ನಡೆ[...] ಭಾರತೀಯ ಹಳ್ಳಿಗಳಲ್ಲಿ ಅಂತಹ ದೌರ್ಜನ್ಯ ನಡೆಯುವುದಿಲ್ಲ ಎಂದು ಕೋಮುವಾದಿಗಳು ಹೇಳುತ್ತಿರುತ್ತಾರೆ. ಅವರು ಯಾವ ಇತಿಹಾಸದ ಹೇಳಿಕೆ ನೀಡುತ್ತಾರೋ ಆ ಕಾವ್ಯದ (ಪ್ರತಿ ನಾಯಕ) ನಾಯಕನ [...] ದುಷ್ಟ, ಸಾವಿರ ವರ್ಷಗಳ ಹಿಂದೆಯೇ ಹಳ್ಳಿಗಳಿಂದಲೂ ದೂ[...] ಕಾಡಿನಲ್ಲಿ ಸನ್ಯಾಸಿಯಂತೆ ಬಂದು ಸೀತೆಯನ್ನು ಕದ್ದೊಯ್ದನೆಂಬ ವಿಷ[...] ಮರೆಯುತ್ತಾರೆ. ಹೆಣ್ಣುಬಾಕನಾದ ರಾಕ್ಷಸ ರಾಜನು ಕಾಡಿನಲ್ಲಿ [...] ಸೀತಾಪಹರಣಕ್ಕಿಂತಲೂ ಕಡಿಮೆಯಾದ ದುಷ್ಟತನವಲ್ಲ, ಗಂಡನಾದ ರ[...] ರಾಜನು ಆ ಬಳಿಕ ನಗರ ಮಧ್ಯದಲ್ಲಿ ನಡೆಸಿದ ಸೀತಾ ಪರಿತ್ಯಾಗ [...] ತೋರಿಸಲು ವಾಲ್ಮೀಕಿ ಮಹರ್ಷಿ ಆ ಕಾವ್ಯವನ್ನು ರಚಿಸಿದನೆಂದು [...] ಯೋಚಿಸುತ್ತಾರೆ! ಸ್ತ್ರೀಗೆ ತೋರಿದ ಅನೀತಿಯ ಕುರಿತು ಅವತಾರ [...] ವಿಚಾರಣೆ ಮಾಡಲು ರಾಮಾಯಣ ಹುಟ್ಟಿಕೊಂಡಿತೆಂಬುದನ್ನು [...] ಯೋಚಿಸುತ್ತಾರೆ!

ಇಂದಿನ ಈ ಗಾನಾಲಾಪನೆಯ ನಿಷೇಧ ಮುಖ ಮುಚ್ಚಿಕೊಳ್ಳುವ [...] ಒಂದು ರೂಪಾಂತರವೇ ಆಗಿದೆ. ಹೇಂಟೆ (ಹೆಣ್ಣು ಕೋಳಿ) ಕೂಗ[...] ಸ್ತ್ರೀತ್ವವನ್ನು ಅದೃಶ್ಯತೆಯಲ್ಲೂ, ನಿಶ್ಶಬ್ಧತೆಯಲ್ಲಿಯೂ ಗುಳಿ ತೆಗೆ[...] ಮುಚ್ಚಬೇಕು.

ಯೋಚಿಸಿರಿ, ಎಲ್ಲಾ ವಿಭಾಗಗಳಲ್ಲೂ ಮತ ಮೌಲಿಕವಾದದ [...] ಯಜ್ಞಪಶು (ವಿಕ್ಟಿಂ) ಸ್ವಂತ ಸಮುದಾಯದ ಸ್ತ್ರೀಯೇ ಆಗಿರುತ್ತಾಳೆ.


■ ಎಂ.ಎನ್. ಕಾ[...]

ಮಾತೃಭೂಮಿ: ಫೆಬ್ರವರಿ [...]

ಅನುವಾದ: ಡಾ. ಸಾರಾ ಅಬ[...]

ನಡುವೆ ಸುಳಿವಾತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ

"ಜಗತ್ತಿನ ಎಲ್ಲ ಆನಂದಗಳ ಮೂಲಾಧಾರ
ಹೆಣ್ಣಿನ ತೊಡೆಯ ಸಂಧಿ"
- ವಾತ್ಸಾಯನ ಕಾಮಸೂತ್ರ



ಮೂಜಗದ
ಅನಂತ ಅನಿರ್ಬಂಧಿತ ಆನಂದದ
ಹಕ್ಕುದಾರರೆ
ತುಂಡು ಭೂಮಿಯಲ್ಲಿ
ತುಂಡುಗುಪ್ಪು ಹೊಡೆದು
ತುರಾಯಿ ನೆಟ್ಟವರೆ
ಹೆಣ್ಣೆಂದರೆ ಯೋನಿ ತುಂಡು
ಪರಮಾನಂದದ ಅನಿರ್ವಚನೀಯ
ಅನುಗಾಲದ ಸುರತಕ್ಕೆ
ಯೋನಿ ಹೊಕ್ಕಿರಿ
ಅಲ್ಲಿಂದಲೇ ಹೊರಬಂದು
ಇಳೆಗೆ ಮೈ ಚೆಲ್ಲಿದ ಯೋನಿಜರೇ
ಯೋನಿಗೆ ಕವಚ ಬಿಗಿದಿರಿ.
ದುಂಡನೆಯ ಭೂಮಿಗೆ
ದುಂಬಾಲು ಬಿದ್ದು ಗೆಲ್ಲುತ್ತ
ದಂಡು ಕಟ್ಟಿದವರೆ
ಹೆಣ್ಣೆಂದರೆ ಮೊಲೆ ಚೆಂಡು
ಮೀಸೆಯ ಮೋಜವಾನಿಕೆಗೆ
ಮೊಲೆಯ ಮದ್ದಿರಿ
ಮೊಲೆ ಹಾಲ ಉಂಡು.
ಮಜಬೂತಾಗಿ ಬೆಳೆದ ಮನುಜರೇ
ಮೊಲೆಯ ಕತ್ತರಿಸಿದಿರಿ.
ಹಳ್ಳಕೊಳ್ಳದ ಹೊಕ್ಕು
ರಹದಾರಿ ನಿರ್ಮಿಸಿದ
ಹಾದಿಕಾರರೆ
ಹೆಣ್ಣೆಂದರೆ ಹೊಕ್ಕಳ ಹೊಂಡ
ಹೊಕ್ಕಳಲಿ ಬೆರಳಾಡಿಸಿ
ಹುದುಗಿ ಹಿಗ್ಗಿ
ಹೊಕ್ಕಳ ಬೆಸೆವ ಹೊಣೆಗಾರರೇ
ಹೊಕ್ಕಳ ಬಳ್ಳಿಯ ಮಾರಾಟಕಿಟ್ಟಿರಿ.
ಹೊಟ್ಟೆಯಲ್ಲೇ ಕ್ರೀಡಿಸಿ
ಬೀಜ ಬಿತ್ತುವ
ವಂಶ ವಾರಸುದಾರರೆ
ಹೆಣ್ಣೆಂದರೆ ಬಸಿರ ತೊಟ್ಟಿಲು
ಬಸಿರಲ್ಲೇ ಮೊಳೆತು
ಬಸಿರಲ್ಲೇ ಬಲಿತು
ಬಸಿರ ಹೊರೆವ ಬಲವಂತರೆ
ಬಸಿರ ಭ್ರೂಣಕ್ಕೆ ಸಾವಕೊಟ್ಟಿರಿ.
ಹೆಣ್ಣೆಂದರೆ ಇದಾವುದೂ ಅಲ್ಲ
ನಡುವೆ ಸುಳಿವಾತ್ಮ
ಹೆಣ್ಣೂ ಅಲ್ಲ ಗಂಡೂ ಅಲ್ಲ
ಹೆಣ್ಣೆಂದರೆ ಚಲನ ತತ್ವ
ಹೆಣ್ಣೆಂದರೆ ಜಲತತ್ವ
ಹೆಣ್ಣಿಗೀಗ ಅಸ್ಮಿತೆಯ ಹುಡುಕಾಟ.
ಗಂಡಿಗೊ ಕೈ ಮೀರುವ ಶಂಕೆ
ಹರಿವಿಗೊಂದು ಕಡಿವಾಣ ಅತ್ಯಾಚಾರ
ಬಯಸದೆ ಬಸಿವ ವೀರ್ಯಕ್ಕೆ
ಬೊಗಸೆಯೊಡ್ಡಲೆ?
ಅಟ್ಟಾಡಿಸಿ ನೆಕ್ಕುವ ಅಪತೃಷ್ಣೆಗೆ
ಕೊರಳೊಡ್ಡಲೆ?
ಕಣ್ಣುಚ್ಚಿ ಬೇಡುವೆ
ಕಳ್ಳ ಹೆಜ್ಜೆಯು ತೆವಲು ಹೆಪ್ಪಾಗದಿರಲಿ
ಹೆಣ್ಣ ಗರ್ಭದಲಿ ಗೂಡು ಕಟ್ಟದಿರಲಿ
ಎಲ್ಲೆಂದರಲ್ಲಿ ಸುರಿವ
ಶಿಶ್ನಕ್ಕೊಂದು ಬೀಗ ಜಡೆಯಬೇಕಿದೆ.



■ ಮಾಧವಿ ಭಂಡಾರಿ ಕೆರೆಕೋಣ

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಜ್ಯೋತಿಷ್ಯದ ಹುಟ್ಟು

ಪುರಾತನ ಕಾಲದಿಂದಲೂ ನಮ್ಮ ಸಂಸ್ಕೃತಿ ಮತ್ತು ಜದ ಇತಿಹಾಸದಲ್ಲಿ ಶಕುನ ಮತ್ತು ಪ್ರವಾದಿಸುವುದರ ಷ್ಯಗಳನ್ನು ಕಾಣುವುದರ) ಬಗ್ಗೆ ಬಹಳ ಗಂಭೀರವಾದ ೞಬಗಳಿವೆ. ಇವೆಲ್ಲಾ ಮೂಢನಂಬಿಕೆ ಎಂದು ಗಳನ್ನು ಪಕ್ಕಕ್ಕೆ ಸಂಪೂರ್ಣವಾಗಿ ತಳ್ಳಿ ಹಾಕುವ ಮುನ್ನ ಗಮನಿಸಲೇಬೇಕಾದಂತಹ ಹತ್ತು ಹಲವು ಅಂಶಗಳಿವೆ.

ಜ್ಯೋತಿಷ್ಯ ಮತ್ತು ಜ್ಯೋತಿರ್ಶಾಸ್ತ್ರಗಳ ನಡುವಿನ ವ್ಯತ್ಯಾಸ

ದಿನಬೆಳಗಾದರೆ ಟಿವಿಗಳಲ್ಲಿ ಕುಳಿತುಕೊಂಡು ಜ್ಯೋತಿಷ್ಯ ಪರಿಹಾರಗಳನ್ನು ಹೇಳುತ್ತಾ ಜನರ ತಲೆ ಕೆಡಿಸುತ್ತಾ ಆತ್ಮವಿಶ್ವಾಸವನ್ನು ಕುಗ್ಗಿಸುವಂತಹ, ಎಲ್ಲದಕ್ಕೂ ಚಾರಗಳೇ ಕಾರಣ, ನೀನೇನೇ ಮಾಡಿದರೂ ನಿನಗಷ್ಟೇ ಇತ್ಯಾದಿಗಳಾಗಿ ಜನರ ಆತ್ಮಸ್ಥೈರ್ಯವನ್ನು ಕುಗ್ಗಿಸುತ್ತಾ ವುದ್ಯಾವುದೋ ಇಲ್ಲ ಸಲ್ಲದ ದೇವರ ಹೆಸರನ್ನು ಕೊಂಡು ಅದಕ್ಕೆ ನಡೆದುಕೊಳ್ಳುವುದಕ್ಕೆ ಪ್ರೇರೇಪಿಸು ಮೂಲಕ ಆಸೆ ಮತ್ತು ಭಯಗಳನ್ನು ಹುಟ್ಟುಹಾಕುವ ಸಬಿಗಳು ಜ್ಯೋತಿರ್ಶಾಸ್ತ್ರವನ್ನು ಜ್ಯೋತಿಷ್ಯದೊಂದಿಗೆ ಸುತ್ತಾರೆ. ವಾಸ್ತವವಾಗಿ ಗ್ರಹ, ತಾರೆ, ವಿಶ್ವದ ಮತ್ತು ೞಳದ ವಿದ್ಯಮಾನಗಳನ್ನು, ವೀಕ್ಷಣೆಗಳನ್ನು ಬದ್ಧವಾಗಿ ನಡೆಸಿದಂತಹ ಅಧ್ಯಯನಗಳು ಮತ್ತು ಹ ಅಧ್ಯಯನಗಳ ದಾಖಲುಗಳು ಜ್ಯೋತಿರ್ಶಾಸ್ತ್ರ ವೆ. ಗ್ರಹಗಳ ಚಲನವಲನಗಳನ್ನು, ಅವುಗಳ ಗತಿಗಳ ಚಾರಗಳನ್ನು, ತಾರಾಮಂಡಲಗಳ ರಚನೆಗಳನ್ನು, ಅವುಗಳ ತ್ರಗಳನ್ನು ಅಧ್ಯಯನ ಮಾಡಿದಂತಹ ವಿಷಯಗಳಿಗೂ ವಿವರಗಳು ಮತ್ತು ಅಧ್ಯಯನಗಳು ನಿಜಕ್ಕೂ ಅಚ್ಚರಿ ಹುಟ್ಟಿಸುವಂತವು. ಅವುಗಳ ಬಗ್ಗೆ ಮುಂದೆ ತಿಳಿಯೋಣ.

ಆದರೆ, ಯಾವುದೇ ಗ್ರಹಗಳ ಚಲನೆಗಳಾಗಲಿ, ನಕ್ಷತ್ರಗಳ ಇರುವುಗಳಾಗಲಿ ಯಾವುದೇ ರೀತಿಯಲ್ಲಿ ಪ್ರಭಾವವನ್ನು ಬೀರುವುದಿಲ್ಲ. ಸೂರ್ಯ ಮತ್ತು ಚಂದ್ರವೆರಡೂ ಇದಕ್ಕೆ ಅಪವಾದ. ಅವು ಭೂಮಿಗೆ ಸಮೀಪವಿರುವ ನಕ್ಷತ್ರ ಮತ್ತು ಉಪಗ್ರಹವಾದ್ದರಿಂದ ವಾತಾವರಣದ ಮೇಲೆ ತಮ್ಮ ಪ್ರಭಾವವನ್ನು ಬೀರುತ್ತವೆ ಹಾಗೂ ಹವಾಮಾನದ ವ್ಯತ್ಯಯಗಳಲ್ಲಿ ತಮ್ಮ ಭಾಗವಹಿಸುವಿಕೆಯನ್ನು ಸ್ಪಷ್ಟಗೊಳಿಸುತ್ತವೆ.

ಅದಲ್ಲದೇ ಸೂರ್ಯ ಮತ್ತು ಚಂದ್ರರ ಪರಿಣಾಮಗಳೂ ಕೂಡ ಜೀವನದ ಆಗುಹೋಗುಗಳ ಮೇಲೆ ಯಾವ ರೀತಿಯಲ್ಲೂ ಆಗುವುದಿಲ್ಲ. ಪರಿಸರ, ಹವಾಮಾನ, ಋತುಮಾನ, ಕಾಲಮಾನದ ಪ್ರಭಾವಗಳು ಮನುಷ್ಯನ ಮೇಲೆ ಭೌತಿಕವಾಗಿ ಏನಾಗುವವೋ ಅಷ್ಟೇ ನಿಶ್ಚಿತ ಮತ್ತು ಖಚಿತ. ಇನ್ನುಳಿದಂತೆ ಭೌತಿಕವಾಗಿ ಆಗುವಂತಹ ಪರಿಣಾಮಗಳಿಂದ ಮಾನಸಿಕವಾಗಿಯೂ ಏರುಪೇರು ಆಗುವುದು ಮನುಷ್ಯನ ಮಾನಸಿಕ ಸಾಮರ್ಥ್ಯ ಮತ್ತು ದೌರ್ಬಲ್ಯಗಳ ಮೇಲೆ ಅವಲಂಬಿತವಾಗಿರುವುದೇ ಹೊರತು ಅವುಗಳ ಶಕ್ತಿ ಸಾಮರ್ಥ್ಯಗಳೇನೂ ಅಲ್ಲ.


ಪ್ರಕೃತಿಯಲ್ಲಿನ ವ್ಯತ್ಯಾಸಗಳು

ಪ್ರಕೃತಿಯೊಂದಿಗೆ ನೇರ ಸಂಬಂಧವಿರಿಸಿಕೊಂಡಿದ್ದ ನಮ್ಮ ಪೂರ್ವಜರು ಋತುಮಾನಗಳಲ್ಲಿ, ವಿವಿಧ ಕಾಲಮಾನಗಳಲ್ಲಿ ಘಟಿಸುತ್ತಿದ್ದ ವಿದ್ಯಮಾನಗಳನ್ನು ಗಮನಿಸುತ್ತಿದ್ದರು. ತಮ್ಮಲ್ಲೂ ಮತ್ತು ಪ್ರಕೃತಿಯಲ್ಲಿಯೂ ಸಾದೃಶ್ಯವನ್ನು ಕಂಡುಕೊಂಡಿದ್ದ ಅವರು ಪ್ರಕೃತಿಯಲ್ಲಾಗುತ್ತಿದ್ದ ಏರುಪೇರನ್ನು ನೋಡುತ್ತಾ ಅವುಗಳಿಗೂ ಮತ್ತು ಗ್ರಹ, ತಾರೆಗಳ ಚಲನವಲನಗಳಿಗೆ ಸಂಬಂಧ ಕಲ್ಪಿಸುತ್ತಾ ಅದನ್ನು ಒಂದು ಹಂತಕ್ಕೆ ತಮ್ಮ ಇತ್ಯಾದಿಗಳು ತಮಗೆ ಸಂಭವಿಸುವೆಂದರೆ, ಇನ್ನು ಇದಕ್ಕಿಂತ ಮಿಗಿಲಾಗಿರುವ ಗ್ರಹಗಳು, ನಕ್ಷತ್ರಗಳು ಬದಲಾಗುವ ಸ್ಥಿತಿಗತಿಗಳು ಮತ್ತು ಚಲನವಲನಗಳು ಇನ್ನೆಷ್ಟು ತಮ್ಮ ಮೇಲೆ ಪ್ರಭಾವ ಬೀರಬಲ್ಲದು ಎಂಬಂತಹ ಒಂದು ಗಂಭೀರ ಕುತೂಹಲ. ಇಂತಹ ಕುತೂಹಲ ಮತ್ತು ಭಯಗಳಿಂದಾಗಿಯೇ ಖಗೋಳಶಾಸ್ತ್ರದ ವಿಜ್ಞಾನ ವಿಭಾಗವನ್ನು ಮಾನವನ ಸ್ಥಿತಿ ಗತಿ, ಬದುಕು ಭವಿಷ್ಯಗಳೊಡನೆಯೂ ಬೆರೆಸಿಬಿಟ್ಟರು. ಅಂತೆಯೇ ಹುಣ್ಣಿಮೆ ಮತ್ತು ಅಮಾವಾಸ್ಯೆಗಳಲ್ಲಿ ಪ್ರಕೃತಿಯಲ್ಲಿ ಉಂಟಾಗುವ ವ್ಯತ್ಯಾಸ ವ್ಯತ್ಯಯಗಳನ್ನೂ ಗಮನಿಸಿ ಮನುಷ್ಯ ಅವುಗಳಿಗೆ ಇನ್ನೂ ಹೆಚ್ಚಿನ ಮಹತ್ವಗಳನ್ನು ನೀಡಿದ. ಹುಣ್ಣಿಮೆಗಳಲ್ಲಿ ಸಾಗರಗಳಲ್ಲಿ ಉಂಟಾಗುವ ಉಬ್ಬರವಾಗಲಿ, ಅದೇ ಹುಣ್ಣಿಮೆ ಮತ್ತು ಅಮಾವಾಸ್ಯೆಗಳಲ್ಲಿ ಪ್ರಾಣಿಗಳು ವ್ಯತ್ಯಾಸವಾಗಿ ವರ್ತಿಸುವುದಾಗಲಿ ಅವನ ಗಮನಿಸುವಿಕೆಗೆ ಮತ್ತಷ್ಟು ಗಾಢತೆಯನ್ನೂ ಮತ್ತು ಗಂಭೀರತೆಯನ್ನೂ ತಂದಿತು.


ಹುಣ್ಣಿಮೆಯ ರಾತ್ರಿಯಲ್ಲಿ

ಮನೋರೋಗಿಗಳಿಗೆ, ಚಿತ್ತ ವಿಭ್ರಮೆಗೊಳಗಾಗಿರುವವರು ಹುಣ್ಣಿಮೆ ಅಮಾವಾಸ್ಯೆಗಳಲ್ಲಿ ಮತ್ತಷ್ಟು ಕೆರಳುತ್ತಾರೆ ಎಂಬ ನಂಬಿಕೆ ಪ್ರಚಲಿತದಲ್ಲಿದೆ. ಇದಕ್ಕೆ ಇಂಬು ಕೊಡುವಂತೆ ಅನೇಕ ಕಥೆಗಳು, ಸಿನಿಮಾಗಳು ಮತ್ತು ಜಾನಪದ ನಂಬುಗೆಗಳು ಉದಾಹರಣೆಗಳನ್ನು ನೀಡುತ್ತವೆ. ಹುಣ್ಣಿಮೆ ಮತ್ತು ಅಮಾವಾಸ್ಯೆಗಳಲ್ಲಿ ದೆವ್ವಗಳು ಇರುತ್ತವೆ ಎಂದು ಪಾಪದವರು ನಂಬಿದರೆ, ಹುಣ್ಣಿಮೆಗಳಲ್ಲಿ ಸಕಾರಾತ್ಮಕ ಶಕ್ತಿಯೂ, ಅಮಾವಾಸ್ಯೆಗಳಲ್ಲಿ ನಕಾರಾತ್ಮಕ ಶಕ್ತಿಯೂ ಉದ್ದೀಪನಗೊಳ್ಳುತ್ತವೆ ಎಂದು ನಮ್ಮ ಪೀಳಿಗೆಯ ನವ ಆಧ್ಯಾತ್ಮಿಕ ವೈಜ್ಞಾನಿಕ ವಿಶ್ಲೇಷಕರೂ ಭೌತ ವಿಜ್ಞಾನದ ತರಂಗವಿಜ್ಞಾನವನ್ನು, ಶಕ್ತಿವಿಜ್ಞಾನ, ಅಯಸ್ಕಾಂತೀಯ ಕಾಂತವಿಜ್ಞಾನವನ್ನು ಮುಂದಿಟ್ಟುಕೊಂಡು ನಿರೂಪಿಸುವ ಉದ್ದೇಶಗಳು ಜನಪರವಾಗಿಯೋ ಅಥವಾ ವಿಕಾಸಮುಖಿಯಾಗಿಯೋ ಇರಬೇಕೆಂದಿಲ್ಲ, ಅದು ಒಂದು ಅಸ್ತ್ರದಂತೆ. ಯಾರ ಕೈಯಲ್ಲಿ ಇರುತ್ತದೋ ಆತ ತನ್ನ ಕೌಶಲ್ಯ ಮತ್ತು ಬುದ್ಧಿವಂತಿಕೆಯಿಂದ (ಕಿಲಾಡಿತನದಿಂದ) ತನ್ನ ಎದುರಾಳಿಯನ್ನು ಇರಿಯಲು ಉಪಯೋಗಿಸುತ್ತಾನೆ. ತನ್ನ ತಾನು ಗೆಲ್ಲಿಸಿಕೊಳ್ಳುವುದೇ ತರ್ಕದ ಒಂದೇ ಉದ್ದೇಶ. ಅದರ ಸರಿ ಮತ್ತು ತಪ್ಪುಗಳಲ್ಲಿ ಯಥಾರ್ಥತೆ ಇರುವುದಿಲ್ಲ, ಆದರೆ ರ್‍ಯಾಶನಲ್ ಅಥವಾ ರ್‍ಯಾಡಿಕಲ್ (ವೈಚಾರಿಕತೆ, ವಸ್ತು ನಿಷ್ಠತೆ, ವಾಸ್ತವತೆ) ಇತ್ಯಾದಿಗಳಿಗೆ ತರ್ಕ ಅಥವಾ ಲಾಜಿಕ್ ಎಂಬುದನ್ನು ಸಾಮಾನ್ಯ ಭಾಷೆಯಲ್ಲಿ ಉಪಯೋಗಿಸುತ್ತಾರೆ. ಆದರೆ ತರ್ಕ ಎಂಬುದು ನಕಾರಾತ್ಮಕವಾದದ್ದು, ಅದು ಎಂದಿಗೂ ವಸ್ತುನಿಷ್ಠವಾಗಿರುವುದಿಲ್ಲ, ಇಂತಹ ತರ್ಕವಾದದಲ್ಲಿ ಪಾರಂಗತರಾಗಿರುವಂತವರು ಕೆಲವು ಸೂಕ್ಷ್ಮತೆಗಳನ್ನು ಅರಿಯದೇ, ಸಂವೇದನೆಗಳಿಗೆ ತೆರೆದುಕೊಳ್ಳದೇ ತಾವು ಸರಿ ಎಂದು ಅಂದುಕೊಂಡಿರುವುದನ್ನು ಸಾಧಿಸಲು ವಾದಿಸುತ್ತಿರುತ್ತಾರೆ. ಹೇಗೆ ವಾದದ ಗುರಿ ಎದುರಾಳಿಯ ಬಾಯಿಯನ್ನು ಮುಚ್ಚಿಸುವುದಾಗಿರುತ್ತದೋ ಹಾಗೆಯೇ ತರ್ಕದ ಉದ್ದೇಶ ತನ್ನ ತಾನು ಗೆಲ್ಲಿಸಿಕೊಳ್ಳುವುದೇ ಆಗಿರುತ್ತದೆ.

ಈ ತರ್ಕಗಳನ್ನು ಮೀರಿ, ವಿವರಣೆ, ವಿಶ್ಲೇಷಣೆಗಳನ್ನು ಮೀರಿ ಪ್ರಕೃತಿಯಲ್ಲಿ ಒಂದು ಅತ್ಯಂತ ಮಹತ್ತರವಾದ, ಸತ್ವಶಾಲಿಯಾಗಿರುವಂತಹ ಗುಣವೊಂದಿದೆ. ಅದೇ ಪ್ರಕೃತಿಯ ವಿಸ್ಮಯಕಾರಿ ಶಕ್ತಿಗಳನ್ನು ತನ್ನಲ್ಲಿ ತನಗೇ ಗೊತ್ತಿಲ್ಲದಂತೆ ಉಪಯೋಗಿಸಿಕೊಂಡು ಬಾಳುವುದು. ಅದೇ ಸಹಜವಾದಂತಹ ಚತುರತೆಯನ್ನು (ಕಿಲಾಡಿತನ ಅಲ್ಲ) ಹೊಂದಿರುವುದು. ಅದೇ ಭೂತಕಾಲದ ಭಾರ ಮತ್ತು ಭವಿಷ್ಯತ್ತುಗಳ ಭಯವಿಲ್ಲದೇ ವರ್ತಮಾನದಲ್ಲಿ ನಿರಾತಂಕವಾಗಿ ಬದುಕಿ ಬಾಳುವುದು. ನಾಳೆಯನ್ನು ನಾಳೆಯಾಗಿ ಕಾಣದೇ ಇಂದಿನ ಇಂದು-ವನ್ನೇ ನಾಳೆಯೊಳಗೆ ಇಂದಿನ ದಿನ ಅಥವಾ ಈ ಗಳಿಗೆಯಾಗಿಯೇ ವಿಸ್ತರಿಸಿಕೊಳ್ಳುವುದು. ಅದೇನು ಗೊತ್ತೇ? ಅಂತಹ ಪವಿತ್ರವಾದ, ಬಹಳ ಮೌಲ್ಯಾಧಾರಿತವಾದ, ಉನ್ನತವಾದ ಗುಣವೆಂದರೆ 'ಮುಗ್ಧತೆ'. ಪ್ರಾಮಾಣಿಕವಾದ ಮುಗ್ಧತೆ. ತರ್ಕ, ವಿಶ್ಲೇಷಣೆ, ವಿವರಣೆ,







ಷ್ಯನ ಆಗುಹೋಗುಗಳಿಗೆ ಯಾವ ಸಂಬಂಧಗಳೂ ಅವುಗಳ ಅಧ್ಯಯನದಿಂದ ಸೂರ್ಯೋದಯ, ರ್ಯಾಸ್ತಮಾನ, ಚಂದ್ರೋದಯ, ಚಂದ್ರನ ಬೆಳವಣಿಗೆ, ಣ್ಣಿಮೆ, ಅಮಾವಾಸ್ಯೆಗಳು, ಗ್ರಹಣಗಳು ಇವುಗಳನ್ನು ಯುವುದು ಸಾಧ್ಯವಾಗುತ್ತದೆ. ಆಯಾ ಋತುಮಾನಗಳಲ್ಲಿ ವ ನಕ್ಷತ್ರಗಳು ಮತ್ತು ಇತರ ಆಕಾಶಕಾಯಗಳನ್ನು ತಿಟ್ಟುಕೊಂಡು, ಮಳೆ, ಗಾಳಿ, ಬಿಸಿಲು ಇತ್ಯಾದಿಗಳ ಮಾನಗಳ ಸ್ಥಿತಿ ಮತ್ತು ಪರಿಸ್ಥಿತಿಗಳನ್ನು ಅಧ್ಯಯನ ಸುತ್ತಾ, ಗುರುತಿಗಾಗಿ ಹೆಸರಿಸುತ್ತಾ ಸಂಬಂಧಗಳನ್ನು ದ್ದರು. ರಾಶಿ ಚಕ್ರಗಳನ್ನು ಗುರುತಿಸಿದ ಮೇಲೂ ಮುಂದುವರಿದಿತ್ತು, ಹಾಗೆಯೇ ಅವು ಕೃಷಿಗೆ ಹೆಚ್ಚು ಯುಕವೂ ಆಗಿತ್ತು, ಆದರೆ ಅವು ಯಾವುದೇ ರೀತಿಯಲ್ಲಿ ಷ್ಯನ ಆಗುಹೋಗುಗಳಿಗೆ ಸಂಬಂಧಪಟ್ಟಿದ್ದೇ ಅಲ್ಲ. ಸ ಏರಿಳಿತಗಳಿಂದ ಹುಣ್ಣಿಮೆ ಅಮಾವಾಸ್ಯೆಗಳ ದಿನಗಳ ಚಾರಗಳನ್ನು ಹಾಕಿದಂತೆ ರಾಶಿಚಕ್ರ, ನಕ್ಷತ್ರ ಪುಂಜಗಳನ್ನೂ ಚಿಸಿ ಕಾಲಮಾನವನ್ನೋ, ಋತುಮಾನವನ್ನೋ ಸುತ್ತಿದ್ದರು. ಆದರೆ ಅವುಗಳ ಪ್ರಭಾವವೆಂಬಂತಾಗಲಿ, ಗಳ ಚಲನವಲನಗಳಿಂದಾಗಲಿ ಯಾವುದೇ ಒಂದು ವಿಸುತ್ತವೆ ಎಂದಾಗಲಿ ಏನೂ ಇಲ್ಲ, ಆದರೆ, ಮಾನಗಳಲ್ಲಿ, ಹವಾಮಾನ ಮತ್ತು ಪರಿಸರದಲ್ಲಿ ಗುವ ಬದಲಾವಣೆಗಳಿಂದ, ದೊರಕುವ ಗಳಿಂದ ಧಾರಾಳ ಮಳೆ ಸುರಿಯುವ, ಮಳೆ ಬೀಳದೇ ಗುವ, ಚಂಡಮಾರುತ ಬೀಸುವ, ರಣಬಿಸಿಲು ಸುಡುವ, ು ವಾತಾವರಣ ಇತ್ಯಾದಿಗಳ ಮುನ್ಸೂಚನೆಗಳನ್ನು ಸಂತಹ ವೀಕ್ಷಣಾನುಭವ ನಮ್ಮ ಪೂರ್ವಿಕರಲ್ಲಿತ್ತು. ಸಂಗೋಲಿ ಓಟ್ಟು ಚದುರಿದಂತಹ ಮೋಡಗಳೋ, ು ಗುದ್ದುಗಳಿರುವಂತಹ ಗಾಢವಾದ ಮೋಡಗಳೋ, ಯ ಪದರವಿರುವಂತಹ ಮೋಡಗಳೋ, ಸಾಲು ಗಿ ಮೂಡಿರುವ ಪುಟ್ಟಪುಟ್ಟ ಮೋಡಗಳ ಗಳೋ; ಇಂಥವನ್ನೆಲ್ಲಾ ನೋಡುತ್ತಾ ವಾತಾವರಣದಲ್ಲಿ ಸ ಹವಾಮಾನವಿರುವುದು ಎಂಬುದನ್ನು ಕಂಡು ಸ್ಸಿದ್ದರು. ಪೂರ್ವಜರಲ್ಲಿ ಇದ್ದಂತಹ ಇವುಗಳ ಮೇಲೂ ಆರೋಪಿಸಿಕೊಂಡರು.

ಖಂಡಿತವಾಗಿಯೂ ಅವರ ಅಧ್ಯಯನ ಮೂಲ ವೀಕ್ಷಣೆ, ಗಮನಿಸುವಿಕೆ ಮತ್ತು ಸ್ಮರಣೆ ಮಾತ್ರವೇ ಆಗಿದ್ದು ಅದರಲ್ಲಿ ಮಿತಿಗಳಿದ್ದವು. ಕ್ರಮೇಣ ಅನೇಕ ಸಲಕರಣೆಗಳನ್ನು ಉಪಯೋಗಿಸಲೂ ತೊಡಗಿದ್ದರು. ಆದರೆ ಅವರ ಪ್ರಾರಂಭಿಕ ಕಾರಣಗಳೆಂದರೆ ವೀಕ್ಷಣೆ ಮತ್ತು ಸ್ಮರಣೆ. ಅವರು ಸಂಶೋಧನೆ ಮತ್ತು ಸೃಜನಶೀಲತೆಗಳಲ್ಲಿ ಎಂದಿಗೂ ಹಿಂದೆ ಬಿದ್ದವರಲ್ಲ. ಅವರಿಗೆ ಅಗತ್ಯವೂ ಮತ್ತು ಅವಕಾಶವೂ ಇದ್ದುದರಿಂದ ತಮ್ಮ ಸಂಪೂರ್ಣ ಶಕ್ತಿ ಶ್ರಮ ಮತ್ತು ಸಂಪನ್ಮೂಲಗಳನ್ನು ಬಳಸಿಕೊಂಡರು. ಹಾಗೆಯೇ ಎಷ್ಟೋ ವಿಫಲ ಯತ್ನಗಳೂ ಆಗಿರುತ್ತವೆ.

ಒಮ್ಮೆ ನರಬಲಿ ನೀಡುವ ಬುಡಕಟ್ಟಿನವರ ಕೈಗೆ ಸಿಕ್ಕುಬಿದ್ದ ಸಮುದ್ರಯಾನಿ ಕೊಲಂಬಸ್ ಗ್ರಹಣವೊಂದನ್ನು ತೋರಿಸಿ, ಆ ಜನರ ಹೆದರಿಸಿ ಅಲ್ಲಿಂದ ತಪ್ಪಿಸಿಕೊಂಡನೆಂಬ ಘಟನೆ ಹಲವು ದಾಖಲೆಗಳಲ್ಲಿ ಸಿಗುತ್ತದೆ. ಅದೆಷ್ಟು ನಿಜವೋ ಸುಳ್ಳೋ, ಆದರೆ ಅಂತಹ ಸಾಧ್ಯತೆಗಳನ್ನು ಅಲ್ಲಗಳೆಯಲಾಗುವುದಿಲ್ಲ.


ಭಯ ಮತ್ತು ಕುತೂಹಲ

ಪ್ರಕೃತಿಯಲ್ಲಿ ದಿನನಿತ್ಯವಲ್ಲದೆ ನಡೆಯುವ ವಿದ್ಯಮಾನಗಳಿಗೆ ಜನರು ಕುತೂಹಲಿಗಳೂ, ಭಯಗ್ರಸ್ತರೂ ಆಗಿದ್ದರು. ಅಂತೆಯೇ ಇಲ್ಲೊಂದು ಸೂಕ್ಷ್ಮ ವಿಶ್ಲೇಷಣೆಯನ್ನು ಮಾಡಬೇಕು. ತಮ್ಮ ನಿತ್ಯ ಬದುಕಿನ ದಿನಪ್ರತಿಯ ವ್ಯವಹಾರಗಳಿಗೆ ಹೊರತಾಗಿ ಸಂಭವಿಸುವ ಸಾವು, ನೋವು, ಪ್ರೇಮ, ಯುದ್ಧ ವಿಜಯದಂತಹ ದೊಡ್ಡ ಘಟನೆ ಅಥವಾ ಅಪಘಾತಗಳಲ್ಲೂ ಇಂತಹ ಕುತೂಹಲ ಮತ್ತು ಭಯಗಳನ್ನು ಹೊಂದಿರುತ್ತಿದ್ದರು. ಅಂತಹ ಅಪೇಕ್ಷಿತ, ಅನಪೇಕ್ಷಿತ, ಅನಿರೀಕ್ಷಿತ ಘಟನೆಗಳು ಅವರ ಮುಂದಿನ ಬದುಕಿನ ದಿಕ್ಕು, ಕ್ರಮ, ಸ್ಥಿತಿ, ಗತಿ ಮತ್ತು ರೀತಿಗಳನ್ನೇ ಬದಲಾಯಿಸಿಬಿಡುವಂತಹ ಸಂಗತಿಗಳಾಗಿರುತ್ತಿದ್ದವು. ಹಾಗಾಗಿ ಅವುಗಳ ಕುರಿತೂ ತಮ್ಮ ಭಯಗಳನ್ನು ಮತ್ತು ಕುತೂಹಲಗಳನ್ನು ಇರಿಸಿಕೊಂಡಿದ್ದರು. ಪ್ರಕೃತಿಯಲ್ಲಿ ಉಂಟಾಗುವ ವ್ಯತ್ಯಾಸಗಳಿಂದಾಗಿ ಜ್ವರ, ಕೆಮ್ಮು, ಶೀತ ಯತ್ನ ಮಾಡುತ್ತಾರೆ. ಭೌತಶಾಸ್ತ್ರವು ಅಧ್ಯಾತ್ಮಕ್ಕೆ ನವನವೀನ ವಿಶ್ಲೇಷಣೆಯನ್ನು ಮತ್ತು ವಿವರಣೆಯನ್ನು ಕೊಡಲು ಬಹಳ ಸಹಾಯ ಮಾಡುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಅಲ್ಲಿ ಮುಖ್ಯವಾಗಿ, ಮನುಷ್ಯನ ಮೇಲೆ ಆಗುವ ಪ್ರಕೃತಿಯ ಮತ್ತು ಆಕಾಶಕಾಯಗಳ ಪ್ರಭಾವದಲ್ಲಿ ಇರುವುದು ಭೌತಶಾಸ್ತ್ರವಲ್ಲ, ಆದರೆ ಮನಶ್ಶಾಸ್ತ್ರ ಭೌತಕಾಯಗಳ ಪ್ರಭಾವ ಮನುಷ್ಯನ ಮೇಲಾಗುವುದರ ನೇರ ಕಾರಣ ಮತ್ತು ಪರಿಣಾಮಗಳನ್ನು ಹುಡುಕಬೇಕಾಗಿರುವುದು ಭೌತಶಾಸ್ತ್ರದಲ್ಲಿ ಅಲ್ಲ, ಬದಲಿಗೆ ಮನಶ್ಶಾಸ್ತ್ರದಲ್ಲಿ. ಮನೋವಿಜ್ಞಾನವನ್ನು ಅರ್ಥೈಸಿಕೊಂಡಷ್ಟೂ ದೇವರು, ದೆವ್ವ, ಭೂತ, ಮಾಟ, ಮಂತ್ರಗಳ ಪ್ರಭಾವ ಮತ್ತು ಪರಿಣಾಮಗಳ ಬಗ್ಗೆ ತಿಳಿದುಕೊಳ್ಳಬಹುದು. ಇನ್ನೂ ತಮಾಷೆಯ ವಿಷಯವೆಂದರೆ, ಮನಶ್ಶಾಸ್ತ್ರವನ್ನೂ ಅಧ್ಯಾತ್ಮ ಅಥವಾ ಅಕಲ್ಟ್ ಸೈನ್ಸ್‌ಗೆ ಜೋಡಿಸಿಬಿಟ್ಟಿದ್ದಾರೆ. ಅದೂ ಇನ್ನೂ ಸ್ವಾರಸ್ಯಕರವಾದ, ಬೆಚ್ಚಿಬೀಳಿಸುವಂತಹ ವಿಶ್ಲೇಷಣೆಗಳನ್ನು ಒಳಗೊಂಡಿದ್ದು ಪುನರ್ಜನ್ಮವನ್ನು ಮತ್ತು ಇತರೇ ಸೂಕ್ಷ್ಮ ಮನೋಲೋಕದ ಬಗೆಗಿನ ವಿಚಾರಗಳಿಗೆ ಪುಷ್ಟಿಕೊಡುವಂತಹ ಅಂಶಗಳನ್ನು ವಿವರಿಸುತ್ತಾ ವಾಸ್ತವ ಜೀವನಕ್ಕೆ ಅತೀತವಾದಂತಹ ವಿಷಯಗಳನ್ನು ಸಮರ್ಥಿಸಲು ಸಾಧ್ಯಗೊಳಿಸಿಕೊಳ್ಳುತ್ತಾರೆ. ಈ ನವ ವೈಜ್ಞಾನಿಕ ವಿಶ್ಲೇಷಕರು ಅಮಾಯಕ ಜನರು ಮೌಢ್ಯತೆಯನ್ನು ಬಿತ್ತುವ ಮತ್ತು ಅದೇ ಬಂಡವಾಳದಲ್ಲಿ ಶೋಷಣೆಯನ್ನೂ ಹಾಗೂ ತಮ್ಮ ವ್ಯಾಪಾರವನ್ನೂ ಮಾಡಿಕೊಳ್ಳುವ ಅಡಕಸಬಿ ಚಾನೆಲ್ ಜ್ಯೋತಿಷಿಗಳ ಬಲೆಗೆ ಬೀಳಲು ಕಾರಣವಾಗುತ್ತಾರೆ.

ತರ್ಕಶಾಸ್ತ್ರ

ತರ್ಕ ಮಾಡುವವನು ಹೇಗಾದರೂ ತರ್ಕ ಮಾಡಬಲ್ಲ, ಹೌದನ್ನು ಇಲ್ಲವೆನಿಸಬಲ್ಲ, ಇಲ್ಲವನ್ನು ಹೌದೆನಿಸಬಲ್ಲ, ತರ್ಕಶಾಸ್ತ್ರವೆಂಬುದು ಮೊದಲು ಇದ್ದಿದ್ದೇ ಆದರೂ ಅದೊಂದು ಶಾಸ್ತ್ರವೇ ಅಲ್ಲ, ಅದಕ್ಕೆ ನಿಜವಾಗಿಯೂ ವೈಜ್ಞಾನಿಕ ಮತ್ತು ಪ್ರಾಮಾಣಿಕವಾದಂತಹ ಸ್ಪಷ್ಟ ವೈಚಾರಿಕ ತಳಪಾಯವಿಲ್ಲ, ತರ್ಕಕ್ಕೆ ನಿಜವಾಗಿಯೂ ಆಶಯ ಮತ್ತು ಹಟಗಳೇನೂ ಇಲ್ಲದ ಮುಗ್ಧತೆ. ಅದೇ ಪ್ರಾಣಿಗಳಿಗೂ, ಪ್ರಾಣಿಗಳಂತಹ ಮನುಷ್ಯರಿಗೂ ಇದ್ದದ್ದು. ಅವರೇ ಪ್ರಕೃತಿಯ ರಹಸ್ಯವಾದ ಶಕ್ತಿಯನ್ನು ತಮಗೆ ಅರಿವಿಲ್ಲದಂತೆಯೇ, ಪ್ರಜ್ಞಾಪೂರ್ವಕವಾಗಿ ಅಭ್ಯಾಸ ಮಾಡುವಂತಹ ಉದ್ದೇಶವಿಲ್ಲದೆಯೇ ಹೊಂದಿರುವುದು. ಕೆಲವರು ತಾವು ಮುಗ್ಧರು ಎಂದು ಹೇಳಿಕೊಳ್ಳುತ್ತಾರೆ. ಇಂಗ್ಲಿಷನಲ್ಲಿ ಹೇಳುವಂತೆ, "ಐ ಯಾಮ್ ಇನ್ನೋಸೆಂಟ್ ಆಫ್ ದಟ್ ಕೈಂಡ್" ಎನ್ನುವಂತಹ ಮುಗ್ಧತೆ ಅಲ್ಲ. ನನಗೆ ಆ ಬಗೆಯ ಬಗ್ಗೆ ತಿಳುವಳಿಕೆ ಇಲ್ಲ ಎನ್ನುವ ಅರ್ಥ ಇದಾಗಿರುತ್ತದೆ ಅಥವಾ ನಾನು ಅದರ ಬಗ್ಗೆ ಅಜ್ಞಾನಿ ಎಂದು ಹೇಳುವುದಾಗಿರುತ್ತದೆ. ಅಜ್ಞಾನ ಮತ್ತು ಮುಗ್ಧತೆ ಒಂದೇ ಅಲ್ಲ. ಅದೊಂದು ಅತ್ಯದ್ಭುತ ಗುಣ, ಸ್ವಭಾವ ಮತ್ತು ಶಕ್ತಿ. ಅಂತಹ ಮುಗ್ಧತೆಯಿಂದಲೇ ನಮ್ಮ ಬುಡಕಟ್ಟು ಜನರು, ಆದಿವಾಸಿಗಳು, ಆರಣ್ಯಕರು, ಗ್ರಾಮವಾಸಿಗಳು ಏನೇನೆಲ್ಲಾ ಅಧ್ಯಯನ ಮತ್ತು ಸಂಶೋಧನೆಗಳನ್ನು ಮಾಡಿದ್ದು, ಅವರಿಗೆ ತಾವು ಮಾಡುತ್ತಿರುವುದು ಅಧ್ಯಯನ, ಸಂಶೋಧನೆ ಅಥವಾ ಶಾಸ್ತ್ರವೆಂದಾಗಲಿ ಏನೂ ಗೊತ್ತಿರಲಿಲ್ಲ, ಆದರೆ ಸಾಧಿಸಿದ್ದರು. ಅಂತವರ ಎಷ್ಟೋ ಶಕ್ತಿ, ಸಾಮರ್ಥ್ಯ ಮತ್ತು ಸಾಧನೆಗಳ ಪ್ರಕಟಣೆಗಳು ಡೋಂಗಿ ಜ್ಯೋತಿಷಿಗಳ, ಪುರೋಹಿತರ, ಧಾರ್ಮಿಕ ನಾಯಕರ, ಆಧ್ಯಾತ್ಮ ಚಿಂತಕರ ಬಡಬಡಿಕೆಯ ವ್ಯಾಪಾರ ವ್ಯವಹಾರಗಳಾಗಿವೆ. ಟಿವಿ ಚಾನೆಲ್‌ಗಳಿಂದಲೇ ಬಹು ಖ್ಯಾತಳಾಗಿರುವ ಆಧ್ಯಾತ್ಮ ಚಿಂತಕಿಯೊಬ್ಬರ ಜೊತೆ ನನ್ನ ನೇರ ಸಂದರ್ಶನ ಮತ್ತು ಒಂದು ಅನುಭವದೊಂದಿಗೆ ಕೆಲವು ಪವಾಡಿಗಳನ್ನು ಮುಂದಿನ ಸಂಚಿಕೆಯಲ್ಲಿ ತಿಳಿಸುತ್ತೇನೆ. ಅವರ ತಿಕ್ಕಲು ತಿಕ್ಕಲಾದ ಮಾತುಗಳಿಗೆ ಮತ್ತು ಭ್ರಮೆಗಳಿಗೆ ಬಿದ್ದೂ ಬಿದ್ದೂ ನಕ್ಕ ಕಥೆ ಸಣ್ಣದಾಗಿದ್ದರೆ, ಮಾತಾಜಿ, ಅಮ್ಮಾಜಿ ಎಂದು ಅವಳ ಪಾದಗಳ ಮೇಲೆ ಬಿದ್ದೂ ಬಿದ್ದೂ ಹೊರಳಾಡುವ ಪಾಡು ಹಲವಾರು. ಹಾಗೆಯೇ ಹುಣ್ಣಿಮೆ ಅಮಾವಾಸ್ಯೆಗಳಲ್ಲಿ ವಿಶೇಷ ವ್ಯಕ್ತಿಗಳು, ಮತಿವಿಕಲರು ಏಕೆ ಹೇಗೇಗೋ ಆಡುತ್ತಾರೆ ಎಂದು ಮುಂದೆ ನೋಡೋಣ.

ಆಹ್ವಾನಿತ ಸಾಹಿತಿಗಳು ಪಾಲ್ಗೊಳ್ಳದಿರುವುದು ಅಭಿನಂದನಾರ್ಹ



ಸಾರ್ವಜನಿಕರ ಬದುಕಿಗೆ ಹತ್ತಿರವಾಗದ, ಪ್ರಾದೇಶಿಕ ಸಂಸ್ಕೃತಿ ಮತ್ತು ಪ್ರಾದೇಶಿಕ ಸಮಸ್ಯೆಗಳನ್ನು ಬಿಂಬಿಸದ ಲಿಟರೇಚರ್ ಫೆಸ್ಟ್‌ಗಳು ಯಾವ ಕಾಲಕ್ಕೂ ಉಪಯುಕ್ತವಾಗಲಾರದು. ಇದರ ಕುರಿತಾಗಿ ಲಂಕೇಶ್ ಪತ್ರಿಕೆ ಸಾರ್ವಜನಿಕರಿಗೆ ವಾಸ್ತವವನ್ನು ತಿಳಿಸುವ ಪ್ರಯತ್ನ ಮಾಡಿರುವುದು ಸ್ವಾಗತಾರ್ಹ. ಇಂತಹ ಫೆಸ್ಟ್‌ಗಳಿಂದ ಸಾಹಿತಿಗಳನ್ನು ಕೊಂಡುಕೊಳ್ಳಬಹುದು ಎಂಬ ಮೂರನೇ ದರ್ಜೆ ಆಲೋಚನೆ ಮಾಡಿದ್ದ ಆಯೋಜಕರಿಗೂ ಹಾಗೂ ಫೆಸ್ಟ್‌ನ ಹಿಂದಿದ್ದ ದುಷ್ಟ ಶಕ್ತಿಗಳಿಗೂ ದೊಡ್ಡ ಸೋಲಾಗಿದೆ. ಆಹ್ವಾನಿತ ಸಾಹಿತಿಗಳು ಸೂಕ್ತವಾದ ಕಾರಣ ತಿಳಿಸಿ ಪಾಲ್ಗೊಳ್ಳದಿರುವುದು ಅಭಿನಂದನಾರ್ಹ.

ಮಾಂಸಾಹಾರಿಗಳು ಭಯೋತ್ಪಾದಕರೆಂದು ಹೇಳಿರುವ 'ಹಸಿರು ಸ್ವಾಮೀ'ಯ ಹೇಳಿಕೆಯನ್ನು ಖಂಡಿಸಬೇಕು. ಬ್ರಾಹ್ಮಣ್ಯದ ದ್ಯೋತಕದಂತಿರುವ ಸ್ವಾಮೀಜಿಯಿಂದ ಇನ್ನೇನು ತಾನೇ ನಿರೀಕ್ಷಿಸಲು ಸಾಧ್ಯ?

ಇನ್ನು ತನ್ನ ಮಗಳು ಮಾಕ್ಸ್‌ಗೆ ಚಾನ್-ಜುಕರಬರ್ಗ್ ದಂಪತಿಗಳು ಬರೆದಿರುವ ಪತ್ರವನ್ನು ಗಿರೀಶ್ ತಾಳಿಕಟ್ಟೆ ಉತ್ತಮವಾಗಿ ಅನುವಾದಿಸಿದ್ದಾರೆ. ನಿಜಕ್ಕೂ ಮುಂದಿನ ಪೀಳಿಗೆಗೆ ನಾವು ಏನು ಕೊಡುಗೆ ನೀಡಬೇಕು ಎಂಬುವುದರ ಕುರಿತು ಆಲೋಚನೆ ಮಾಡುವಂತೆ ಮಾಡುತ್ತದೆ ಈ ಪತ್ರ. ತುಂಬಾ optimistic ಆಗಿ ಮುಂದಿನ ಪೀಳಿಗೆಯ ಶೈಕ್ಷಣಿಕ ಅಭಿವೃದ್ಧಿ, ಬಡತನ ನಿರ್ಮೂಲನೆ, ಆರೋಗ್ಯ ಸುಧಾರಣೆ ಬಗ್ಗೆ ಬರೆದಿರುವ ಈ ಪತ್ರ ಅಮೂಲ್ಯವಾದದ್ದು ಎನ್ನಿಸಿತು.

-ಡಾ. ಅಭಿನಂದನ ಬಳ್ಳಾರಿ, ಬೆಂಗಳೂರು

ಜಾತಿ ಆಧಾರಿತ ಮೀಸಲಾತಿ

ಅಂಬೇಡ್ಕರ್ ಅಂದಾಕ್ಷಣ ಎಲ್ಲರ ಮನಸ್ಸಿನಲ್ಲಿ ಮೂಡುವುದು ಜಾತಿ ಆಧಾರಿತ ಮೀಸಲಾತಿಯನ್ನು ಈ ದೇಶದಲ್ಲಿ ಹುಟ್ಟುಹಾಕಿದವರೆಂದು. ನಿಜವಾಗಿ ಜಾತಿಗಳು ಹುಟ್ಟಿದಾಗಿನಿಂದ ಜಾತಿ ಆಧಾರಿತ ಮೀಸಲಾತಿ ಹುಟ್ಟಿಕೊಂಡಿದೆ. ಪ್ರಕೃತಿಯು ತಾನು ಸೃಷ್ಟಿಸಿದ ಜೀವಿಗಳಿಗೆ ಬದುಕಲು ಬೇಕಾದ ಅನ್ನ, ನೀರು, ಗಾಳಿಯನ್ನು ತಾನೇ ನೀಡಿದೆ. ಇದು ಮೆರಿಟ್ ಆಧಾರದಲ್ಲಿ ಹಂಚಿಕೆಯಾಗುವುದು ಪ್ರಕೃತಿ ನಿಯಮ. ಆದರೆ ಇದು ಎಂದೂ ಮೆರಿಟ್ ಆಧಾರದಲ್ಲಿ ಹಂಚಿಕೆ ಆಗಲೇ ಇಲ್ಲ, ಇದು ಜಾತಿಆಧಾರದಲ್ಲೇ ಹಂಚಿಕೆ ಆಗಿದೆ. ಇದಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಅನ್ನ ತಿನ್ನಲು ಬೇಕಾದ ಮೆರಿಟ್ 'ಹಸಿವು' ಮತ್ತು ನೀರು ಕುಡಿಯಲು ಬೇಕಾದ ಮೆರಿಟ್ 'ಬಾಯಾರಿಕೆ' ಆದರೆ ಹಸಿದ, ಬಾಯಾರಿದ ಕೆಳ ಜಾತಿಯ ಮೆರಿಟ್‌ದಾರರಿಗೆ ಜಾತಿಯ ಕಾರಣಕ್ಕೆ ಅನ್ನ, ನೀರು ನಿರಾಕರಿಸಲಾಗಿತ್ತು. ಎಲ್ಲರಿಗೂ ಸಿಗಬೇಕಾದ ಈ ಪ್ರಕೃತಿಯ ಸಂಪತ್ತನ್ನು ಜಾತಿ ಆಧಾರಿತವಾಗಿ ಮೇಲುಜಾತಿಗಳು ಅನುಭವಿಸುತ್ತ ಬಂದವು. ಸಾವಿರಾರು ವರ್ಷಗಳಿಂದ ನಡೆಯುತ್ತ ಬಂದ ಈ ವಂಚನೆ, ಮೋಸ, ದ್ರೋಹ, ದೇಶದ್ರೋಹ, ಭಯೋತ್ಪಾದನೆ ಇಂದಿಗೂ ನಡೆಯುತ್ತಿದೆ.

ಸಾಯಲಿ, ಈ ನಾಡಿನ ನೆಲ ಜಲವನ್ನು ಜಾತಿ ಆಧಾರವಾಗಿ ಅನುಭವಿಸಿದವರು ಇದರ ರಕ್ಷಣೆ ಮಾಡುವಲ್ಲಿ ಸಂಪೂರ್ಣ ವಿಫಲರಾಗುತ್ತಾರೆ. ಹಿಂದೂ ಸಂಸ್ಕೃತಿಗೆ, ಹಿಂದೂಸ್ಥಾನಕ್ಕೆ ಎಂದೂ ಅಪಚಾರ ಮಾಡದ ಹಿಂದುಳಿದ ಜಾತಿಗಳಿಗಿಂತ ಗೋ ಹಂತಕ, ಗೋಮಾಂಸ ಭಕ್ಷಕ ವಿದೇಶಿ ವ್ಯಾಪಾರಿಗಳು ಇವರಿಗೆ ಆತ್ಮೀಯರಾಗುತ್ತಾರೆ. ಈ ವಿದೇಶಿಗಳಿಗೆ ಹೆಂಡ, ಹೆಣ್ಣು ಗೋಸೇವೆ ಮಾಡುವುದು ಇವರ ಕಾಯಕವಾಗುತ್ತದೆ. ಇವರ ಹೇಡಿತನ, ದೇಶದ್ರೋಹಗಳಿಂದಾಗಿ ವ್ಯಾಪಾರಕ್ಕೆ ಬಂದವರು ಈ ನೆಲವನ್ನೆ ಆಳುತ್ತಾರೆ. ವಿದೇಶಿ ಆಕ್ರಮಣಕಾರರು ಆಕ್ರಮಣ ಮಾಡುವಾಗ ಹೆದರಿ ಮುದುಡಿ ಕೂತವರು, ತಮ್ಮ ಪೌರುಷವೆಲ್ಲ ತಮ್ಮದೇ ಧರ್ಮದ ಕೆಳಜಾತಿಗಳ ಮೇಲೆ ತೋರಿಸುತ್ತಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ಜಾತಿಯಾಧಾರಿತ ಮೀಸಲಾತಿಯಿಂದ ಲೂಟಿದ, ವಿದೇಶಿ ಆಡಳಿತಗಾರರ ಓಲೈಕೆ ಮಾಡಿ ಲೂಟಿದ ಈ ನಾಡಿನ ಸಂಪತ್ತು ಸ್ವತಂತ್ರ ಭಾರತದಲ್ಲಿ ರಾಷ್ಟ್ರೀಕರಣವಾಗಬೇಕಿತ್ತು, ಸಮಾನವಾಗಿ ಹಂಚಿಕೆ ಆಗಬೇಕಿತ್ತು, ಇದನ್ನು ಮಾಡದೇ ಕೆಳವರ್ಗದವರಿಗೆ ಮತ್ತೆ ಮೋಸ ಮಾಡಲಾಗಿದೆ, ಕೆಳಜಾತಿಗಳಿಗೂ ಉದ್ಯೋಗದಲ್ಲಿ ಮೀಸಲಾತಿ ನೀಡಿ ತೇಪೆ ಹಚ್ಚುವ ಕೆಲಸ ಮಾಡಲಾಗಿದೆ. ಕೇವಲ ಆರು ದಶಕಗಳ ಜುಜುಬಿ ಸರ್ಕಾರಿ ಮೀಸಲಾತಿಗೆ ಇವರು ದ್ವೇಷ ಕಾರಿದರೆ, ಸಾವಿರಾರು ವರ್ಷಗಳ ಈ ಸಾಮಾಜಿಕ ಮೀಸಲಾತಿಗೆ ಕೆಳವರ್ಗದವರಲ್ಲಿ ಎಷ್ಟು ದ್ವೇಷ ಇರಲಿಕ್ಕಿಲ್ಲ?

ಈಗಾಗಲೇ ಈ ನಾಡಲ್ಲಿ ವಿದೇಶಿ ವ್ಯಾಪಾರಿಗಳು ತಮ್ಮ ನೆಲೆ ಕಂಡಿದ್ದಾರೆ, ಭಾರತದವರನ್ನು ವಿದೇಶಕ್ಕೆ ಹೋಗಿ ಕರೆಯಲಾಗುತ್ತಿದೆ. ಆಕ್ರಮಣಕೋರರು ಹೊಸ ಹೆಸರಿನೊಂದಿಗೆ, ಹೊಸ ಹುರುಪಿನೊಂದಿಗೆ, ಹಳೆ ಉದ್ದೇಶದೊಂದಿಗೆ ನೆರೆಹೊರೆಯಲ್ಲಿ ತಮ್ಮ ಕಾರ್ಯ ಮುಂದುವರಿಸಿದ್ದಾರೆ, ಈ ನಾಡಿನ ಮೇಲು ತಮ್ಮ ದೃಷ್ಟಿ ಹಾಯಿಸಿದ್ದಾರೆ. ಇತಿಹಾಸ ತಿಳಿದವರಿಂದಲೂ ಇತಿಹಾಸ ನಿರ್ಮಾಣ ಮಾಡಲಾಗದ್ದಿದರೆ ಇತಿಹಾಸ ಮರುಕಳಿಸ ಬಹುದು.

-ಬಿ.ಶ್ರೀ ಸುರೇಶ್, ಹೆರೂರು, ಬ್ರಹ್ಮಾವರ

ಗೋರಕ್ಷಕರಿಂದಾಗಿ ಸೊರಗಿದ ಪುಷ್ಕರ್ ಜಾತ್ರೆ

ರಾಜಸ್ಥಾನದ ವಿಶ್ವ ಪ್ರಸಿದ್ಧ ಪುಷ್ಕರ್ ಜಾನುವಾರು ಜಾತ್ರೆ ವಿಶ್ವ ಹಿಂದೂ ಪರಿಷತ್ತಿನ ಗೂಂಡಾಗಿರಿಯಿಂದಾಗಿ ಖರೀದಿದಾರರೇ ಇಲ್ಲದೆ ಎಷ್ಟೊಂದು ಭಯಂಕರವಾಗಿ ಸೊರಗಿಹೋಗಿದೆಯೆಂದರೆ ಈ ವರ್ಷ ಜಾತ್ರೆಯ ಜಾನುವಾರು ವಹಿವಾಟು 94% ಕುಸಿದಿದೆ ಎಂದು ರಾಜಸ್ಥಾನದ ಪಶು ಸಂಗೋಪನಾ ಇಲಾಖೆಯ ಅಂಕಿ ಅಂಶಗಳು ಹೇಳುತ್ತಿವೆ. ಈ ಹಿಂದಿನ ಅನೇಕ ಪ್ರಕರಣಗಳಲ್ಲಿ ಜಾನುವಾರು ಜಾತ್ರೆಯಲ್ಲಿ ಖರೀದಿಸಿದ ದುಬಾರಿ ಜಾನುವಾರುಗಳನ್ನು ಸಾಗಾಟ ಮಾಡುವಾಗ ಗೋರಕ್ಷಕ ಸಂಘಟನೆಗಳು ಕಿತ್ತುಕೊಂಡು ಹೋಗಿದ್ದರಿಂದ ಈ ಬಾರಿ ಖರೀದಿದಾರರು ಪುಷ್ಕರ್ ಜಾತ್ರೆಯತ್ತ ಮುಖ ಮಾಡಿಯೇ ಇಲ್ಲ, ಹಾಗಾಗಿ 15-20 ಸಾವಿರ ಬೆಲೆಬಾಳುವ ಜಾನು ವಾರುಗಳು ಈ ಬಾರಿ 3-4 ಸಾವಿರಕ್ಕೆಲ್ಲ ಮಾರಾಟವಾಗಿವೆ.


ಪುಷ್ಕರ್ ಜಾನುವಾರು ಜಾತ್ರೆ ರಾಜಸ್ಥಾನದಲ್ಲಿ ಪ್ರಮುಖ ಜಾನುವಾರು ಜಾತ್ರೆಯಾಗಿದ್ದು ಇಲ್ಲಿ ಜಾನುವಾರುಗಳನ್ನು ಖರೀದಿಸಲು ಅನ್ಯ ರಾಜ್ಯದಿಂದಲೂ ಖರೀದಿದಾರರು ಬರುತ್ತಿದ್ದರು. ಜತೆಗೆ ಇದು ಪ್ರವಾಸಿ ಆಕರ್ಷಣೆಯ ಕೇಂದ್ರವೂ ಆಗಿತ್ತು. ಪುಷ್ಕರ್ ಜಾತ್ರೆಗೆ ಬರುವ ದನ, ಎಮ್ಮೆ, ಎತ್ತು ಮುಂತಾದ ಜಾನುವಾರುಗಳು ಅತ್ಯಂತ ಉತ್ತಮ ತಳಿ ಮತ್ತು ಸಣ್ಣ ವಯಸ್ಸಿನ ಗುಣಮಟ್ಟದ ಜಾನುವಾರುಗಳಾಗಿದ್ದು ಇವು ದುಬಾರಿಯಾಗಿದ್ದರೂ ಕೃಷಿಕರು ಇಲ್ಲಿ ಮಾರಾಟ ಮತ್ತು ಖರೀದಿ ಮಾಡುತ್ತಿದ್ದರು. ಆದರೆ ರೈತರು 20-25 ಸಾವಿರ ರೂಪಾಯಿ ಕೊಟ್ಟು ಖರೀದಿಸಿದ ಜಾನುವಾರುಗಳನ್ನು ತಮ್ಮ ಮನೆಗಳತ್ತ ಸಾಗಾಟ ಮಾಡುವಾಗ ಇತ್ತೀಚಿನ ವರ್ಷಗಳಲ್ಲಿ ಗೋರಕ್ಷಣೆಯ ಹೆಸರಿನಲ್ಲಿ ತಲೆ ಎತ್ತಿರುವ ಸಂಘಪರಿವಾರದ ಗೂಂಡಾಪಡೆಗಳು ಏಕಾಏಕಿ ದಾಳಿ ನಡೆಸಿ ಜಾನುವಾರುಗಳನ್ನು ಮಾಲಕರಿಂದ ಕಿತ್ತುಕೊಂಡು ಹೋಗುತ್ತಾರೆ ಹಾಗೂ ರೈತರು ಅವುಗಳನ್ನು ಕಸಾಯಿಖಾನೆಗೆ ಸಾಗಿಸುತ್ತಿದ್ದಾರೆ ಎಂದು ಆರೋಪಿಸಿ ರೈತರ ಮೇಲೆ ಹಲ್ಲೆ ಸಹ ಮಾಡುತ್ತಾರೆ. ಆದರೆ ಮಾರಾಟಗಾರರು ಮತ್ತು ಖರೀದಿದಾರರು ಹೇಳುವುದೇನೆಂದರೆ ಪುಷ್ಕರ್ ಜಾನುವಾರು ಜಾತ್ರೆಗೆ ಬರುವ ಜಾನುವಾರುಗಳು ಅತ್ಯಂತ ದುಬಾರಿಯಾಗಿರುತ್ತವೆ. ಇಂತಹ ಆರೋಗ್ಯವಂತ ಜಾನುವಾರುಗಳನ್ನು ರೈತರು ಇಪ್ಪತ್ತೈದು ಸಾವಿರ ಕೊಟ್ಟು ಕೊಂಡುಕೊಂಡು ಕೇವಲ ಐದು ಸಾವಿರಕ್ಕೆ ಕಸಾಯಿಖಾನೆಗೆ ಮಾರಿ ಭಾರಿ ನಷ್ಟ ಮಾಡಿಕೊಳ್ಳುವಂತಹ ಮೂರ್ಖರಲ್ಲ ರಾಜಸ್ಥಾನದ ರೈತರು. ಖರೀದಿ ಮಾಡಿ ಸಾಗಾಟ ಮಾಡುವ ಜಾನುವಾರುಗಳಿಗೆ ರಾಜಸ್ಥಾನದ ಪಶು ಸಂಗೋಪನಾ ಇಲಾಖೆ ಎಲ್ಲ ದಾಖಲೆ, ಪ್ರಮಾಣಪತ್ರಗಳನ್ನು ನೀಡುತ್ತದೆ ಮತ್ತು ಜಾನುವಾರುಗಳಿಗೆ ಹಳದಿ ಬ್ಯಾಜ್‌ಗಳನ್ನು ಸಹ ಹಾಕುತ್ತದೆ. ಆದರೆ ದಾಳಿ ಮಾಡುವ ಗೋರಕ್ಷಕ ಸಂಘಟನೆಗಳು ಇವೆಲ್ಲ ನಕಲಿ ಎಂದು ವಾದಿಸಿ ಖರೀದಿಸಿದ ಜಾನುವಾರುಗಳನ್ನು ಹೊತ್ತೊಯ್ಯುತ್ತವೆ. ಒಟ್ಟಿನಲ್ಲಿ ಗೋರಕ್ಷಕರ ಭಯದಿಂದ ಪುಷ್ಕರ್ ಜಾನುವಾರು ಜಾತ್ರೆ ಸೊರಗಿದೆ ಮಾತ್ರವಲ್ಲ ರೈತರು ಜಾನುವಾರುಗಳ ಖರೀದಿದಾರರಿಲ್ಲದೆ ಕಂಗಾಲಾಗಿದ್ದಾರೆ ಹಾಗೂ ವಿಶ್ವಪ್ರಸಿದ್ಧ ಜಾತ್ರೆ ಮುಚ್ಚುವ ಸ್ಥಿತಿ ಮುಟ್ಟಿದೆ. ಇದುವೇ ದೇಶಭಕ್ತ ಹಿಂದೂತ್ವ ಸಂಘಟನೆಗಳು ಹಿಂದೂ ರೈತರಿಗೆ ಹಾಗೂ ದೇಶದ ಪ್ರವಾಸೋದ್ಯಮ ಅಭಿವೃದ್ಧಿಗೆ ಕೊಡುತ್ತಿರುವ ಭಾರಿ ಕಾಣಿಕೆ!

-ಹರೀಶ್ ಎಂ ರಾವ್, ಉಡುಪಿ

ಮೌಢ್ಯಾಚರಣೆ ತಡೆಯಲು ಕಾನೂನು ಬೇಕು

ಕರ್ನಾಟಕದಲ್ಲಿ ಹನ್ನೆರಡನೆ ಶತಮಾನದ ಬಸವಾದಿ ಶರಣರು ಮೌಢ್ಯಾಚರಣೆ ವಿರುದ್ಧ ಧ್ವನಿ ಎತ್ತಿರುವುದನ್ನು ಗಮನಿಸಿದರೆ ಮೌಢ್ಯ ನಮ್ಮ ಸಮಾಜದಲ್ಲಿ ಮೊದಲಿನಿಂದಲು ಆಚರಣೆಯಲ್ಲಿದೆ ಎಂಬುದು ತಿಳಿದುಬರುತ್ತದೆ. ಮನುಷ್ಯರ ಗೌರವಕ್ಕೆ ಧಕ್ಕೆಯನ್ನುಂಟುಮಾಡುವ ಅಮಾನವೀಯ ಆಚರಣೆಗಳನ್ನು ತಡೆಗಟ್ಟಲು ಕಾಯ್ದೆಯ ಅಗತ್ಯತೆ ಇದೆ. ಅದಕ್ಕಾಗಿ ಸರ್ಕಾರ 'ಮೌಢ್ಯಾಚರಣೆ ಪ್ರತಿಬಂಧಕ ಕಾಯ್ದೆ'ಯ ಕರಡು ಮಸೂದೆಯನ್ನು ಸಿದ್ಧಪಡಿಸಿದೆ.

ನಮ್ಮ ದೇಶದಲ್ಲಿ ವಿವಿಧ ಧರ್ಮಗಳು ಹೊರತಾಗಿಯು ಹಲವಾರು ಸಂಸ್ಕೃತಿ, ಸಂಪ್ರದಾಯಗಳು ಆಚರಣೆಯಲ್ಲಿವೆ. ಆದಾಗ್ಯೂ ಭಾರತ ದೇಶ ಏಕತೆ, ಸಾರ್ವಭೌಮತ್ವ, ಜಾತ್ಯತೀತತೆ ಮತ್ತು ಸಮಗ್ರತೆಯನ್ನು ಕಾಪಾಡಿಕೊಂಡು ಬರುವುದರ ಮೂಲಕ ಇಡೀ ಜಗತ್ತಿಗೆ ಮಾದರಿ ರಾಷ್ಟ್ರವಾಗಿದೆ. ಅಲ್ಲದೆ ಇತ್ತೀಚಿನ ದಿನಗಳಲ್ಲಿ ಮೂಢನಂಬಿಕೆಯಂತ ಅನಿಷ್ಟ ಪದ್ಧತಿಗಳು ಎಲ್ಲ ಧರ್ಮಗಳಲ್ಲಿಯೂ ತನ್ನ ಕದಂಬಬಾಹುವನ್ನು ಚಾಚಿರುವುದು ನಾಗರಿಕ ಸಮಾಜ ತಲೆತಗ್ಗಿಸುವಂತೆ ಮಾಡಿದೆ. ಅನೇಕ ವರ್ಷಗಳ ನಂತರ ಕರ್ನಾಟಕದಲ್ಲಿ ಮೌಢ್ಯಾಚರಣೆ ಪ್ರತಿಬಂಧಕ ಕಾಯ್ದೆಯು



ಪುನಃ ಜೀವ ಪಡೆದುಕೊಂಡಿದೆ. ನೆರೆರಾಜ್ಯಗಳಾದ ಮಹಾರಾಷ್ಟ್ರ ಹಾಗೂ ಕೇರಳಗಳಲ್ಲಿ ಜಾರಿಯಲ್ಲಿರುವ ಕಾಯ್ದೆಯಂತೆಯೇ ನಮ್ಮ ರಾಜ್ಯದಲ್ಲಿಯು ಜಾರಿಗೊಳಿಸಬೇಕೆಂದು ಧಾರ್ಮಿಕ ಮುಖಂಡರು, ಸಮಾಜ ವಿಜ್ಞಾನಿಗಳು, ಸಾಹಿತಿಗಳು, ನಿವೃತ್ತ ನ್ಯಾಯಾಧೀಶರುಗಳು- ಹೀಗೆ ವಿವಿಧ ಮುಖಂಡರು ಮೌಢ್ಯಾಚರಣೆ ತಡೆ ಕಾಯ್ದೆ ಜಾರಿಗಾಗಿ ಆಗ್ರಹಪಡಿಸಿದ ಫಲವಾಗಿ ಈ ಕಾಯ್ದೆ ಜಾರಿಯು ಹಂತದಲ್ಲಿದೆ. ಇಂತಹ ಕಾಯ್ದೆ ಜಾರಿಯಾದರೆ ಮೂಢನಂಬಿಕೆಯನ್ನು ಮುಗ್ಧ ಜನರ ಮೇಲೆ ಹೇರುವ ಸಮಾಜಘಾತುಕ ಶಕ್ತಿಗಳನ್ನು ನಿಯಂತ್ರಿಸಲು ಸಹಕಾರಿಯಾಗುವುದರಲ್ಲಿ ಸಂದೇಶವಿಲ್ಲ, ನಮ್ಮ ಸಮಾಜದಲ್ಲಿ ಕೆಲವರು ಜನರಲ್ಲಿ ಮೌಢ್ಯವನ್ನು ಬಿತ್ತುತ್ತ ಅಮಾನವೀಯ ರೀತಿಯಿಂದ ಶೋಷಣೆಯನ್ನು ಮಾಡುತ್ತಾ ಕೆಲವು ಸಂದರ್ಭದಲ್ಲಿ ಜೀವಹಾನಿಯನ್ನು ಮಾಡಿದ ಉದಾಹರಣೆಯು ಉಂಟು. ಅವರ ಬಲಿಗೆ ಬೀಳುವವರಲ್ಲಿ ವಿದ್ಯಾವಂತರು ಹೊರತಾಗಿಲ್ಲ ಎನ್ನಬಹುದು.

ಸಾಮಾನ್ಯ ಜನರು ತಾವು ನಂಬಿದ ನಂಬಿಕೆಗಳನ್ನು ಬದಲಿಸುವುದು ಅಷ್ಟು ಸುಲಭವಲ್ಲ, ಅಲ್ಲದೆ ಬಹಳ ವರ್ಷಗಳಿಂದ ಆಚರಿಸಿಕೊಂಡು ಬರುತ್ತಿರುವ ಕೆಲವು ಮೂಢನಂಬಿಕೆಗಳನ್ನು ಕೈಬಿಡುವುದೆಂದರೆ ದೇವರ ಅವಕೃಪೆಗೆ ಗುರಿಯಾಗುತ್ತೇವೆ ಎಂಬ ಭಯವನ್ನು ಜನರಲ್ಲಿ ತುಂಬಲಾಗಿದೆ. ಇಂತಹ ಜನರ ನಂಬಿಕೆಗಳನ್ನು ಬಂಡವಾಳ ಮಾಡಿಕೊಂಡಿರುವ ಕೆಲವರು ಜನರ ನಂಬಿಕೆಯ ಮೇಲೆ ಸವಾರಿ ಮಾಡುತ್ತಿದ್ದಾರೆ. ಇಂತಹ ಶಕ್ತಿಗಳನ್ನು ಕಟ್ಟಿಹಾಕಲು ಸರ್ಕಾರ ಮುಂದಾಗಿರುವುದು ಸ್ವಾಗತಾರ್ಹವಾದದ್ದು.

ಸಾಮಾನ್ಯವಾಗಿ ಮಕ್ಕಳು ಟಿವಿಯನ್ನು ವೀಕ್ಷಣೆ ಮಾಡುವುದರಲ್ಲಿ ಹೆಚ್ಚು ಆಕರ್ಷಿತರಾಗಿರುತ್ತಾರೆ. ಅದಕ್ಕಾಗಿ ದೃಶ್ಯ ಮಾಧ್ಯಮದಲ್ಲಿ ಮೌಢ್ಯವನ್ನು ಬಿಂಬಿಸುವ ಕಾರ್ಯಕ್ರಮಗಳನ್ನು ಪ್ರಸಾರ ಮಾಡದಂತೆ ನಿರ್ಬಂಧ ಹೇರಬೇಕು. ಟೀವಿ ವೀಕ್ಷಣೆಯಿಂದ ಮೌಢ್ಯ ಎಳೆಯ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರಿ ಬೌದ್ಧಿಕ ಬೆಳವಣಿಗೆ ಕುಂಠಿತವಾಗುವುದು. ಅಲ್ಲದೆ ನಿಧಿಗಾಗಿ ಮಕ್ಕಳನ್ನು ಬಲಿ ಕೊಡುವ ಘಟನೆಗಳು ಸಾಕಷ್ಟು ವರದಿಯಾಗಿವೆ. ಇದು ಅತೀ ಕ್ರೂರವಾದದ್ದು ಮತ್ತು ಘೋರವಾದದ್ದು. ಜನರಿಗೆ ನಿಧಿ ಸಿಗುವುದೆಂದು ನಂಬಿಸಿ ಹಣ ಕಿತ್ತುಕೊಂಡು ಪರಾರಿಯಾದ ಘಟನೆಗಳು ಸಾಕಷ್ಟಿವೆ. ಇನ್ನೂ ಮಹಿಳೆಯರನ್ನು ನಂಬಿಸಿ ಪೂಜೆಗೆ ಚಿನ್ನದ ಆಭರಣಗಳನ್ನು ಇಡುವಂತೆ ... ಅವುಗಳನ್ನು ಲಪಟಾಯಿಸಿರುವ ಉದಾಹರಣೆಗಳು ... ಈ ವೈಜ್ಞಾನಿಕ ಯುಗದಲ್ಲಿಯು ಇಂತಹ ಆಚ... ಗಮನಿಸಿದರೆ ಇದಕ್ಕೊಂದು ಕಡಿವಾಣ ಬೇಕು ಅ...

ಸುಮಾರು ವರ್ಷಗಳ ಹಿಂದೆ ಕಲಬುರಗಿ ... ಗ್ರಾಮವೊಂದರಲ್ಲಿ ವಿಚಿತ್ರ ಘಟನೆಯೊಂದು ನ... ಬಾಲಕಿಯೊಬ್ಬಳು ಮುಂಜಾನೆ ಎದ್ದು ಶೌಚಕ್ಕೆಂದು ... ಹೋದಾಗ ಇದ್ದಕ್ಕಿದ್ದಂತೆ ಸುಟ್ಟು ಕರಕಲಾದಳು. ... ಬಾನಾಮತಿ ಕಾಟವೆಂದು ಪ್ರಕರಣ ಮುಚ್ಚುವ ... ನಡೆಯಿತು. ಆದರೆ ಭಾರತ ಜ್ಞಾನ ವಿಜ್ಞಾನ ಸಮಿತಿ ... ಪೊಲೀಸರ ನೆರವಿನಿಂದ ತನಿಖೆ ಮಾಡಿದಾಗ ಕಾ... ಬೆಳಕಿಗೆ ಬಂದವು. ಅವರೊಂದಿಗೆ ವೈಮನಸ್ಸಿರುವ ... ಮಹಿಳೆಯೊಬ್ಬಳು ಬಾಲಕಿ ತೊಟ್ಟ ಅಂಗಿಗೆ ಸೋ... ಮೆಟಲ್ ಸವರಿದ್ದಳು. ಬಾಲಕಿ ಬಯಲಿಗೆ ಹ... ನೀರಿನ ಸ್ಪರ್ಶವಾಗಿ ಬೆಂಕಿ ಹೊತ್ತಿಕೊಂಡಿತು. ಪೊ... ಯಾವ ಪ್ರಕರಣದಡಿ ಬಂಧಿಸಬೇಕೆಂದು ಗೊಂದ...ದರು. ಆದ್ದರಿಂದ ಕಾಯ್ದೆಯ ನೆರವಿಲ್ಲದೆ ನಿಜವಾದ ... ಕಾನೂನಿನಿಂದ ತಪ್ಪಿಸಿಕೊಳ್ಳುವ ಪ್ರಸಂಗವೇ ಹೆಚ್ಚು ... ವಾಮಾಚಾರ ಮಾಡುವುದು ಜನರಲ್ಲಿ ಭಯ ... ಮಾಡುವ ಅಮಾನವೀಯ ಕೃತ್ಯವಾಗಿದೆ.

ಅದಕ್ಕಾಗಿ ಮೌಢ್ಯಾಚರಣೆ ಪ್ರತಿಬಂಧಕ ಕ... ಅಗತ್ಯತೆಯನ್ನು ಅರಿತ ಸರ್ಕಾರ ಕೂಡಲೇ ಕಾಂ... ಜಾರಿಗೆ ತರಬೇಕು. ಸಮಾಜದಲ್ಲಿ ಮೂಢನಂಬ... ಆಚರಣೆಗಳನ್ನು ಉತ್ತೇಜಿಸುವ, ಅವುಗಳಿಗೆ ಪ್ರಚಾರ... ಹಾಗೂ ಆಚರಿಸುವಂತಹ ವ್ಯಕ್ತಿಗೆ ಶಿಕ್ಷೆ ವಿಧಿಸ... ಅಲ್ಲದೆ ಈ ಮಸೂದೆ ಮೂಢನಂಬಿಕೆಯನ್ನು ಪ್ರತಿಬ... ಹಾಗೂ ನಿರ್ಮೂಲನೆ ಮಾಡುವ ಮತ್ತು ... ನಿಷೇಧಿಸುವ ಹಾಗೂ ಸಮಾಜದಲ್ಲಿ ವೈಜ್ಞಾನಿಕ ಮ... ಬೆಳೆಸುವ ಉದ್ದೇಶ ಹೊಂದಿದೆ. ರಾಜ್ಯ ವ... ಮೂಢನಂಬಿಕೆ ವಿರೋಧಿ ಪ್ರಾಧಿಕಾರ ಮತ್ತು ... ಮಟ್ಟದಲ್ಲಿ ಮೂಢನಂಬಿಕೆ ಆಚರಣೆ ತಡೆ ಮತ್ತು ... ಸಮಿತಿಗಳ ರಚನೆ ಮಾಡುವುದು ಸೂಕ್ತವಾಗಿ... ಪ್ರಾಧಿಕಾರಕ್ಕೆ ಹೈಕೋರ್ಟ್ ನಿವೃತ್ತ ನ್ಯಾಯಮೂ... ಅಧ್ಯಕ್ಷರಾಗಿರುತ್ತಾರೆ. ಹಾಗೆ ಜಿಲ್ಲಾ ಮಟ್ಟದಲ್ಲಿಯು ... ರಚನೆ ಮಾಡುವುದು. ಮೌಢ್ಯ ಆಚರಣೆಗಳಿಂ... ಅನುಭವಿಸಿದವರಿಗೆ ಪರಿಹಾರ ನೀಡಲು ನಿಧಿ ಸ್ಥಾಪಿ... ಮೂಢನಂಬಿಕೆಗೆ ಉತ್ತೇಜನ ನೀಡುವವರಿಗೆ ಕನಿಷ್ಠ ... ವರ್ಷ ಹಾಗೂ ಗರಿಷ್ಠ ಐದು ವರ್ಷದವರೆಗೆ ... ಶಿಕ್ಷೆ ಅಥವಾ ಇಪ್ಪತ್ತೈದು ಸಾವಿರದಿಂದ ಒಂದು ಲ... ದಂಡ ವಿಧಿಸಲು ಈ ಮಸೂದೆಯಲ್ಲಿ ... ಕಲ್ಪಿಸಲಾಗಿದೆ. ಶಾಲಾ ವಿದ್ಯಾರ್ಥಿಗಳನ್ನು ಪ್ರವಾಸಕ್ಕೆ ... ಕೊಂಡು ಹೋಗುವಾಗ ಶಿಕ್ಷಕರು ಮೌಢ್ಯ ಬಿತ್ತುವ ... ಬದಲಾಗಿ ಐತಿಹಾಸಿಕ ಮಹತ್ವವುಳ್ಳ ಸ್ಥಳಗಳಿಗೆ, ... ರಮಣೀಯ ತಾಣಗಳಿಗೆ, ವಿಜ್ಞಾನ ಕೇಂದ್ರ... ಮ್ಯೂಜಿಯಂಗಳಿಗೆ ಶಾಲಾಮಕ್ಕಳನ್ನು ಕರೆದು... ಹೋಗಲು ಕರಡು ರಚನಾ ಸಮಿತಿ ಪ್ರಸ್ತಾಪಿಸಿದ... ಹೆಸರಿನಲ್ಲಿ ಐತಿಹಾಸಿಕ ಕಟ್ಟಡಗಳ ವಿನಾ... ಬದಲಿಸುವುದನ್ನು ನಿಷೇಧಿಸಲಾಗಿದೆ. ಇನ್ನೂ ... ಪ್ರಗತಿಪರ ವಿಚಾರಗಳನ್ನು ಪ್ರಸ್ತಾಪಿಸಲಾಗಿದೆ.

ಇದರ ಹೊರತಾಗಿಯೂ ಬೆಳೆಯುವ ಸಿ... ಮೊಳಕೆಯಲ್ಲಿಯೇ ನೋಡು ಎನ್ನುವ ಹಾಗೆ ಶಾ...ದಲ್ಲಿಯೇ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ... ಜಾತೀಯತೆಯನ್ನು ಹೋಗಲಾಡಿಸುವ ಅಂ... ಪಠ್ಯಕ್ರಮದಲ್ಲಿ ಅಳವಡಿಸುವ ಇಂಗಿತವನ್ನು ಮು...ಗಳು ವ್ಯಕ್ತಪಡಿಸಿದ್ದಾರೆ. ಇಂತಹ ಮಸೂದೆಯ... ಅಧಿವೇಶನದಲ್ಲಿಯೇ ಮಂಡಿಸುವ ನಿರೀಕ್ಷೆ ಇತ್ತು ... ಸಚಿವ ಸಂಪುಟ ಸಭೆಯಲ್ಲಿ ಮಸೂದೆ ಕರಡನ್ನು ... ಇಲಾಖೆ ಪರಿಶೀಲನಾ ಸಮಿತಿಗೆ ಒಪ್ಪಿಸಲು ... ಕೈಗೊಳ್ಳಲಾಯಿತು. ಅವರು ಪರಾಮರ್ಶೆ ನಡೆಸಿದ ... ಪುನಃ ಈ ಕರಡು ಮಸೂದೆಯನ್ನು ಸಂಪುಟ ... ಮುಂದೆ ತರುವ ಸಾಧ್ಯತೆ ಇದೆ.

ಇಂತಹ ಸೂಕ್ಷ್ಮ ಕಾಯ್ದೆಯನ್ನು ಜಾರಿಗೆ ತರ... ಸರ್ಕಾರ ಸಮಾಜದ ಎಲ್ಲ ವರ್ಗದ ನಾಯಕರು ... ಸಾಹಿತಿಗಳನ್ನು, ಧಾರ್ಮಿಕ ಮುಖಂಡರನ್ನು, ... ಪಂಡಿತರನ್ನು ಹಾಗೂ ಚಿಂತಕರೊಂದಿಗೆ ಚರ್ಚಿ... ಸಲಹೆ ಸೂಚನೆಯನ್ನು ಪಡೆದು ಏನಾದರು ಮಾ...ಗಳಿದ್ದರೆ ಸ್ವೀಕರಿಸಿ ಪುನಃ ಮಾರ್ಪಡಿಸಿ ಮಸೂ... ಮಂಡಿಸಬೇಕೆನ್ನುವುದು ಬಹುಜನರ ಬೇಡಿಕೆ.

-ಬಸವರಾಜ ಬಾಣದ, ಗುಳೇದಗುಡ್ಡ, ಬಾಗ...

ವಿ.ಸೂ. : ನಿಮ್ಮ ಅನಿಸಿಕೆಗಳನ್ನು ... lankesh70@rediffmail.com ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹು... ಪ್ರತಿಕ್ರಿಯೆಗಳನ್ನು 9980331427 ನಂ... ಚಿಕ್ಕದಾಗಿ ಮತ್ತು ಚೊಕ್ಕವಾಗಿ SMS ಕಳುಹಿ...

...ಟೈಲಿಶ್ ಪಾತ್ರವಾದರೂ ಅದಕ್ಕೊಂದು ಜವಾಬ್ದಾರಿ ಇದೆ: ರಾಜ್‌ಕಮಲ್

...ರ್ಮಾಪಕನಾಗಿ ಸಿನಿಮಾರಂಗ ...ಲ್ಲಿ ರಾಜ್‌ಕಮಲ್ ಈಗ ...ಯಕನಾಗಲು ಹೊರಟಿದ್ದಾರೆ. ...ಕ್' ಸಿನಿಮಾದ ಮೂಲಕ ...ಮ್ಮ ಅದೃಷ್ಟ ಪರೀಕ್ಷೆಗೆ ...ಮುಂದಾಗಿದ್ದಾರೆ.

...ಅತಿ ಕಿರಿಯ ವಯಸ್ಸಿನ ನಿರ್ಮಾಪಕ ಎಂಬ ಖ್ಯಾತಿಗೆ ...ದಾಗಿರುವ ಕಮಲ್ ಈಗ ಹೀರೋ. ಇವರು ಈ ...ದ 'ಆರ್ಯನ್' ಸಿನಿಮಾ ಸೇರಿದಂತೆ ಹಲವು ...ಗಳನ್ನು ನಿರ್ಮಾಣ ಮಾಡಿದ್ದಾರೆ. ಅಲ್ಲದೇ ಸಾಕಷ್ಟು ... ನಟರಿಗೆ ಇವರು ಆಪ್ತರು ಅನ್ನುವುದು ವಿಶೇಷ. ...' ಸಿನಿಮಾದ ಮೂಲಕ ನಾಯಕರಾಗುತ್ತಿರುವ ಕಮಲ್ ...ಚಿತ್ರಕ್ಕಾಗಿ ತಮ್ಮ ಹೆಸರನ್ನು ರಾಜ್‌ಕಮಲ್ ಎಂದು ...ಬಾಯಿಸಿದ್ದಾರೆ. ಅವರು ತಮ್ಮ ಹೊಸ ಕನಸಿನ ಕುರಿತು ...ಚಿಕೊಂಡಿದ್ದು ಹೀಗೆ..

** ನಿರ್ಮಾಣ ನಿಮಗೆ ಬೇಸರ ತರಿಸಿದೆಯಾ?*

ಹಾಗೇನೂ ಇಲ್ಲ. ನಮ್ಮ ತಂದೆ ಮತ್ತು ಸಹೋದರ ...ಲಸದಲ್ಲಿ ಮುಂದುವರೆಯುತ್ತಾರೆ. ಈಗಾಗಲೇ ಅನೇಕ ...ಮಾಗಳನ್ನು ನಮ್ಮ ಸಂಸ್ಥೆ ಚಿತ್ರರಂಗಕ್ಕೆ ಕೊಟ್ಟಿದೆ. ಇನ್ನೂ ...ವು ಸಿನಿಮಾಗಳನ್ನು ಕೊಡಬೇಕು ಅನ್ನುವ ಉದ್ದೇಶವೂ ... ಯಾವತ್ತೂ ನಮಗೆ ಸಿನಿಮಾ ರಂಗ ಬೇಸರ ತರಿಸಿಲ್ಲ. ...ದ ಮೂಲಕ ನಾವೇ ಬೆಳೆದಿದ್ದೇವೆ.

** ನಾಯಕನಾಗಬೇಕು ಅಂತ ಅನಿಸಿದ್ದು ಯಾಕೆ?*

ನಾನು ಸಿನಿಮಾ ರಂಗಕ್ಕೆ ಬಂದಿದ್ದೇ ನಾಯಕ ಆಗಬೇಕು ... ನನ್ನ ತಂದೆಯ ಕನಸೂ ಕೂಡ ಅದೇ ಆಗಿತ್ತು. ...ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದಾರೆ ಅನ್ನುವ ಕಾರಣಕ್ಕೆ ಅವರ ಸಹಾಯಕ್ಕೆ ಇದ್ದೆ. ಅಂದುಕೊಂಡಂತೆ ಆಗಿದ್ದರೆ, ಎರಡು ವರ್ಷಗಳ ಹಿಂದೆಯೇ ನಾನು ನಾಯಕ ಆಗಬೇಕಿತ್ತು. ಆದರೆ ಅದಕ್ಕೆ ತಕ್ಕ ಸಿದ್ಧತೆ ಬೇಕು ಅನಿಸಿತು. ದುಡ್ಡು ಇದೆ ಅಂತ ಎಲ್ಲರೂ ಹೀರೋ ಆಗೋಕೆ ಆಗಲ್ಲ. ಹೀಗಾಗಿ ತರಬೇತಿ ಪಡೆದುಕೊಂಡು ಬಂದಿದ್ದೇನೆ.

** ತರಬೇತಿ ಅಂದರೆ? ಏನೆಲ್ಲ ಟ್ರೈನಿಂಗ್ ಪಡೆದಿದ್ದೀರಿ?*


ನಟನಾ ತರಬೇತಿ ಪಡೆದಿದ್ದೇನೆ. ಅಲ್ಲದೇ ಫೈಟ್, ಡಾನ್ಸ್ ಕೂಡ ಕಲಿತಿದ್ದೇನೆ. ದೇಹ ಹುರಿಗೊಳಿಸಿದ್ದೇನೆ. ಹಾಗಂತ ಸಿಕ್ಸ್‌ಪ್ಯಾಕ್ ಮಾಡಿಕೊಂಡಿಲ್ಲ. ಈ ಸಿನಿಮಾಗೆ ಅದರ ಅವಶ್ಯಕತೆನೂ ಇಲ್ಲ. ಎರಡು ವರ್ಷಗಳಲ್ಲಿ ಹಲವರ ಸಿನಿಮಾ ನೋಡಿದ್ದೇನೆ. ಅಲ್ಲದೇ ಶೂಟಿಂಗ್‌ನಲ್ಲಿ ಭಾಗವಹಿಸಿ, ಸ್ವತಃ ಪಾತ್ರಧಾರಿಗಳ ಅನುಭವವನ್ನು ಕೇಳಿದ್ದೇನೆ. ನಮ್ಮ ನಿರ್ದೇಶಕರೂ ಕೂಡ ಪಾತ್ರಕ್ಕೆ ಏನು ಬೇಕೋ, ಆ ತರಬೇತಿಯನ್ನೂ ಕೊಟ್ಟಿದ್ದಾರೆ.

** ರೀಮೇಕ್ ಸಿನಿಮಾ ಆಯ್ಕೆ ಮಾಡಿಕೊಂಡಿದ್ದು ಯಾಕೆ?*

ತೆಲುಗಿನ 'ಇಷ್ಕ್' ಸಿನಿಮಾ ನನ್ನ ನೆಚ್ಚಿನ ಸಿನಿಮಾ. ಅಲ್ಲದೇ ಲಾಂಚ್ ಆಗುವುದಕ್ಕೆ ಒಬ್ಬ ಹೀರೋಗೆ ಏನೆಲ್ಲ ಬೇಕೋ ಅವೆಲ್ಲ ಇದರಲ್ಲಿದೆ. ಹೀಗಾಗಿ ಆಯ್ಕೆ ಮಾಡಿಕೊಂಡೆ. ಹಾಗಂತ ನೇರವಾಗಿ ಚಿತ್ರವನ್ನು ಭಟ್ಟಿ ಇಳಿಸುತ್ತಿಲ್ಲ. ಕನ್ನಡಕ್ಕೆ ಹೊಂದುವಂತೆ ಕೆಲವು ಬದಲಾವಣೆಯನ್ನು ಮಾಡಿಕೊಂಡಿದ್ದೇವೆ. ಇಲ್ಲಿನ ಪ್ರೇಕ್ಷಕರನ್ನು ಮೆಚ್ಚಿಸುವ ಕೆಲಸವನ್ನು ಮಾಡುತ್ತೇವೆ.

** ನಿಮ್ಮದು ಚೊಚ್ಚಲು ಸಿನಿಮಾ. ನಿರ್ದೇಶಕರದ್ದೂ ಇದು ಮೊದಲ ಸಿನಿಮಾ?*

ಈ ಚಿತ್ರವನ್ನು ಕೊಟ್ರೇಶ್ ಅನ್ನುವವರು ನಿರ್ದೇಶನ ಮಾಡುತ್ತಿದ್ದಾರೆ. ಇದು ಅವರ ಚೊಚ್ಚಲು ಸಿನಿಮಾವಾಗಿದ್ದರೂ ಸಿನಿಮಾ ರಂಗದಲ್ಲಿ ಅವರಿಗೆ ಸಾಕಷ್ಟು ಅನುಭವವಿದೆ. ಅಲ್ಲದೇ ಕಿರುತೆರೆಯಲ್ಲೂ ಅವರು ಸಾಕಷ್ಟು ಕೆಲಸ ಮಾಡಿದ್ದಾರೆ. ಇತ್ತೀಚಿಗೆ ಹೊಸ ನಿರ್ದೇಶಕರ ಚಿತ್ರಗಳೂ ಗೆಲ್ಲುತ್ತಿವೆ. ಹೊಸ ಆಲೋಚನೆಯ ಜತೆಗೆ ಅವರು ಗುರುತಿಸಿಕೊಳ್ಳುತ್ತಿದ್ದಾರೆ. ಇದು ನಮ್ಮ ಚೊಚ್ಚಲು ಸಿನಿಮಾ ಅಂತ ಅನಿಸುವುದಿಲ್ಲ. ಹಾಗೆ ಮೇಕಿಂಗ್ ಇರುತ್ತದೆ.



** ನಾಯಕಿ ಯಾರು? ತಾರಾಗಣದಲ್ಲಿ ಇನ್ಯಾರಿದ್ದಾರೆ?*

ನಾಯಕಿಯ ಆಯ್ಕೆ ನಡೆಯುತ್ತಿದೆ. ನಾಯಕನಷ್ಟೇ ನಾಯಕಿಯ ಪಾತ್ರವೂ ಗಟ್ಟಿಯಾಗಿದೆ. ಹೀಗಾಗಿ ಹುಡುಕಾಟ ನಡೆದಿದೆ. ತಾರಾಗಣದಲ್ಲಿ ಬುಲೆಟ್ ಪ್ರಕಾಶ್ ಇದ್ದಾರೆ. ಶರಣ್ ಎಂಬ ಮತ್ತೊಬ್ಬ ಕಲಾವಿದನನ್ನು ಈ ಸಿನಿಮಾದ ಮೂಲಕ ಪರಿಚಯಿಸುತ್ತಿದ್ದೇವೆ. ಆದಿ ಲೋಕೇಶ್ ಕೂಡ ವಿಭಿನ್ನ ಪಾತ್ರ ನಿರ್ವಹಿಸುತ್ತಿದ್ದಾರೆ.

** ನಿಮ್ಮ ಪಾತ್ರದ ಬಗ್ಗೆ ಹೇಳಿ? ಅದರ ಹಿನ್ನೆಲೆ ಏನು?*


ಪ್ರೀತಿಯನ್ನು ಪ್ರೀತಿಯಿಂದಲೇ ಗೆಲ್ಲಬೇಕು ಅನ್ನುವುದು ಸಿನಿಮಾದ ಕತೆ. ಪಾತ್ರವೂ ಹಾಗೆಯೇ ಇದೆ. ತುಂಬಾ ಮುದ್ದಾದ ಹುಡುಗ ಅವನು. ತನ್ನ ಪ್ರೀತಿಯನ್ನು ಪಡೆಯೋಕೆ ಏನೆಲ್ಲ ಸಾಹಸ ಮಾಡುತ್ತಾನೋ ಅದು ಚಿತ್ರಕತೆ. ತುಂಬಾ ಸ್ಟೈಲಿಶ್ ಪಾತ್ರವದು. ಆದರೆ ಅದಕ್ಕೊಂದು ಜವಾಬ್ದಾರಿ ಇದೆ. ವಿಶೇಷ ಹಿನ್ನೆಲೆಯೂ ಇದೆ. ಅದಕ್ಕೆ ಒಂದಿಷ್ಟು ಸಸ್ಪೆನ್ಸ್ ಬೆರೆಸಿದ್ದೇವೆ. ಅಲ್ಲದೇ ಕಾಮಿಡಿಯೂ ಇದೆ.

** ಸಿನಿಮಾದಲ್ಲಿ ಇನ್ನೇನು ವಿಶೇಷತೆಗಳಿವೆ?*

'ಸಂಜು ವೆಡ್ಸ್ ಗೀತಾ' ಸೇರಿದಂತೆ ಹಲವು ಹಿಟ್ ಚಿತ್ರಗಳಿಗೆ ಸಂಗೀತ ನಿರ್ದೇಶನ ಮಾಡಿರುವ ಜೆಸ್ಸಿ ಗಿಫ್ಟ್ ಈ ಚಿತ್ರಕ್ಕೂ ಸಂಗೀತ ನೀಡಿದ್ದಾರೆ. ಆರ್.ಗಿರಿ ಅವರ ಸಿನಿಮಾಟೋಗ್ರಫಿಯಲ್ಲಿ ಚಿತ್ರ ಮೂಡಿಬರಲಿದೆ. 60ಕ್ಕೂ ಹೆಚ್ಚು ದಿನ ಶೂಟಿಂಗ್ ನಡೆಯಲಿದ್ದು, ಕರ್ನಾಟಕ, ಗೋವಾ ಮತ್ತಿತರ ರಾಜ್ಯಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಎಂದಿನಂತೆ ನನ್ನ ತಂದೆ ಕೆ.ಬಾಬು ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ. ■

...ಲ್ಪಸಂಖ್ಯಾತರ ವಿಶ್ವವಿದ್ಯಾನಿಲಯಗಳನ್ನು ಮುಚ್ಚುವ ಹುನ್ನಾರ?


...ಪ್ರಧಾನಿ ಹುದ್ದೆಗೆ ಪ್ರಮೋಷನ್ ಸಿಕ್ಕ ನಂತರದಲ್ಲಿ ...ಒಬ್ಬ ಮಹಾ ಸಂಭಾವಿತನೆಂಬಂತೆ ತೋರಿಸಿಕೊಳ್ಳು...ವ ಸ್ವಯಂಸೇವಕ ಮೋದಿ ಈಗೀಗ ಸಂವಿಧಾನ, ...ಪ್ರಭುತ್ವ, ಸಹಿಷ್ಣುತೆ, ಬಹುಸಂಸ್ಕೃತಿ ಬಗ್ಗೆಯೂ ...ಯತೊಡಗಿದ್ದಾನೆ. ಇದೆಲ್ಲವೂ ಮನದಾಳದ ಪ್ರಾಮಾಣಿಕ ...ಅಲ್ಲವೆಂದು ನಮಗೆಲ್ಲರಿಗೂ ತಿಳಿದಿದೆ. ಆದರೆ ಇವತ್ತು ...ದಿ ಮುಂದೆ ಎಂತಹ ಸನ್ನಿವೇಶಗಳು ಸೃಷ್ಟಿಯಾಗಿವೆ ...ದರೆ ಕೇವಲ ತೋರಿಕೆಗೋಸ್ಕರ ಇಂಥಾ ನಾಟಕೀಯ ...ತುಗಳನ್ನಾಡುವ ಅನಿವಾರ್ಯತೆ ಬಂದುಬಿಟ್ಟಿದೆ. ಅತ್ತ ...ಷನ್‌ನ ಪ್ರಧಾನ ಕದನರಂಗದ ಉಸ್ತುವಾರಿಯನ್ನು ಸಂಘ ...ವಾರದ ಗಣಗಳು ನೋಡಿಕೊಳ್ಳುತ್ತಾ ಇರುವುದರಿಂದ ...ದಿಗೆ ಅದರ ಕುರಿತು ಹೆಚ್ಚು ತಲೆಬಿಸಿ ಮಾಡಿಕೊಳ್ಳುವ ...ಶ್ಯ ಇಲ್ಲವಾಗಿದೆ. ನಿಜ. ಹೇಳಬೇಕೆಂದರೆ ಸಾಮಾಜಿಕ, ...ಕೃತಿಕ ವಲಯಗಳ ಕೇಸರೀಕರಣ ಮತ್ತು ಘರ್ ವಾಪಸಿ, ... ಜಿಹಾದ್, ಚರ್ಚ್ ದಾಳಿ, ಬೀಫ್ ದಾಳಿ, ದಲಿತರ ...ಲೆ ದಾಳಿ, ಸಾಹಿತಿಗಳ ಮೇಲೆ ವಾಗ್ದಾಳಿ ಮುಂತಾದ ...ತ, ಅಲ್ಪಸಂಖ್ಯಾತ ವಿರೋಧಿ ಕಾರ್ಯಾಚರಣೆಗಳು ... ನಿರೀಕ್ಷೆಗೂ ಮೀರಿ ಹಿಂದೆಂದೂ ಇರದ ಮಟ್ಟಕ್ಕೆ ...ಮವುದರಿಂದ ಆತ ನಿರುಮ್ಮಳವಾಗಿದ್ದಾನೆ.



...ಕದನರಂಗದಿಂದ ಬರುತ್ತಿರುವ ಇತ್ತೀಚಿನ ವರ್ತಮಾನ ...ಪ್ರಕಾರ ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ...ರ್ಥಿಗಳಿಗೆ ಸ್ಕಾಲರ್‌ಶಿಪ್ ವಿತರಣೆಯಲ್ಲಿ ಉದ್ದೇಶ ...ಪೂರ್ವಕ ವಿಳಂಬನೀತಿ ಶುರುವಾಗಿದೆ. ಪರಿಣಾಮವಾಗಿ ...ಕ ಅರ್ಹ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಅರ್ಧಕ್ಕೆ ...ಸಬೇಕಾದ ಪರಿಸ್ಥಿತಿ ಬಂದಿದೆ. ಇದರೊಂದಿಗೆ ...ಸಂಖ್ಯಾತರ ವಿಶ್ವವಿದ್ಯಾನಿಲಯಗಳನ್ನು ಮುಚ್ಚಿಸುವ ...ಂದು ಹುನ್ನಾರವೂ ಜಾರಿಗೊಂಡಿರುವ ಸೂಚನೆಗಳು ...ಚರಿಸುತ್ತಿವೆ. ಇತ್ತೀಚಿಗೆ ಜಾಮಿಯಾ ಮಿಲಿಯಾ ...ಮಿಯಾ ವಿಶ್ವವಿದ್ಯಾನಿಲಯದಲ್ಲಿ ಹಮ್ಮಿಕೊಳ್ಳಲಾಗಿದ್ದ ...ರ ಸಂಕಿರಣವೊಂದಕ್ಕೆ ವಿಶೇಷ ಆಹ್ವಾನಿತನಾಗಿ ...ದಿಯ ನಿಕಟವರ್ತಿಯಾದ ಸುರೇಶ್ ಜಫರ್‌ವಾಲ ... ಗುಜರಾತಿ ವಾಣಿಜ್ಯೋದ್ಯಮಿಯನ್ನು ಕರೆಸಲಾಗಿತ್ತು. ...ರೇಶ್ ಯಾವುದೇ ಸಾಂವಿಧಾನಿಕ ಹುದ್ದೆಯಲ್ಲಿ ಇಲ್ಲ. ...ಗಲಿ, ಕನಿಷ್ಠ ಶೈಕ್ಷಣಿಕ ಕ್ಷೇತ್ರದಲ್ಲಾದರೂ ಏನಾದರೂ ... ಮಾಡಿದ್ದಾರಾ ಎಂದು ನೋಡಲು ಹೊರಟರೆ ... ಶೂನ್ಯ ಎದುರಾಗುತ್ತದೆ. ಹೀಗಾಗಿ ಈತನನ್ನೂ ... ಸಂಸದೀಯ ವ್ಯವಹಾರಗಳ ಸಚಿವ ಮುಖ್ತಾರ್ ...ರ್ ನಕ್ವಿಯನ್ನೂ ಕಾರ್ಯಕ್ರಮಕ್ಕೆ ಕರೆಸಿದ್ದು ಕೇವಲ ...ವಿವೇನನ್ನು ಮುಚ್ಚಿಹಾಕಿಸುವುದಕ್ಕೋಸ್ಕರ ಎನ್ನುವುದು ... ಇತ್ತೀಚಿನ ವರದಿಗಳು ಹೇಳುವಂತೆ ಮೋದಿ ...ರ ಅಲ್ಲಿ ಮಾಜಿ ರಾಷ್ಟ್ರಪತಿ ಕೆ.ಆರ್.ನಾರಾಯಣನ್ ಹೆಸರಿನಲ್ಲಿರುವ ದಲಿತ ಮತ್ತು ಅಲ್ಪಸಂಖ್ಯಾತರ ಅಧ್ಯಯನ ಕೇಂದ್ರ ಮತ್ತು ಜವಾಹರ್‌ಲಾಲ್ ನೆಹರೂ ಅಧ್ಯಯನ ಕೇಂದ್ರಗಳನ್ನು ಮುಚ್ಚುವಂತೆ ಆಡಳಿತದ ಮೇಲೆ ಒತ್ತಡ ಹೇರುತ್ತಿದೆ. 'ನಿಮ್ಮ ವಿಶ್ವವಿದ್ಯಾನಿಲಯಕ್ಕೆ ಸಾಕಷ್ಟು ಅನುದಾನ ಬೇಕಿದ್ದರೆ ಆರೆಸ್ಸೆಸ್ ಸಿದ್ಧಾಂತವಾದಿ ದೀನ ದಯಾಳ್ ಉಪಾಧ್ಯಾಯ ಹೆಸರಲ್ಲಿ ಒಂದು ಅಧ್ಯಯನ ಕೇಂದ್ರ ತೆರೆಯಿರಿ' ಎಂದು ಆಡಳಿತಕ್ಕೆ ತಿಳಿಸಲಾಗಿದೆಯಂತೆ. ಆದರೆ ಸಿಬ್ಬಂದಿ ವರ್ಗದಿಂದ ಬರಬಹುದಾದ ಪ್ರತಿರೋಧವನ್ನು ಮನಗಂಡ ಆಡಳಿತ ಸದರಿ ಅಧ್ಯಯನ ಕೇಂದ್ರಗಳನ್ನು ಮುಚ್ಚುವ ಕುರಿತ ನಿರ್ಧಾರವನ್ನು ಸದ್ಯಕ್ಕೆ ತಡೆಹಿಡಿದಿರುವುದಾಗಿ ತಿಳಿದುಬಂದಿದೆ. ಮೋದಿ ಸರ್ಕಾರ ಪ್ರಯೋಗಿಸುತ್ತಿರುವ ನಾನಾ ಪರೋಕ್ಷ ಒತ್ತಡಗಳ ಇನ್ನೊಂದು ಆಯಾಮವನ್ನು "ಯುಜಿಸಿ ಆಕ್ರಮಿಸು" ಚಳವಳಿಗೆ ಸಂಬಂಧಿಸಿಯೂ ಕಾಣಬಹುದಾಗಿದೆ. ಉದಾಹರಣೆಗೆ ಜಾಮಿಯಾ ವಿವಿಯ ವಿಭಾಗೀಯ ಮುಖ್ಯಸ್ಥರು ತಮ್ಮ ಕೈಕೆಳಗಿನ ವಿದ್ಯಾರ್ಥಿಗಳನ್ನು ಕರೆದು ಪ್ರತಿಭಟನೆಯ ಸ್ಥಳಕ್ಕೆ ಹೋಗದಂತೆ ಸೂಚಿಸಿದ್ದಾರೆಂದು ವಿದ್ಯಾರ್ಥಿಗಳು ಆರೋಪಿಸಿದ್ದಾರೆ. ಇದೆಲ್ಲ ಉಪಕುಲಪತಿಗಳ ಆದೇಶದ ಮೇರೆಗೆ ನಡೆಯುತ್ತಿದೆ ಎಂದು ವಿದ್ಯಾರ್ಥಿಗಳು ಹೇಳುತ್ತಿದ್ದಾರೆ. ಜಾಮಿಯಾ ವಿವಿ ಕ್ಯಾಂಪಸ್ ಒಳಗಡೆ ಪ್ರಜಾಸತ್ತಾತ್ಮಕ ವಾತಾವರಣ ಇಲ್ಲ, ಭಿನ್ನಾಭಿಪ್ರಾಯ ಅಭಿವ್ಯಕ್ತಿಗೆ ವೇದಿಕೆ ಇಲ್ಲವೆಂಬ ದೂರುಗಳು ಬಹಳ ಸಮಯದಿಂದ ಕೇಳಿಬರುತ್ತಿವೆ. ವಿದ್ಯಾರ್ಥಿ ಸಂಘ ಇಲ್ಲದೆ ಹತ್ತು ವರ್ಷಗಳೇ ಕಳೆದಿದ್ದು ಇದರ ಹಿಂದೆ ಸರಕಾರ ಮತ್ತು ಆಡಳಿತಗಳೆರಡರದೂ ಕೈವಾಡವಿದೆ ಎಂಬುದು ವಿದ್ಯಾರ್ಥಿಗಳ ಆರೋಪ. ಕೇಂದ್ರದಲ್ಲಿ ಹಿಂದೆ ವಾಜಪೇಯಿ ನೇತೃತ್ವದ ಎನ್‌ಡಿಎ 1 ಸರ್ಕಾರ ಇದ್ದಾಗ 2000ನೆ ಇಸವಿಯಲ್ಲೊಮ್ಮೆ ಪೊಲೀಸರು ಸೀದಾ ಹಾಸ್ಟೆಲ್ ಒಳಗಡೆ ನುಗ್ಗಿ ವಿದ್ಯಾರ್ಥಿಗಳನ್ನು ನಿರ್ದಯವಾಗಿ ಥಳಿಸಿದ ಘಟನೆ ನಡೆದಿತ್ತು.

ಆಲಿಗಢ ಮುಸ್ಲಿಂ ವಿಶ್ವವಿದ್ಯಾನಿಲಯ ಕೂಡ ಇಂತಹುದೇ ಸಮಸ್ಯೆಗಳನ್ನು ಎದುರಿಸುತ್ತಿದೆ. ವಾಸ್ತವವಾಗಿ ಇದೊಂದು ಅಲ್ಪಸಂಖ್ಯಾತ ಸಂಸ್ಥೆಯೇ ಅಲ್ಲ. ಆದರೆ ಅದರ ಹೆಸರಿನ ಕಾರಣಕ್ಕಾಗಿ ಸಾರ್ವಜನಿಕರಲ್ಲಿ ಅಂತಹುದೊಂದು ಅಭಿಪ್ರಾಯ ಹುಟ್ಟಿಕೊಂಡಿದೆ. ಆಲಿಗಢ ವಿವಿಯಲ್ಲಿಯೂ ಪ್ರಜಾಸತ್ತಾತ್ಮಕ ವಾತಾವರಣವನ್ನು ಹತ್ತಿಕ್ಕುವ ಪ್ರಯತ್ನಗಳು ಸರ್ಕಾರದ ವತಿಯಿಂದ ನಡೆಯುತ್ತಿವೆ ಎಂದು "ಯುಜಿಸಿ ಆಕ್ರಮಿಸು" ಚಳವಳಿಯಲ್ಲಿ ಭಾಗವಹಿಸುತ್ತಿರುವ ಅಲ್ಲಿನ ವಿದ್ಯಾರ್ಥಿಗಳು ಹೇಳುತ್ತಿದ್ದಾರೆ. ಕಳೆದ ವರ್ಷ ಸಂಘ ಪರಿವಾರದ ಮಂದಿ ಇದೇ ಮೊದಲ ಬಾರಿಗೆ ಕ್ಯಾಂಪಸ್ ಒಳಗಡೆ ರಾಜಾ ಮಹೇಂದ್ರ ಪ್ರತಾಪರ ಜನ್ಮದಿನವನ್ನು ಆಚರಿಸಲು ಭಾರಿ ಪ್ರಯತ್ನ ಮಾಡಿದ್ದರು. 1895ರಲ್ಲಿ ಮೊಹಮ್ಮಡನ್ ಆಂಗ್ಲೊ ಓರಿಯೆಂಟಲ್ ಕಾಲೇಜು ಸೇರಿದ್ದ ಮಹೇಂದ್ರ ಪ್ರತಾಪ ಪದವಿ ಶಿಕ್ಷಣ ಪೂರೈಸದೆ 1905ರಲ್ಲಿ ಕಾಲೇಜು ಬಿಟ್ಟಿದ್ದರೂ ಆತನನ್ನು ಹಳೆ ವಿದ್ಯಾರ್ಥಿ ಎಂದು ಪರಿಗಣಿಸಲಾಗುತ್ತಿದೆ. ಅಂದಹಾಗೆ ಈ ಮಹೇಂದ್ರ ಪ್ರತಾಪ ಹಿಂದೊಮ್ಮೆ (1957ರ ಚುನಾವಣೆಗಳಲ್ಲಿ) ವಾಜಪೇಯಿಯನ್ನು ಸೋಲಿಸಿದ ವ್ಯಕ್ತಿ. ಆಲಿಗಢ ವಿವಿ ಸ್ಥಾಪಕರಾದ ಸರ್ ಸಯ್ಯದ್ ಅಹಮದ್ ಖಾನ್ ವಿಶ್ವವಿದ್ಯಾನಿಲಯಕ್ಕೆ ಭೂಮಿಯನ್ನು ನೀಡಿದ್ದರು. 1929ರಲ್ಲಿ ಮಹೇಂದ್ರ ಪ್ರತಾಪ ಕೂಡ ವಿವಿಗೆ ಒಂದಿಷ್ಟು ಭೂಮಿಯನ್ನು ವಾರ್ಷಿಕ 2 ರೂ ಲೀಸ್‌ಗೆ ನೀಡಿದ್ದರು. ಆದುದರಿಂದ ಮಹೇಂದ್ರ ಪ್ರತಾಪನ ಹುಟ್ಟುಹಬ್ಬವನ್ನೂ ಸಯ್ಯದ್ ಅಹಮದ್ ಖಾನ್ ಜನ್ಮ ದಿನಾಚರಣೆ ಮಾದರಿಯಲ್ಲೆ ಆಚರಿಸಬೇಕೆಂದು ಬಿಜೆಪಿ ಒತ್ತಾಯಿಸಿತು. ಕೊನೆಗೆ ಕ್ಯಾಂಪಸ್ ಒಳಗಡೆ ವಿಚಾರಸಂಕಿರಣ ಏರ್ಪಡಿಸುವುದೆಂದೂ ಹುಟ್ಟುಹಬ್ಬವನ್ನು ಕ್ಯಾಂಪಸ್ ಹೊರಗೆ ಆಚರಿಸುವುದೆಂದೂ ನಿರ್ಧರಿಸಲಾಯಿತು. ಆದರೆ ಹುಟ್ಟುಹಬ್ಬದಲ್ಲಿ ವಿದ್ಯಾರ್ಥಿ ಸಂಘಟನೆಯ ಮುಖಂಡರು ಮತ್ತು ಉಪಕುಲಪತಿ ಜೊತೆಗೆ ಓರ್ವ ಆರೆಸ್ಸೆಸ್ ಪದಾಧಿಕಾರಿಯೂ ಭಾಗವಹಿಸಿದುದನ್ನು ಕಂಡಾಗ ಅದನ್ನು ವಿರೋಧಿಸಿದ ವಿದ್ಯಾರ್ಥಿಗಳು ಸಮಾರಂಭಕ್ಕೆ ಅಡ್ಡಿ ಉಂಟುಮಾಡಿದರು. ಹಿಂದೆ ವಿದ್ಯಾರ್ಥಿಗಳ ವರ್ಗವೊಂದು ಪಾಕಿಸ್ತಾನ ರಚನೆಗೆ ಬೆಂಬಲ ಸೂಚಿಸಿತ್ತೆಂಬ ಏಕೈಕ ಕಾರಣಕ್ಕಾಗಿ ಮಾಧ್ಯಮಗಳಲ್ಲಿ ಇಂದಿಗೂ ಆಲಿಗಢ ವಿವಿ ಬಗ್ಗೆ ಪೂರ್ವಗ್ರಹ ಮತ್ತು ಶಂಕೆಗಳಿವೆ ಎಂದು ಇತಿಹಾಸ ವಿಭಾಗದ ಪ್ರೊ! ಸಯ್ಯದ್ ಅಲಿ ನಜಮ್ ಹೇಳುತ್ತಾರೆ.

ಬೂಸಿ ಬಸ್ಯ... ಮೋದಿ!



ಆಲಿಗಢ ವಿಶ್ವವಿದ್ಯಾನಿಲಯಕ್ಕೆ ಸೇರಿದ ಜವಹರ್‌ಲಾಲ್ ನೆಹರೂ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳೂ ಅಸಂತುಷ್ಟರಾಗಿದ್ದಾರೆ. ಅವರು ಕೇಂದ್ರ ಸರ್ಕಾರ ತಮ್ಮ ವಿವಿಗೆ ಇತರ ವಿವಿಗಳಿಗಿಂತಲೂ ಕಡಮೆ ಅನುದಾನ ನೀಡುತ್ತಿದೆ ಎಂದು ಆರೋಪ ಮಾಡುತ್ತಿದ್ದಾರೆ. ಭಾರತದಲ್ಲಿ ಶಿಕ್ಷಣಕ್ಷೇತ್ರಕ್ಕೆ ನೀಡುವ ಅನುದಾನ (ಜಿಡಿಪಿಯ 3.3%) ಈಗಾಗಲೆ ಜಾಗತಿಕ ಸರಾಸರಿಗಿಂತ (4.9%) ಕಡಿಮೆ ಇದೆ. ಆದರೆ ಸಂಪೂರ್ಣ ಖಾಸಗೀಕರಣ ಸ್ನೇಹಿಯಾದ ಮೋದಿ ಸರ್ಕಾರ ಬಂದನಂತರ ಅನುದಾನದ ಮೊತ್ತದಲ್ಲಿ ಇನ್ನಷ್ಟು ಕಡಿತ ಆಗಿರುವುದು ಇವತ್ತಿನ ಕಟು ವಾಸ್ತವ.

ರಾಷ್ಟ್ರೀಯ ಅರ್ಹತಾ ಪರೀಕ್ಷೆಯ (NET) ಮಾರ್ಗವ ಮೂಲಕ ಬಾರದ ಸಂಶೋಧನಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವಿಕೆಯನ್ನು ಹಿಂದೆಗೆದುಕೊಳ್ಳುವ ಮೋದಿ ಸರ್ಕಾರದ ನಿರ್ಧಾರವನ್ನು ವಿರೋಧಿಸಿ ಕಳೆದ ಸುಮಾರು ಒಂದೂವರೆ ತಿಂಗಳಿಂದ ನವದೆಹಲಿಯಲ್ಲಿ "ಯುಜಿಸಿ ಆಕ್ರಮಿಸು" ಪ್ರತಿಭಟನೆ ನಡೆಯುತ್ತಿದೆ. ಪ್ರತಿಭಟನಾಕಾರರ ಮುಖ್ಯ ಬೇಡಿಕೆಗಳೆಂದರೆ ವಿದ್ಯಾರ್ಥಿವೇತನದ ಮೊತ್ತವನ್ನು ಇನ್ನಷ್ಟು ಹೆಚ್ಚಿಸಬೇಕು, ರಾಜ್ಯ ಮಟ್ಟದ ಸಂಶೋಧನಾ ವಿದ್ಯಾರ್ಥಿಗಳಿಗೂ ವೇತನ ನೀಡಬೇಕು ಮತ್ತು ಇನ್ನಷ್ಟು ಖಾಸಗೀಕರಣಕ್ಕೆ ಇಂಬು ನೀಡುವ ಡಬ್ಲ್ಯುಟಿಒ ಒಪ್ಪಂದಕ್ಕೆ ಸಹಿ ಹಾಕಬಾರದು. "ಯುಜಿಸಿ ಆಕ್ರಮಿಸು" ಚಳವಳಿಯ ಮುಂಚೂಣಿಯಲ್ಲಿರುವ ಜಾಮಿಯಾ ಮತ್ತು ಆಲಿಗಢ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳು ಈ ಮೇಲ್ಕಂಡ ವಿಷಯದ ಜೊತೆಗೆ ಕೇಂದ್ರದ ಕಾರ್ಪೊರೇಟ್ ನೀತಿ ಮತ್ತು ರೂಢಿಗತ ನಿಲುವಿನ ವಿರುದ್ಧವೂ ಪ್ರತಿಭಟಿಸುತ್ತಿದ್ದಾರೆ.

(ಆಧಾರ: 5.12.2015ರ ತೆಹಲ್ಕಾದಲ್ಲಿ ಅಸದ್ ಅಶ್ರಫ್ ಲೇಖನ)

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 23-12-2015 RNI No. KARKA



ಎರಡು ದೋಣಿ ಪಯಣ

ತಮಿಳಿನ 'ಉತ್ತಮ್ ವಿಲನ್' ಚಿತ್ರ ಫ್ಲಾಪ್ ಆದನಂತರ ರಮೇಶ್ ಅರವಿಂದ್ ಮತ್ತೆ ನಿರ್ದೇಶನದತ್ತ ಮುಖ ಮಾಡಿಲ್ಲ. ಸುನೀಲ್ ಕುಮಾರ್ ದೇಸಾಯಿ ಚಿತ್ರದಲ್ಲಿ ನಟಿಸುತ್ತಿದ್ದರೂ ಅವರ ಕೈಯಲ್ಲಿ ಚಿತ್ರಗಳಿಲ್ಲ. ಹೀಗಾಗಿ ಅವರು ಮತ್ತೆ ನಿರೂಪಣೆಯತ್ತ ಮುಖ ಮಾಡಿದ್ದಾರೆ. ಈ ಬಾರಿ ಎರಡು ಚಾನೆಲ್‌ಗಳಿಗೆ ಕಾರ್ಯಕ್ರಮ ಮಾಡಿಕೊಡುವುದಾಗಿ ಒಪ್ಪಿಕೊಂಡಿದ್ದಾರೆ. ರಮೇಶ್‌ರ ಈ ನಡೆಗೆ ಜೀ ವಾಹಿನಿಯ ಮುಖ್ಯಸ್ಥರಿಂದ ವಿರೋಧ ವ್ಯಕ್ತವಾಗಿದೆ. ಮತ್ತೊಂದು ವಾಹಿನಿಯ ಕಾರ್ಯಕ್ರಮವನ್ನು ಕೈ ಬಿಡುವುದಾಗಿ ಕೇಳಿಕೊಂಡಿದ್ದಾರೆ. ಆದರೆ ರಮೇಶ್ ಇದಕ್ಕೆ ಒಪ್ಪಿಲ್ಲ.

ಜೀ ವಾಹಿನಿಯ 'ವೀಕೆಂಡ್ ವಿತ್ ರಮೇಶ್' ಇವರಿಗೆ ದೊಡ್ಡ ಹೆಸರು ತಂದುಕೊಟ್ಟ ಶೋ. ಇದಕ್ಕಿಂತ ಮುಂಚೆ 'ಪ್ರೀತಿಯಿಂದ ರಮೇಶ್' ಕಾರ್ಯಕ್ರಮ ಕೂಡ ಇವರ ಕೈ ಹಿಡಿದಿತ್ತು. ಹೀಗಾಗಿ ಎರಡು ದೋಣಿಯ ಪಯಣಕ್ಕೆ ರಮೇಶ್ ಸಿದ್ಧರಾಗಿದ್ದಾರೆ. ಎರಡೂ ಒಂದೇ ಚೌಕಟ್ಟಿನಲ್ಲಿ ಮೂಡಿಬರುತ್ತಿರುವ ಕಾರ್ಯಕ್ರಮ. ಹೀಗಾಗಿ ಪ್ರೇಕ್ಷಕರು ಗೊಂದಲದಲ್ಲಿದ್ದಾರೆ.

ಕವಿರಾಜ್ ಕನಸು

'ಮದುವೆ ಮಮತೆಯ ಕರೆಯೋಲೆ' ಸಿನಿಮಾದ ಮೂಲಕ ನಿರ್ದೇಶಕರಾಗುತ್ತಿದ್ದಾರೆ ಕವಿರಾಜ್. ತಮ್ಮ ಚೊಚ್ಚಲು ಸಿನಿಮಾಗಾಗಿ ಅವರು ವಿಶೇಷ ಕತೆಯನ್ನು ಆಯ್ಕೆ ಮಾಡಿಕೊಂಡಿದ್ದು, ಸೂರಜ್ ಅನ್ನುವ ಹೊಸ ಹುಡುಗನನ್ನು ಚಿತ್ರರಂಗಕ್ಕೆ ಪರಿಚಯಿಸುತ್ತಿದ್ದಾರೆ. ಅಮೂಲ್ಯ ನಾಯಕಿ.



ಬುಲೆಟ್ ಪ್ರಕಾಶ್‌ಗೆ ಕಿರಿಕಿರಿ

ಕನ್ನಡ ಸಿನಿಮಾ ರಂಗದ ಹಲವರು ಬುಲೆಟ್ ಪ್ರಕಾಶ್‌ಗೆ ತೊಂದರೆ ಕೊಡುತ್ತಿದ್ದಾರಂತೆ. ಇಲ್ಲಸಲ್ಲದ ಸುದ್ದಿಗಳನ್ನು ಹರಿಬಿಟ್ಟು ಕಿರಿಕಿರಿ ಕೊಡುತ್ತಿದ್ದಾರಂತೆ. ಮುನ್ನೂರು ಚಿಲ್ರೆ ಚಿತ್ರಗಳಲ್ಲಿ ನಟಿಸಿರುವ ಪ್ರಕಾಶ್ ಅಂದುಕೊಂಡಷ್ಟು ಬಿಜಿ ಏನೂ ಇಲ್ಲ, ಆದರೂ ಎಲ್ಲಾ ಕಡೆ ಪ್ರಕಾಶ್ ಬಿಜಿ ಅನ್ನುವ ಮಾತು ಕೇಳಿ ಬರುತ್ತಿದೆ. ಇವರು ಮತ್ತೊಂದು ಸಿನಿಮಾವನ್ನು ನಿರ್ಮಾಣ ಮಾಡುತ್ತಿದ್ದಾರೆ ಅನ್ನುವ ಬಿಟ್ಟಿ ಪ್ರಚಾರ ಕೂಡ ಕೆಲವರಿಂದ ನಡೆಯುತ್ತಿದೆ. ಈ ಕುರಿತು ಪ್ರಕಾಶ್ ಖಾರವಾಗಿಯೇ ಉತ್ತರಿಸುತ್ತಾರೆ.

"ನನ್ನ ಬಗ್ಗೆ ಸುಳ್ಳು ಸುದ್ದಿ ಹೇಳುವವರ ನಂಬರ್ ಕೊಡಿ, ನಾನೇ ಅವರನ್ನು ವಿಚಾರಿಸುತ್ತೇನೆ. ಈ ರೀತಿ ಕಿರಿಕಿರಿ ಮಾಡುವುದರ ಹಿಂದೆ ಯಾವ ಉದ್ದೇಶ ಇದೆ ಅನ್ನುವುದು ನನಗೂ ಗೊತ್ತಾಗಬೇಕು. ಸಿನಿಮಾ ನಿರ್ಮಾಣ ಮಾಡುವುದು ಸದ್ಯಕ್ಕಂತೂ ಆಗದ ಕೆಲಸ. ನಿರ್ಮಾಣ ಮಾಡುವಾಗ ನಾನೇ ಅದನ್ನು ತಿಳಿಸುತ್ತೇನೆ" ಅಂದಿದ್ದಾರೆ.



ಬುಲೆಟ್‌ಗೆ ಸಿನಿಮಾ ನಿರ್ಮಾಣಕ್ಕಿಂತ ಮಗನನ್ನು ಹೀರೋ ಮಾಡುವ ಕನಸು ಇದೆಯಂತೆ. ಅದಕ್ಕಾಗಿಯೇ ಆತನಿಗೆ ಡಾನ್ಸ್ ಕಲಿಸುತ್ತಿದ್ದಾರೆ. ಮುಂದೊಂದು ದಿನ ತಮ್ಮ ಕನಸು ನನಸಾಗಲಿದೆ ಅಂದಿದ್ದಾರೆ.

ರಿಯಲ್ ಹೀರೋ ಯಾರು?

ಬಿಗ್‌ಬಾಸ್ ಕಾರ್ಯಕ್ರಮದಲ್ಲಿ ಸುದೀಪ್ ಮತ್ತು ಶಿವರಾಜ್‌ಕುಮಾರ್ ಒಂದಾಗಿದ್ದಾರೆ. ಈ ಸಂದರ್ಭದಲ್ಲಿ ಇವರಿಬ್ಬರೂ ಆಡಿದ ಮಾತುಗಳು ಅವರ ಅಭಿಮಾನಿಗಳಿಗೆ ಬೇಸರ ತರಿಸಿದೆ. ಶಿವರಾಜ್‌ಕುಮಾರ್‌ರ ಖಾಸಗಿ ಬದುಕಿನ ಕುರಿತು ಸುದೀಪ್ ಕೇಳಿದ ಪ್ರಶ್ನೆಗಳು, ಶಿವಣ್ಣನನ್ನು ಅನುಮಾನಿಸುವಂತೆ ಮಾಡಿವೆ. ಅಲ್ಲದೇ ಈ ಮೂಲಕ ಅವರು ಅವಮಾನವನ್ನೂ ಮಾಡಿದ್ದಾರೆ ಅನ್ನುವ ಮಾತು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಇದೇ ಸಂದರ್ಭದಲ್ಲಿ ಇಬ್ಬರೂ ಒಟ್ಟಾಗಿ ಸಿನಿಮಾ ಮಾಡುತ್ತೇವೆ ಅಂದಿದ್ದಾರೆ. ನಿರ್ದೇಶಕ ಪ್ರೇಮ್ ಮತ್ತು ನಿರ್ಮಾಪಕ ಮನೋಹರ್ ಹೆಣೆದ ಬಲೆಗೆ ಇಬ್ಬರೂ ಬಲಿಪಶು ಆಗಿದ್ದಾರೆ.

ಸದ್ಯ ನಿರ್ಮಾಪಕ ಮನೋಹರ್ ವಿಧಾನ ಪರಿಷತ್ ಚುನಾವಣೆಗೆ ನಿಂತಿದ್ದಾರೆ. ಅವರಿಗೆ ಈಗ ಪ್ರಚಾರ ಬೇಕು. ಹೀಗಾಗಿಯೇ ಜೋಗಿ ಪ್ರೇಮ್‌ರನ್ನು ಮುಂದಿಟ್ಟುಕೊಂಡು ಸಿನಿಮಾ ಮಾಡುವುದಾಗಿ ಘೋಷಿಸಿದರು. ಜಾಸ್ತಿ ಸಂಭಾವನೆಯ ಆಸೆ ತೋರಿಸಿ ಪ್ರೇಮ್ ಕೂಡ ಇಬ್ಬರನ್ನೂ ಸೇರಿಸಿದ್ದಾರೆ. ಚುನಾವಣೆ ಮುಗಿದ ನಂತರವಷ್ಟೇ ಸಿನಿಮಾದ ಹಣೆಬರಹ ತಿಳಿಯಲಿದೆ.

ಈ ಹಿಂದೆ ಮನೋಹರ್ ಅಮ್ಮ ಹೆಸರಿನ ಸಿನಿಮಾ ಘೋಷಿಸಿದ್ದರು. ಶೂಟಿಂಗ್ ಶುರುವಾಗಿ ಎರಡೂವರೆ ವರ್ಷ ಕಳೆದಿವೆ. ಈವರೆಗೂ ಚಿತ್ರೀಕರಣ ಮುಗಿದಿಲ್ಲ, ಆಗಲೂ ಚುನಾವಣೆ ಇತ್ತು, ಪ್ರಚಾರವೂ ಸಿಕ್ಕಿತ್ತು. ಅದೇ ಫಾರ್ಮುಲಾವನ್ನು ಈಗಲೂ ಉಪಯೋಗಿಸುತ್ತಿದ್ದಾರೆ.



ಮುಗಿಯದ ಕೋಳಿ



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 266764
Fax : 26604536, E-mail :lankesh70@rediffmail.com